

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 20 ಸಂಚಿಕೆ 2-3

ಜನವರಿ 5-18, 1998
ಬೆಲೆ ರೂ. 3.00

"ಭವಿಷ್ಯದ ಸವಾಲೆದುರಿಸಲು ಸಜ್ಜಾಗೋಣ.."

ಬರಲಿರುವ ದಿನಗಳು ಅಪಾಯದ ಅವಧಿಯೂ ಆಗಬಹುದು. ಜತೆಗೇ ಪ್ರಜಾಸತ್ತಾತ್ಮಕ ಚಳುವಳಿಯನ್ನು ತೀವ್ರವಾಗಿ ಅಭಿವೃದ್ಧಿಗೊಳಿಸುವ ಕಾಲವೂ ಆಗಬಹುದು. ಅಪಾಯವನ್ನು ಮೆಟ್ಟಿ ನಿಲ್ಲಲು ಹಾಗೂ ಪ್ರಜಾಪ್ರಭುತ್ವ ಚಳುವಳಿಯನ್ನು ತೀವ್ರಗೊಳಿಸಲು ಪಕ್ಷವನ್ನು ಬಲಪಡಿಸುವುದು ತೀರಾ ಅಗತ್ಯ.

... ಕೋಲಾರದಲ್ಲಿ ಡಿಸೆಂಬರ್ 30 ರಿಂದ ಜನವರಿ 2 ವರೆಗೆ ನಡೆದ ಸಿ.ಪಿ.ಐ.(ಎಂ)ನ 16 ನೇ ಕರ್ನಾಟಕ ರಾಜ್ಯ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಕಾಂ|| ಪಿ.ರಾಮಚಂದ್ರನ್ ಪಕ್ಷದ ಮುಂದಿರುವ ಸವಾಲಿನ ಬಗ್ಗೆ ಈ ರೀತಿಯಾಗಿ ಎಚ್ಚರಿಸಿದರು.

ಲೋಕಸಭೆ ಚುನಾವಣೆ ನಡೆಯಲಿರುವ ಪ್ರಸ್ತುತ ಸನ್ನಿವೇಶದಲ್ಲಿ ಜನಸಾಮಾನ್ಯರು ರಾಜಕೀಯದ ಬಗ್ಗೆ ಹೆಚ್ಚೆಚ್ಚು ಮಾತನಾಡುತ್ತಾರೆ. ಪುಟ್ಟ ಹಳ್ಳಿಯ ಸಣ್ಣ ಚಹಾ ಅಂಗಡಿಯಿಂದ ಹಿಡಿದು ದೊಡ್ಡ ದೊಡ್ಡ ಪಟ್ಟಣಗಳ ಭಾರೀ ವಾಣಿಜ್ಯ ಸಂಕೀರ್ಣಗಳವರೆಗೆ ಈ ರಾಜಕೀಯ ಚರ್ಚೆ ವ್ಯಾಪಿಸಿರುತ್ತದೆ. ಈ ಸಂದರ್ಭದಲ್ಲಿ ಬಳಸಿಕೊಂಡು ನಾವು ಜನತಾ ಪ್ರಜಾಪ್ರಭುತ್ವದ ವಿಚಾರಧಾರೆಯನ್ನು ಜನರ ಬಳಿಗೆ ಒಯ್ಯಬೇಕು. ದೇಶ ಬಿಕ್ಕಟ್ಟಿನಿಂದ ಪಾರಾಗಬೇಕಾದರೆ ಪಕ್ಷ, ದುಡಿಯುವ ಜನರ ಆಂದೋಲನ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕು. ಇದು ನಮ್ಮ ರಾಜಕೀಯ ಕರ್ತವ್ಯವಾಗಿದ್ದು ಇದೇ ಈ ಸಮ್ಮೇಳನದ ಮುಖ್ಯ ರಾಜಕೀಯ ನಿರ್ದೇಶನ ಎಂದು ಕಾಂ|| ಪಿ.ಆರ್.ಸಿ. ಒತ್ತು ಕೊಟ್ಟು ಹೇಳಿದರು.

ಮಾರ್ಕ್ಸ್‌ವಾದಕ್ಕೆ ಹೊಸ ಜೀವ

ಬಂಡವಾಳಶಾಹಿ ವ್ಯವಸ್ಥೆ ಎದುರಿಸುತ್ತಿರುವ ಬಿಕ್ಕಟ್ಟನ್ನು ಅವರು ಪ್ರಸ್ತಾಪಿಸಿದರು. ಬಂಡವಾಳಶಾಹಿ ವ್ಯವಸ್ಥೆಯ ವಕ್ತಾರರೇ ಇದನ್ನು ಒಪ್ಪಿಕೊಳ್ಳುತ್ತಾರೆ. ಇದು ಕಮ್ಯುನಿಸ್ಟರ ವಿಶ್ಲೇಷಣೆ ಮಾತ್ರವೇ ಅಲ್ಲ, ವಾಸ್ತವ ಸ್ಥಿತಿ ಎನ್ನುವುದಕ್ಕೆ ರಾಜ್ಯ ಸಮ್ಮೇಳನ ನಡೆಯುತ್ತಿದ್ದ ಕಾಲಾವಧಿಯಲ್ಲಿ ಇಂಗ್ಲೀಷ್ ಪತ್ರಿಕೆಯೊಂದರಲ್ಲಿ ಪ್ರಕಟವಾದ ಲೇಖನವೊಂದನ್ನು ಪಿ.ಆರ್.ಸಿ ಉದ್ಧರಿಸಿದರು.

ಜಾಗತೀಕರಣ ಮತ್ತು ಉದಾರೀಕರಣ ಹೊಸ ಯುಗವನ್ನೇ ಪ್ರಾರಂಭಿಸುತ್ತವೆ ಎಂಬ ನಿರೀಕ್ಷೆ ಹುಸಿಯಾಗಿದೆ, ಮಾರ್ಕ್ಸ್‌ವಾದಕ್ಕೆ ಹೊಸ ಜೀವ ಸಿಗುತ್ತಿದೆ ಎಂಬುದು ಈ ಲೇಖನದ ಸಾರಾಂಶ. ಅದನ್ನು ಬರೆದವರು ಅಮೆರಿಕದ ಆಳುವ ವಲಯಗಳ ಒಬ್ಬ ಬುದ್ಧಿಜೀವಿ. ಆತನ ಹೆಸರು ಆರ್ಥರ್ ಶ್ಲೆಸಿಂಗರ್.

ಶೋಷಕ ವ್ಯವಸ್ಥೆಯ ಸ್ವರೂಪದ ಬಗ್ಗೆ ಕಮ್ಯುನಿಸ್ಟರ ವಿಶ್ಲೇಷಣೆಯನ್ನು ಈ ಲೇಖನ ಪುಷ್ಟೀಕರಿಸುತ್ತದೆ ಎಂದು ಪಿ.ಆರ್.ಸಿ.ಹೇಳಿದರು. ಪಕ್ಷದ 14ನೇ ಮಹಾಧಿವೇಶನ ದಲ್ಲಿ ಧ್ವಜಾರೋಹಣ ಮಾಡಿದ ಕಾಂ|| ಎಂ. ಬಸವಪುನ್ನಯ್ಯ ಮಾಡಿದ್ದ ಭಾಷಣವನ್ನು ಅವರು ಸ್ಮರಿಸಿಕೊಂಡರು. ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಿದ್ದರಿಂದ ಬಂಡವಾಳಶಾಹಿ ವ್ಯವಸ್ಥೆಯೇ ಉತ್ತಮವಾದುದು, ಅದುವೇ ಮೇಲುಗೈ ಪಡೆದಿದೆ ಎಂದು ಸಾಮ್ರಾಜ್ಯಶಾಹಿಗಳು ತುತ್ತೂರಿ ಊದುತ್ತಿದ್ದನ್ನು ದೃಢವಾಗಿ ತಿರಸ್ಕರಿಸಿದ್ದ ಬಸವಪುನ್ನಯ್ಯ, ಅಂತಿಮವಾಗಿ ಸಮಾಜವಾದವೇ ಜಯಶಾಲಿಯಾಗುತ್ತದೆ ಎಂದು ಘೋಷಿಸಿದ್ದರು. ಅದೀಗ ನಿಜವಾಗುತ್ತದೆ ಎಂದು ಪಿ.ಆರ್.ಸಿ. ಹೇಳಿದರು.

21ನೇ ಶತಮಾನ ಕ್ರಾಂತಿಕಾರಿ ಹೋರಾಟಗಳ ಶತಮಾನವಾಗುತ್ತದೆ ಎಂದು ಅವರು ವಿಶ್ಲೇಷಿಸಿದರು. ದೇಶ ಬಿಕ್ಕಟ್ಟಿನತ್ತ ಸಾಗುತ್ತಿದೆ ಎಂದು 1964ರಿಂದಲೇ ನಮ್ಮ ಪಕ್ಷ ಹೇಳುತ್ತಿದೆ. ಪಕ್ಷದ ಕಾರ್ಯಕ್ರಮದಲ್ಲೇ ಇದನ್ನು ಸ್ಪಷ್ಟಪಡಿಸಲಾಗಿದೆ ಎನ್ನುವುದರತ್ತ ಪಿ.ಆರ್.ಸಿ. ಗಮನ ಸೆಳೆದರು.

ದೇಶ ಸರ್ವತೋಮುಖವಾದ ಅಂದರೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟಿಗೆ ಸಿಲುಕಿದೆ. ಸ್ವಾತಂತ್ರ್ಯದ ನಂತರ ಆಳುವ ವರ್ಗ ಅನುಸರಿಸಿದ ಬಂಡವಾಳಶಾಹಿ ಪಥದಿಂದಾಗಿ ಈ ಪರಿಸ್ಥಿತಿ ಉಂಟಾಗಿದೆ. ಹೊಸ ಯುಗ ಆರಂಭವಾಗಿದೆ ಎಂದು ಕಾಂಗ್ರೆಸ್ ಮತ್ತು ಸಿ.ಪಿ.ಐ.ನವರು ಹೇಳಿದ್ದರು. ಆದರೆ ನೈಜ ಪರಿಸ್ಥಿತಿ ಹಾಗಿಲ್ಲ ಎಂದು ಸಿಪಿಐ(ಎಂ) ಹೇಳಿತ್ತು

ದೇಶ ಎತ್ತ ಸಾಗುತ್ತಿದೆ....?

ದೇಶ ಯಾವ ದಿಕ್ಕಿನತ್ತ ಸಾಗ್ತಾ ಇದೆ ಎನ್ನುವುದು ಪ್ರತಿಯೊಬ್ಬರೂ ಕೇಳುವ ಪ್ರಶ್ನೆಯಾಗಿದೆ. ಎಲ್ಲ ರೀತಿಯ ಸಮಸ್ಯೆಗಳು ದೇಶವನ್ನು ಆವರಿಸಿವೆ. ಜಾತಿವಾದ-ಕೋಮುವಾದ ಹೆಚ್ಚುತ್ತಿದೆ. ಭ್ರಷ್ಟಾಚಾರ ಸರ್ವವ್ಯಾಪಿ ಆಗಿದೆ. ಅಪರಾಧಗಳ ಹೆಚ್ಚಳ ಆಗುತ್ತಿದೆ ಎಂದವರು ನುಡಿದರು.

ರಾಜಕೀಯ ಬಿಕ್ಕಟ್ಟು ತೀವ್ರಗೊಳ್ಳುತ್ತದೆ ಎಂಬ ಸಿ.ಪಿ.ಐ.(ಎಂ)ನ 15ನೇ ಮಹಾಧಿವೇಶನದ ಆತಂಕ ನಿಜವಾಗಿ ಪರಿಣಮಿಸಿದೆ. ಅಸ್ಥಿರತೆ ಅದರ ಪ್ರಮುಖ ಲಕ್ಷಣವಾಗಿದೆ ಎಂದು ಪಿ.ಆರ್.ಸಿ. ಹೇಳಿದರು. ಕಾಂಗ್ರೆಸ್ ಪಕ್ಷ ಅವನತಿ ಹೊಂದುತ್ತಿದೆ ಎಂದರು.

ಈ ಹಿನ್ನೆಲೆಯಲ್ಲಿ ಎಡ ಪ್ರಜಾಸತ್ತಾತ್ಮಕ ಪರ್ಯಾಯ ಬೆಳೆದು ಬರುವ ನಿರೀಕ್ಷೆಯಿತ್ತು. ಆದರೆ ಪ್ರತಿಗಾಮಿ, ಕೋಮುವಾದಿ ಪಕ್ಷ ಆ ಸ್ಥಾನವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಹೊಸ ಶಕ್ತಿಯ ಪ್ರತಿನಿಧಿಗಳು

ಆದರೂ ಪೂರ್ತಿ ನಿರಾಶರಾಗಬೇಕಾದ ಅಗತ್ಯವೇನಿಲ್ಲ ಎಂದು ಹೇಳಿದ ಕಾಂ|| ಪಿ.ಆರ್.ಸಿ. ಆಶಾವಾದಕ್ಕೆ ಕಾರಣವಾಗಿರುವ ಕೆಲವು ಅಂಶಗಳನ್ನು ವಿವರಿಸಿದರು.

ಆಳುವ ಪ್ರಮುಖ ಪಕ್ಷದ ಅವನತಿಯ ಬೆನ್ನಲ್ಲೇ ಅನೇಕ ಪ್ರಾದೇಶಿಕ ಮತ್ತು ರಾಜ್ಯ ಮಟ್ಟದ ಪಕ್ಷಗಳು ಬೆಳೆದು ಬರುತ್ತಿವೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯತ್ವ ಹಾಗೂ ಅವುಗಳ ಚಟುವಟಿಕೆಗಳು ಒಳ್ಳೆಯ ದಿಕ್ಸೂಚಿಯಾಗಿದೆ. ಮೂರು ರಾಜ್ಯಗಳಲ್ಲಿ ಎಡ ಮತ್ತು ಎಡ-ಪ್ರಜಾಪ್ರಭುತ್ವ ರಂಗ

ಪುಟ 12 ನೋಡಿ

20 ಲಕ್ಷ ರೂ. ಚುನಾವಣಾ ನಿಧಿಗೆ ಕರೆ

ಕೋಲಾರದಲ್ಲಿ ಡಿಸೆಂಬರ್ 30ರಿಂದ ಜನವರಿ 2 ರವರೆಗೆ ನಡೆದ ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ಒಂದು ನಿರ್ಣಯ ಮುಂಬರುವ 12ನೇ ಲೋಕಸಭಾ ಚುನಾವಣೆಗಳಲ್ಲಿ ಭ್ರಷ್ಟ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಹಾಗೂ ಕೋಮುವಾದಿ ಬಿಜೆಪಿಯನ್ನು ಸೋಲಿಸಬೇಕು ಎಂದು ರಾಜ್ಯದ ಜನತೆಯಲ್ಲಿ ಮನವಿ ಮಾಡಿದೆ.

ಕೇಂದ್ರದಲ್ಲಿ ಸಂಯುಕ್ತ ರಂಗದ ಸರ್ಕಾರದ ಬರುವಂತಾಗಲು ಮತ್ತು ಅದು ಜನಪರವಾಗಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುವಂತಾಗಲು ರಾಜ್ಯದ ಎಡ ಪ್ರಜಾಸತ್ತಾತ್ಮಕ - ಜಾತ್ಯಾತೀತ ಪಕ್ಷಗಳ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಚುನಾಯಿಸಬೇಕೆಂದು ರಾಜ್ಯದ ಮತದಾರರಲ್ಲಿ ನಿರ್ಣಯ ಮನವಿ ಮಾಡುತ್ತದೆ.

ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಪಕ್ಷದ ಎಲ್ಲ ಸಮಿತಿಗಳು, ಶಾಖೆಗಳು ಮತ್ತು ಸದಸ್ಯರು ತಕ್ಷಣದಿಂದ ಕೆಲಸಕ್ಕೆ ಇಳಿಯಬೇಕೆಂದೂ, ಪಕ್ಷದ ಚುನಾವಣಾ ನಿಧಿಗಾಗಿ 20 ಲಕ್ಷ ರೂ. ಸಂಗ್ರಹ ಮಾಡಬೇಕೆಂದು ಸಮ್ಮೇಳನ ತೀರ್ಮಾನಿಸಿದೆ.



ಕಾಂಗ್ರೆಸ್ ತನ್ನ ಅವನತಿಗೆ ತನ್ನ ನೀತಿಗಳು, ವರ್ತನೆಗಳು ಕಾರಣವೆಂದು ಇನ್ನೂ ಅರಿಯದ ಒಬ್ಬ ವ್ಯಕ್ತಿಯ ಮೊರೆ ಹೊಕ್ಕಿದೆ. ಬಿಜೆಪಿ ಇದೇ ತನಗೆ ಅತ್ಯುತ್ತಮ ಅವಕಾಶವೆಂದು ಎಲ್ಲಾ ನೀತಿ-ನಿಯಮಗಳನ್ನು ಗಾಳಿಗೆ ತೂರಿ ಎಲ್ಲೆಲ್ಲಿ ಯಾವ-ಯಾವ ಭ್ರಷ್ಟ, ಸಮಯಸಾಧಕ ಗುಂಪುಗಳು, ಪಕ್ಷಗಳು ಸಿಗುತ್ತವೋ ಅವುಗಳೆಲ್ಲದರೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದೆ. ಇಂತಹ ಸನ್ನಿವೇಶದಲ್ಲಿ ಅತ್ಯುನ್ನತ ರಾಜಕೀಯ ವಿಶ್ವಾಸಾರ್ಹತೆಯನ್ನು ಬೆಳೆಸಿಕೊಂಡಿರುವ ಎಡಶಕ್ತಿಗಳು ಏನು ಮಾಡಬೇಕು? ಈ ಸವಾಲನ್ನು ಸ್ವೀಕರಿಸಬೇಕು, ಮೂರನೇ ಜಗತ್ತಿನ ಎಲ್ಲೆಡೆ ಜಾಗತೀಕರಣದ ಧಾಳಿಗಳ ವಿರುದ್ಧ ಎದ್ದು ಬರುತ್ತಿರುವ ಪ್ರತಿರೋಧಗಳಲ್ಲಿ ಭಾರತ ಒಂದು ಮಹತ್ವದ ಪಾತ್ರ ವಹಿಸುವಂತೆ ಮಾಡಬೇಕು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ.

ದೇಶದ ಪ್ರಜಾಪ್ರಭುತ್ವ ಆಂದೋಲನ ಸವಾಲನ್ನು ಸ್ವೀಕರಿಸಬೇಕಾಗಿದೆ

ಹರ್ಕಿಶನ್ ಸಿಂಗ್ ಸುರ್ಜಿತ್

ಇಂದು ಹಾಗೂ ಮುಂಬರುವ ತಿಂಗಳುಗಳಲ್ಲಿ ದೇಶದ ಪ್ರಜಾಪ್ರಭುತ್ವ ಆಂದೋಲನ ಗಂಭೀರ ಸವಾಲುಗಳನ್ನು ಎದುರಿಸಬೇಕಾಗಿದೆ. ಸ್ವಾತಂತ್ರ್ಯದ ನಂತರ ಒಂದು ಕೈಗಾರಿಕಾ ಆಧಾರವನ್ನು ರಚಿಸಿದರೂ ದೇಶದ ನಿಜವಾದ ಒಟ್ಟಾರೆ ಅಭಿವೃದ್ಧಿ ಸಾಧಿಸುವಲ್ಲಿ ನಾವು ವಿಫಲರಾಗಿದ್ದೇವೆ. ಜನಗಳ ಜೀವನ ಪರಿಸ್ಥಿತಿಗಳಲ್ಲಿ ನಿರೀಕ್ಷಿತ ಬದಲಾವಣೆ ತರುವಲ್ಲಿ ವಿಫಲರಾಗಿದ್ದೇವೆ - ಆರ್ಥಿಕ ರಂಗದಲ್ಲಿ ಮಾತ್ರವೇ ಅಲ್ಲ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ರಂಗಗಳಲ್ಲಿ ಕೂಡಾ. ಹೀಗೆ ಐವತ್ತು ವರ್ಷಗಳ ಹಿಂದೆ ಯಾವ ಆಕಾಂಕ್ಷೆಗಳಿಂದ ನಾವು ಪಯಣ ಆರಂಭಿಸಿದೆವೋ ವೈಜ್ಞಾನಿಕ ಮತ್ತು ಬಾಹ್ಯಾಕಾಶ ಪ್ರಯತ್ನಗಳನ್ನು ಬಿಟ್ಟು ಉಳಿದ ಯಾವುದೇ ವಲಯದಲ್ಲಿ ಆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ನಮಗೆ ಸಾಧ್ಯವಾಗಿಲ್ಲ. ಬದಲಿಗೆ ಅಸಮಾನತೆಗಳು ಬೆಳೆದಿವೆ. ವ್ಯಾಪಕ ಅಸಂತೃಪ್ತಿ ನಮ್ಮ ಸಮಾಜದ ಒಂದು ಪ್ರಮುಖ ಲಕ್ಷಣವಾಗಿ ಬಿಟ್ಟಿದೆ.

ಹೊಸದೊಂದು ಮೈಲಿಗಲ್ಲು

ಈಗಿನ ಸನ್ನಿವೇಶದಲ್ಲಿ ಎರಡು ಮುಖ್ಯ ಅಂಶಗಳು ಕಂಡುಬರುತ್ತಿವೆ. ಒಂದು, ರಾಜಕೀಯ ಅಧಿಕಾರದಲ್ಲಿ ಇದುವರೆಗೆ ಕಾಂಗ್ರೆಸ್ಸಿನ ಏಕಪಕ್ಷ ಆಳ್ವಿಕೆಯ ರೂಪದಲ್ಲಿ ಇದ್ದ ಗುತ್ತೇದಾರಿಕೆ ಕುಸಿದಿದೆ; ಸದ್ಯಕ್ಕೆ ಅದರ ಸ್ಥಾನದಲ್ಲಿ ಸಮ್ಮಿಶ್ರ ಸರಕಾರಗಳ ಯುಗ ಆರಂಭವಾಗಿದೆ. ಎರಡನೆಯದಾಗಿ, ಸ್ವಾತಂತ್ರ್ಯದ ಮೊದಲು ಮತ್ತು ನಂತರವೂ ನಮ್ಮ ಸಮಾಜದ ಅಡಿಗಲ್ಲಾಗಿರುವ ಜಾತ್ಯಾತೀತತೆ ಹ್ರಾಸಗೊಂಡಿದೆ. ಇದರಿಂದಾಗಿ ಈ ಹಿಂದೆ ಮೂಲೆ ಗೊತ್ತಲ್ಪಟ್ಟಿದ್ದ ಕೋಮುವಾದಿ ಶಕ್ತಿಗಳು ಮುಂಚೂಣಿಗೆ ಬರಲು, ಒಂದು ರಾಜಕೀಯ ಪಾತ್ರವನ್ನು ಕೂಡಾ ವಹಿಸಲು ಅವಕಾಶವಾಗಿದೆ. ನೆಹರೂರವರ ನಂತರ ಕಾಂಗ್ರೆಸ್ ಮುಖಂಡತ್ವ ಜಾತ್ಯಾತೀತತೆಯ ಆದರ್ಶವನ್ನು ಪೋಷಿಸಿ ಬೆಳೆಸಲಾಗಲೀ, ರಾಷ್ಟ್ರೀಯ ಮತ್ತು ಸಾಮಾಜಿಕ ಐಕ್ಯತೆಯಲ್ಲಿ ಅದರ ಮಹತ್ವವನ್ನು ಅರಿಯುವಂತೆ ಮಾಡುವುದರಲ್ಲಾಗಲೀ ಆಸಕ್ತಿ ವಹಿಸಲಿಲ್ಲ. ಆದ್ದರಿಂದಲೇ ಕಾಂಗ್ರೆಸ್ಸಿಗರು ಯಾವುದೇ ನಾಚಿಕೆಯಿಲ್ಲದೆ ಕಾಂಗ್ರೆಸ್ಸನ್ನು ತ್ಯಜಿಸಿ ಬಿಜೆಪಿಗೆ ಹೋಗುವುದನ್ನು ಕಾಣುತ್ತಿದ್ದೇವೆ.

ನಾಲ್ಕೂವರೆ ದಶಕಗಳ ಕಾಲ ರಾಷ್ಟ್ರೀಯ ಕಾಂಗ್ರೆಸ್ಸಿನ ಪರಂಪರೆಯ ಉತ್ತರಾಧಿಕಾರಿಗಳಾದ ಉತ್ತರ ಪ್ರದೇಶದ 22 ಕಾಂಗ್ರೆಸ್ಸಿಗರು ಬಿಜೆಪಿಗೆ ಪಕ್ಷಾಂತರ ಮಾಡಿದರು - ಕೇವಲ ಮಂತ್ರಿಗಳಾಗಿ ರಾಜ್ಯದ ಖಜಾನೆಯ ಲೂಟಿಯಲ್ಲಿ ಪಾಲುಗೊಳ್ಳಲು! ತಮ್ಮ ಪಕ್ಷಾಂತರಕ್ಕೆ ನೀಡಿದ ಬಹುಮಾನ ರಾಜ್ಯದ ಖಜಾನೆಯಿಂದ ಲೂಟಿ ಮಾಡಿದ್ದು ಎಂಬ ಸಂಗತಿಯ ಪರಿವೆಯೇ ಅವರಿಗಿಲ್ಲ. ಇದಕ್ಕಿಂತ ಆಳವಾದ ಅವನತಿ ಬೇರಿರಲು ಸಾಧ್ಯವೇ? ಇನ್ನೂ 40 ಕಾಂಗ್ರೆಸ್ಸಿಗರು ಕೇಂದ್ರದಲ್ಲಿಯೂ ಇದನ್ನು ಪುನರಾವರ್ತಿಸಲು ಸಿದ್ಧರಿದ್ದರು - ಬಿಜೆಪಿ ಸೇರಿ ಕೇಂದ್ರದಲ್ಲಿ ಒಂದು ಪಕ್ಷಾಂತರಿಗಳ ಸರ್ಕಾರ ರಚಿಸುವ ಪ್ರಯತ್ನದಲ್ಲಿ ಭಾಗಿಗಳಾಗಲು!(ಇಲ್ಲಿ ಇನ್ನೂ ದೊಡ್ಡ ಬೆಲೆ ಗಿಟ್ಟಿಸಲು ಸಾಧ್ಯವಿತ್ತು ತಾನೆ) ಈಗ ಚುನಾವಣೆಗಳು ಅನಿವಾರ್ಯವಾದಾಗ ಈ ಅಲ್ಪ 'ರಾಜಕಾರಣಿಗಳು' ಒಬ್ಬೊಬ್ಬರಾಗಿ ತಮಗೆ ಅವಕಾಶ ದೊರೆಯಬಹುದೇನೋ ಎಂದು ಭಾವಿಸಿಕೊಂಡ ಕಡೆಗೆ ಓಡಲಾರಂಭಿಸಿದ್ದಾರೆ. ಅವರೆಲ್ಲರ ಉನ್ನತ 'ಉದ್ದೇಶ'ದ ಬೂಟಾಟಿಕೆಯ ಮಾತುಗಳ ಹಿಂದೆ ಇರುವುದು ಕೇವಲ ವಿಶ್ವಾಸಘಾತುಕವಷ್ಟೆ.

ಈ ಅವನತಿಯನ್ನು ತಡೆಯಲಾರದೆ ಕಾಂಗ್ರೆಸ್ ಈಗ ತನ್ನ ಕಾಪಾಡಲು ಸೋನಿಯಾ ಗಾಂಧಿಯವರ ಮೊರೆ ಹೊಕ್ಕಿದೆ - ವ್ಯಕ್ತಿಗಳಲ್ಲ, ನೀತಿಗಳೇ ಮುಖ್ಯ ಎಂಬ ಸಂಗತಿಯನ್ನು ಮರೆತು, ತಮ್ಮ ಆರ್ಥಿಕ ನೀತಿಗಳಿಂದಾಗಿಯೇ ಜನರನ್ನು ಸುಲಿದು ದೇಶೀ-ವಿದೇಶೀ ಕಂಪನಿಗಳನ್ನು ಶ್ರೀಮಂತಗೊಳಿಸುತ್ತಿದ್ದಾರೆ. ನಮ್ಮ ಸಾರ್ವಭೌಮತೆಯನ್ನು ಸಾಮ್ರಾಜ್ಯಶಾಹಿ ಹಿತಾಸಕ್ತಿಗಳಿಗೆ ಒತ್ತೆಯಿಡುವ ಪರಿಸ್ಥಿತಿ ಬಂದಿದೆ, ಹಲವಾರು ಭ್ರಷ್ಟಾಚಾರಗಳಿಂದ ತಮ್ಮ ಪ್ರತಿಷ್ಠೆಗೆ ಮಸಿ ಬಿದ್ದಿದೆ, ದೇಶಕ್ಕೆ ಜನತೆಗೆ ತಮ್ಮನ್ನು ಸಮರ್ಪಿಸಿಕೊಳ್ಳದ್ದರಿಂದ ಇಂತಹ ಸ್ಥಿತಿ ಏರ್ಪಟ್ಟಿದೆ ಎಂಬುದನ್ನು ಅವರು ಮರೆತುಬಿಟ್ಟಿದ್ದಾರೆ.

ಇವೆಲ್ಲದರ ಪರಿಣಾಮವಾಗಿ ಕೋಮುವಾದಿ ಶಕ್ತಿಗಳು ತಲೆಯೆತ್ತಿ ದೇಶದ ರಾಜಕೀಯ ಮತ್ತು ಸಾಮಾಜಿಕ ಹಂದರಕ್ಕೆ ಗಂಭೀರ ಸವಾಲು ಹಾಕುತ್ತಿವೆ. ಎಡಪಂಥೀಯರು ಒಂದು ಶಕ್ತಿಯಾಗಿ ಬೆಳೆದಿರುವಲ್ಲಿ ಮಾತ್ರವೇ ಈ ಕೋಮುವಾದಿ ಶಕ್ತಿಗಳು ತಲೆ ಎತ್ತಲಾಗಿಲ್ಲ. ಈ ಕೋಮುವಾದಿ ಶಕ್ತಿಗಳು ಯಾವುದೇ ರಾಜಕೀಯ ಅಥವಾ ಸಾಮಾಜಿಕ ನೀತಿಗಳಿಲ್ಲದ, ಕೇವಲ ಹೇಗಾದರೂ ಮಾಡಿ ಅಧಿಕಾರ ಗಿಟ್ಟಿಸುವ ಏಕೈಕ ಗುರಿಹೊಂದಿರುವ ಶಕ್ತಿಗಳು ಎಂಬುದನ್ನು ಸ್ವತಃ ತೋರಿಸಿಕೊಟ್ಟಿವೆ. ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟಿನ ಹಾಗೂ ಅದರ ಈ ಹಿಂದಿನ ಕೃತ್ಯಗಳಿಂದ ಎಲ್ಲೆಡೆ ಉಂಟಾಗಿರುವ ಸಿನಿಕತನ ಮತ್ತು ಅನೈಕ್ಯತೆಯ ಸಂಪೂರ್ಣ ಪ್ರಯೋಜನ ಗಿಟ್ಟಿಸುವ ಅವಕಾಶವಿದ್ದು ಅಧಿಕಾರ ಗದ್ದುಗೆ ತಮಗೆ ಹಿಂದೆಂದೂ ಇಲ್ಲದಷ್ಟು ಸಮೀಪವಿದೆ ಎಂದು ಈ ಕೋಮುವಾದಿ ಶಕ್ತಿಗಳು ಭಾವಿಸಿವೆ. ಇದರಿಂದಾಗಿ ಭ್ರಷ್ಟಾಚಾರ, ಪಕ್ಷಾಂತರ, ಸಮಯಸಾಧಕತೆ ಇತ್ಯಾದಿ ಎಲ್ಲವೂ 'ಸಮರ್ಥನೀಯ ನೀತಿಗಳು' ಎಂದು ಯಾವುದೇ ನಾಚಿಕೆಯಿಲ್ಲದೆ ಅವು ಸಾರುತ್ತಿವೆ.

ತಾವು ಏಕಾಂಗಿಯಾಗಿ ಕೇಂದ್ರದಲ್ಲಿ ಬಹುಮತ ಪಡೆದು ಅಧಿಕಾರ ನಡೆಸುವುದು ಎಂದಿಗೂ ಸಾಧ್ಯವಿಲ್ಲ ಎಂದು ಅರಿತಿರುವ ಅವರು ಎಲ್ಲೆಲ್ಲಿ ತಮ್ಮಂತಹ ಸಮಯ ಸಾಧಕ ಹಾಗೂ ಭ್ರಷ್ಟ ಗುಂಪುಗಳು ಅಥವಾ ಪಕ್ಷಗಳು ಸಿಗುತ್ತವೋ, ಅಲ್ಲೆಲ್ಲಾ ಮೈತ್ರಿಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಯಾವುದೇ ನೀತಿ-ನಿಯಮ, ಸಿದ್ಧಾಂತದ ಪರಿವೆಯೂ ಅವರಿಗಿಲ್ಲ. ಅವರ ಮಿತ್ರರನ್ನು ನೋಡಿ

- ಪಂಜಾಬಿನಲ್ಲಿ ಬಾದಲ್‌ರವರ ಶಿರೋಮಣಿ ಅಕಾಲಿದಳ
- ಹರ್ಯಾಣದಲ್ಲಿ ಬನ್ಸಿಲಾಲ್‌ರ ಹರ್ಯಾಣ ವಿಕಾಸ ಪಾರ್ಟಿ
- ಉತ್ತರ ಪ್ರದೇಶದಲ್ಲಿ ಆರಂಭದಲ್ಲಿ ಕಾಂಶಿರಾಮ್‌ರವರ ಬಿಎಸ್‌ಪಿ ಈಗ ಆ ಮೈತ್ರಿ ಮುರಿದುಬಿದ್ದಿದೆ.
- ಬಿಹಾರದಲ್ಲಿ ಜಾರ್ಜ್‌ಫರ್ನಾಂಡೀಸ್‌ರವರ ಸಮತಾ ಪಾರ್ಟಿ
- ತಮಿಳುನಾಡಿನಲ್ಲಿ ಜಯಲಲಿತಾರ ಎಐಎಡಿಎಂಕೆ ಮತ್ತು ಆಕೆಯ ವಿಚಿತ್ರ ಕೂಟ - ಕುಖ್ಯಾತ ಸುಬ್ರಮಣ್ಯ ಸ್ವಾಮಿಯ ಜನತಾ ಪಾರ್ಟಿ, ಗೋಪಾಲಸ್ವಾಮಿಯ ಎಂಡಿಎಂಕೆ, ಪ್ರೇಮದಾಸರ ಪಿ.ಎಂ.ಕೆ. ಇತ್ಯಾದಿ.
- ಆಂಧ್ರದಲ್ಲಿ ಲಕ್ಷ್ಮಿ ಪಾರ್ವತಿ ಗುಂಪು.
- ಒರಿಸ್ಸಾದಲ್ಲಿ ನವೀನ್ ಪಟ್ನಾಯಕ್‌ರ ಬಿಜು ಜನತಾದಳ
- ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್
- ಮಹಾರಾಷ್ಟ್ರದಲ್ಲಿ ಬಾಳಾಠಾಕ್ರೆಯ ಶಿವಸೇನೆ
- ಕೇರಳದಲ್ಲಿ ಹಿಂದು ಮುನ್ನಾಣಿ
- ಕರ್ನಾಟಕದಲ್ಲಿ ಹೆಗ್ಡೆಯ ಲೋಕಶಕ್ತಿ

ವಿಶ್ವವ್ಯಾಪಿ ಪ್ರತಿರೋಧದಲ್ಲಿ ಭಾರತದ ಪಾತ್ರ

ಈ ಅವನತಿ, ಸಮಯ ಸಾಧಕತನಗಳ ನಡುವೆ ಎಡಶಕ್ತಿಗಳು ಅತ್ಯಂತ ವಿಶ್ವಾಸಾರ್ಹ ರಾಜಕೀಯ ಶಕ್ತಿಯಾಗಿ ಮೂಡಿ ಬಂದಿವೆ.

ಈ ಎಲ್ಲಾ ವರ್ಷಗಳಲ್ಲಿ ದೇಶದ ಐಕ್ಯತೆ ಹಾಗೂ ಸಮಗ್ರತೆಯ ರಕ್ಷಣೆಗಾಗಿ, ಉಗ್ರಗಾಮಿಗಳು ಹಾಗೂ ವಿದೇಶಿ ಹಸ್ತಕ್ಷೇಪಗಳ ವಿರುದ್ಧ - ಅದು ಪಂಜಾಬಿನಲ್ಲಾಗಲೀ, ಕಾಶ್ಮೀರದಲ್ಲಾಗಲೀ, ಈಶಾನ್ಯ ಭಾರತದಲ್ಲಾಗಲೀ - ನಿರಂತರ ಹೋರಾಟ ನಡೆಸಿದ ಶಕ್ತಿಗಳೆಂದರೆ ಎಡಪಂಥೀಯರೇ. ಈ ಹೋರಾಟದಲ್ಲಿ ಅವರು ತಮ್ಮ ಹಲವು ಅಮೂಲ್ಯ ಕಾರ್ಯಕರ್ತರನ್ನು ಕಳಕೊಂಡಿದ್ದಾರೆ. ಇದರಿಂದಾಗಿ ಬೇರೆಯವರಿಗೆ ಹೋಲಿಸಿದರೆ ಬಲ ಕಮ್ಮಿಯಿದ್ದರೂ ಎಡಪಕ್ಷಗಳ ರಾಜಕೀಯ ಮಧ್ಯಪ್ರವೇಶ ಹೆಚ್ಚಿದೆ. ಮೂರನೇ ರಂಗದ ಪರಿಕಲ್ಪನೆ ಹಾಗೂ ಸಂಯುಕ್ತ ರಂಗದ ಸ್ಥಾಪನೆಯ ಹಿಂದಿದ್ದ ಚೈತನ್ಯ ಶಕ್ತಿಗಳೆಂದರೆ ಈ ಎಡಶಕ್ತಿಗಳೇ. ಈ ಹಿಂದೆ ಗಳಿಸಿದ ರಾಜಕೀಯ ವಿಶ್ವಾಸಾರ್ಹತೆಯಿಂದಾಗಿ ಎಡಶಕ್ತಿಗಳು ಈಗ ಜಾತ್ಯಾತೀತ ಶಕ್ತಿಗಳ ರಕ್ಷಕರಾಗಿ ಹೊರಹೊಮ್ಮಿವೆ.

ಈ ರೀತಿಯ ಕೋಮುವಾದ -ವಿರೋಧಿ, ಬಲಪಂಥೀಯ ವಿರೋಧಿ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ದದ ಹೋರಾಟ ಒಂದು ದೇಶಕ್ಕೆ ಅಥವಾ ಒಂದು ಖಂಡಕ್ಕೇ ಸೀಮಿತವಾಗಿಲ್ಲ ಎಂಬುದನ್ನು ಗಮನಿಸಬೇಕು. ವಿಶ್ವಾದ್ಯಂತ ಅಭಿವೃದ್ಧಿ ಹೊಂದಿದ ದೇಶಗಳಲ್ಲೂ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ಜಾಗತೀಕರಣದ ಭರದ ವಿರುದ್ಧ ಜನಗಳನ್ನು ಧಾರ್ಮಿಕ ಹಾಗೂ ಜನಾಂಗೀಯ ನೆಲೆಯಲ್ಲಿ ವಿಭಜಿಸುವ ಪ್ರಯತ್ನಗಳ ವಿರುದ್ಧ ಪ್ರತಿರೋಧ ಹೆಚ್ಚುತ್ತಿದೆ.

ಕಾರ್ಮಿಕ ವರ್ಗ ಈ ಹೋರಾಟದ ಮುಂಚೂಣಿಯಲ್ಲಿದ್ದರೂ ರೈತಾಪಿ ವರ್ಗಗಳು ಮತ್ತು ಮಧ್ಯಮ ವರ್ಗಗಳು ಈ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ. ಎಲ್ಲೆಡೆ ದೊಡ್ಡ ಮುಷ್ಕರಗಳು ನಡೆಯುತ್ತಿವೆ. ದಕ್ಷಿಣ ಕೋರಿಯಾ, ಜರ್ಮನಿ ಹಾಗೂ ಇಸ್ರೇಲಿನಲ್ಲಿನ ಸಾರ್ವತ್ರಿಕ ಮುಷ್ಕರ ಇತ್ತೀಚಿನ ಉದಾಹರಣೆಗಳಷ್ಟೆ. ತಮ್ಮ ಸಾಮ್ರಾಜ್ಯಶಾಹಿ ಸರಕಾರಗಳ ಬೆಂಬಲದಿಂದ ಪ್ರಾಬಲ್ಯ ಮೆರೆಸುವ ಬಹುರಾಷ್ಟ್ರೀಯ ಕಂಪನಿಗಳ ಧಾಳಿಗಳಿಗೆ ಮುಖ್ಯವಾಗಿ ತುತ್ತಾಗುತ್ತಿರುವವರೆಂದರೆ ಏಶ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾದ ಮೂರನೇ ಜಗತ್ತಿನ ದೇಶಗಳು ಎಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ಈ ವಲಯದಲ್ಲಿ ಒಂದು ಪ್ರಮುಖ ಶಕ್ತಿಯಾಗಿರುವ ಭಾರತಕ್ಕೆ ಈ ಸಾಮ್ರಾಜ್ಯಶಾಹಿ ಧಾಳಿಯನ್ನು ಎದುರಿಸುವ ಹೋರಾಟದಲ್ಲಿ ಒಂದು ಮಹತ್ವದ ಸ್ಥಾನವಿದೆ. ಕಳೆದ ವರ್ಷ ಸ್ವಲ್ಪ ಮಟ್ಟಿಗೆ ಭಾರತ ತನ್ನ ಪಾತ್ರವನ್ನು ವಹಿಸಿದೆ. ಆದರೆ ಅದೀಗ ಇನ್ನೂ ಹೆಚ್ಚಿನ ಕಾಣಿಕೆ ನೀಡಬೇಕಾಗಿದೆ.

ಮುಂಬರುವ ಸಮರ

ಮುಂಬರುವ ಚುನಾವಣೆಗಳಲ್ಲಿ ಒಂದೆಡೆ ಕಾಂಗ್ರೆಸ್ ಮತ್ತು ಅದು ಪ್ರತಿಪಾದಿಸುವ ಧೋರಣೆಗಳ ವಿರುದ್ಧ ಹೋರಾಡುವುದರೊಂದಿಗೇ ಬಿಜೆಪಿ ಅಧಿಕಾರಕ್ಕೆ ಬರದಂತೆ ಕೂಡಾ ನಾವು ತಡೆಯಬೇಕಾಗಿದೆ. ರಾಷ್ಟ್ರೀಯ ಆಂದೋಲನದ ಪರಂಪರೆಯನ್ನು ಎತ್ತಿ ಹಿಡಿಯಬೇಕಾಗಿದೆ. ಇಲ್ಲವಾದರೆ ನಮ್ಮ ಸ್ವಾತಂತ್ರ್ಯ ಹೋರಾಟದ ಸಾಧ್ಯತೆಗಳನ್ನು ಕಳೆದ ಐವತ್ತು ವರ್ಷಗಳಲ್ಲಿ ಹೋರಾಟಗಳ ಮೂಲಕ ಪಡೆದವುಗಳನ್ನೆಲ್ಲಾ ಕಳಕೊಳ್ಳಬೇಕಾದೀತು.

ಇದರಲ್ಲಿ ಎಡಶಕ್ತಿಗಳು ದಾರಿ ತೋರಬಲ್ಲವು, ದಾರಿ ತೋರಬೇಕು. ಸಂಯುಕ್ತರಂಗವನ್ನು ಬಹುಮತದಿಂದ ಚುನಾಯಿಸಬೇಕು. ಇದು ಸಾಧ್ಯವಾಗಬೇಕಾದರೆ ಎಲ್ಲಾ ರಂಗಗಳಲ್ಲಿ ಆರ್ಥಿಕ, ರಾಜಕೀಯ, ಸೈದ್ಧಾಂತಿಕ ರಂಗಗಳಲ್ಲೂ - ಹೋರಾಟ ನಡೆಸಬೇಕಾಗಿದೆ. ನಮ್ಮ ವಿರೋಧಿಗಳು ಮತಾಂಧತೆ, ಧರ್ಮ, ಮೂಢನಂಬಿಕೆ ಇತ್ಯಾದಿಗಳನ್ನೆಲ್ಲಾ ಬಳಸಿ ಭರದ ಧಾಳಿ ನಡೆಸುತ್ತಿದ್ದಾರೆ, ಈ ತಪ್ಪು ವಿಚಾರಗಳನ್ನು ಹರಡಿ ಜನಗಳನ್ನು ದಾರಿ ತಪ್ಪಿಸಲು, ಗೊಂದಲಮಯಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಈ ಸೈದ್ಧಾಂತಿಕ ಧಾಳಿಯನ್ನು ಎದುರಿಸಬೇಕಾದ್ದು ಅತೀ ಅಗತ್ಯ.

ಈ ಸನ್ನಿವೇಶದಲ್ಲಿ ಎಡ, ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳ ವಿಶಾಲ ಐಕ್ಯತೆ ಅಗತ್ಯವಾದರೂ ಇದರೊಂದಿಗೆ ಜನಗಳ ಮಧ್ಯಪ್ರವೇಶವೂ ಅಗತ್ಯ. ಸಾಮೂಹಿಕ ಹೋರಾಟಗಳು, ಮತಪ್ರದರ್ಶನಗಳು ಹಾಗೂ ಇತರ ಹಲವು ರೀತಿಯ ಕಾರ್ಯಾಚರಣೆಗಳೊಂದಿಗೆ ಇಂತಹ ಮಧ್ಯಪ್ರವೇಶ ನಡೆಯಬೇಕಾಗಿದೆ. ಕಳೆದ 18 ತಿಂಗಳಲ್ಲಿ ಸಂಯುಕ್ತ ರಂಗದಲ್ಲಿನ ನಮ್ಮ ಅನುಭವಗಳು ಇದರ ಅಗತ್ಯವನ್ನು ಎತ್ತಿತೋರಿವೆ. ಸಂಯುಕ್ತ ರಂಗದ ಪಕ್ಷಗಳ ಮಟ್ಟದಲ್ಲಿ ನಡೆಸುವ ಹೋರಾಟಗಳೊಂದಿಗೆ ಜನಸಮೂಹಗಳನ್ನು ತುರ್ತು ಸಮಸ್ಯೆಗಳ ಮೇಲೆ ಅಣಿನೆರೆಸಿ ಹೋರಾಟಗಳ ರಾಜಕೀಯ ಪ್ರಭಾವ ಇತಿಹಾಸದ ದಿಕ್ಕನ್ನು ಬದಲಿಸುವಂತೆ ಮಾಡಬೇಕಾಗಿದೆ.

ಜನಗಳಲ್ಲಿ ದೇಶಪ್ರೇಮಿ ಭಾವನೆಗಳಿಗೇನೂ ಕೊರತೆಯಿಲ್ಲ ಎಂದು ನಾವು ಮತ್ತೆ-ಮತ್ತೆ ಹೇಳಿಕೊಂಡು ಬಂದಿದ್ದೇವೆ. ಆದ್ದರಿಂದಲೇ ಅವರು ಸಂಯುಕ್ತ ರಂಗಕ್ಕೆ ಸ್ಪಂದಿಸಿದ್ದಾರೆ. ಅದರ ಘೋಷಣೆಗಳ ಬೆಂಬಲಕ್ಕೆ ನಿಂತಿದ್ದಾರೆ. ನಮ್ಮ ಕೆಲಸಗಳ ಮೂಲಕ ಜನಸ್ಪಂದನವನ್ನು ವಿಸ್ತರಿಸಲು, ಆಳಗೊಳಿಸಲು, ತನ್ಮೂಲಕ ಸಂಯುಕ್ತ ರಂಗಕ್ಕೆ ಬೆಂಬಲ ಕ್ರೋಢೀಕರಿಸುವ ಸವಾಲು ನಮ್ಮ ಮುಂದಿದೆ.



ಹೊಸ ಆತ್ಮ ವಿಶ್ವಾಸ ಮೂಡಿಸಿದ ಜನ ಸಾಗರ



ಡಿಸೆಂಬರ್ 30, 1997. ಕೋಲಾರದ ಬೀದಿ-ಬೀದಿಗಳು ಉರಿಬಿಸಿಲಿನಲ್ಲೂ ಹುರುಪಿನಿಂದ ಪುಟಿದೆದ್ದವು. ಕೆಂಬಾವುಟಗಳನ್ನು, ಕೆಂಪು ಪತಾಕೆಗಳನ್ನು ಹೊತ್ತು ಅಲೆ-ಅಲೆಯಾಗಿ ಸಾಗಿದ ಜನಸಾಗರ ಈ ಪುಟ್ಟ ನಗರಕ್ಕೆ ಇತ್ತೀಚಿನ ವರ್ಷಗಳಲ್ಲಿ ಒಂದು ಅಪೂರ್ವ ದೃಶ್ಯ. ಎರಡು ತಿಂಗಳಿಗೂ ಹೆಚ್ಚು ಕಾಲ ಗೋಡೆ- ಗೋಡೆಗಳಲ್ಲಿ, ವೃತ್ತಗಳಲ್ಲಿನ ಕಟೌಟ್ ಗಳಲ್ಲಿ, ಬ್ಯಾನರ್‌ಗಳಲ್ಲಿ, ಸ್ವಾಗತ ಕಮಾನುಗಳಲ್ಲಿ ರಾರಾಜಿಸುತ್ತಿದ್ದ ಜನಪರ ಘೋಷಣೆಗಳು, ಹೊಸ ನಾಡ ಕಟ್ಟುವ ಘೋಷಣೆಗಳು ಅಂದು ಬೀದಿ ಗಿಳಿದಂತಿತ್ತು. ಜೀವದುಂಬಿ ನಗರದಲ್ಲೆಲ್ಲಾ ಅವು ಹರಿದಾಡಿದವು.

ಡಿಸೆಂಬರ್ 30ರ ಬೆಳಿಗ್ಗಿನಿಂದಲೇ ಕೋಲಾರ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಬಂದು ಸೇರುತ್ತಿದ್ದರೆ ಮುನಿಸಿಪಲ್ ಮೈದಾನ ಕೆಂಪು ಸಾಗರವಾಗಲಾರಂಭಿಸಿತ್ತು.

ಮಧ್ಯಾಹ್ನದ ವೇಳೆ ಜನಸಾಗರ ಚಲಿಸಲಾರಂಭಿಸಿತು. “ವಿಶ್ವ ಕಾರ್ಮಿಕರೇ ಒಂದಾಗಿ” ಎಂದು ಕರೆ ನೀಡುವ ಗೋಳದ ಸ್ತಬ್ಧ ಚಿತ್ರ, ವಿದುರಾಶ್ವಥ ಹಾಗೂ ಕೆ.ಜಿ.ಎಫ್.ನಿಂದ ಹುತಾತ್ಮ ಜ್ಯೋತಿಗಳನ್ನು ಕಾಲ್ನಡಿಗೆಯಲ್ಲಿ ಹೊತ್ತು ತಂದ ಕೆಂಪು ಸ್ವಯಂ ಸೇವಕರು ಜ್ಯೋತಿಗಳೊಂದಿಗೆ ಮುಂದೆ ಹೊರಟರು. ಹಿಂದೆ 16 ಕೆಂಬಾವುಟ ಗಳನ್ನು ಶಿಸ್ತಿನಿಂದ ಹಿಡಿದ ಸ್ವಯಂ ಸೇವಕರು, ಕೆಂಪು ಸಮವಸ್ತ್ರದ ಮಹಿಳೆಯರು, ಪುರುಷರು, ಸಾಗರದ ಕಣ್ಣೂರಿಂದ ಬಂದ ಜನಪದ ಕಲಾವಿದರ ತಂಡ(ಡೊಳ್ಳು ತಂಡ), ಕೋಲಾರ ಜಿಲ್ಲೆಯ ಕೋಲಾಟಗಳ ತಂಡ, 250 ಹಲಗೆಗಳ ತಂಡ, ಸಂದೇಶಗಳನ್ನು ಹೊತ್ತ ಸಮ್ಮೇಳನದ ಐದು ಬ್ಯಾನರುಗಳನ್ನು ಎತ್ತಿ ಹಿಡಿದ ಸ್ವಯಂ ಸೇವಕರು, ಕೋಲಾರದ ಎಲ್ಲಾ ತಾಲೂಕುಗಳಿಂದ ಬಂದ ದುಡಿಯುವ ಜನರು- ಎಲ್ಲರೂ ಕೈಬೀಸಿ, ಹಾಡುತ್ತಾ, ಕುಣಿಯುತ್ತಾ, ಘೋಷಣೆ ಗಳನ್ನು ಕೂಗುತ್ತಾ ಸಾಗಿದರು ಬಹಿರಂಗ ಸಭೆಯ ತಾಣ ಮಿನಿ ಕ್ರೀಡಾಂಗಣ ದತ್ತ.

‘ಭ್ರಷ್ಟಾಚಾರವನ್ನು ವಿರೋಧಿಸಿ’, ‘ರಾಜಕಾರಣಿಗಳ ಕ್ರಿಮಿನಲ್‌ಗಳ ಸಂಚನ್ನು ವಿರೋಧಿಸಿ’, ಕೋಮುವಾದವನ್ನು ವಿರೋಧಿಸಿ’, ದೇಶದ ಐಕ್ಯತೆ- ಸಮಗ್ರತೆಯನ್ನು ರಕ್ಷಿಸಿ’, ‘ಸಾಮ್ರಾಜ್ಯ ಶಾಹಿಯನ್ನು ವಿರೋಧಿಸಿ’, ‘ಸ್ವಾವಲಂಬನೆ ಯನ್ನು ಎತ್ತಿ ಹಿಡಿಯಿರಿ’ ಎಂಬ ಎಲ್ಲರ ಗಮನ ಸೆಳೆಯುತ್ತಿದ್ದ ಬ್ಯಾನರುಗಳಲ್ಲಿನ ಘೋಷಣೆಗಳು ಕೇವಲ ಒಣ ಘೋಷಣೆಗಳಾಗಿರಲಿಲ್ಲ. ಹದಿನೈದು ಸಹಸ್ರದಷ್ಟು ಜನರು ಭಾಗವಹಿಸಿದ ಅಭೂತಪೂರ್ವ ಮೆರವಣಿಗೆ ಈ ಘೋಷಣೆಗಳಿಗೆ ಹೊಸ ಜೀವವಿತ್ತರು. ದುಡಿಯುವ ಜನರ ರಾಜಕೀಯ, ಹೊಲಸು ತುಂಬಿತುಳುಕುತ್ತಿರುವ ಆಳುವ ವರ್ಗಗಳ ರಾಜಕೀಯವನ್ನು ಬದಿಗೊತ್ತಿ ವಾತಾವರಣವನ್ನು ಶುದ್ಧಗೊಳಿಸಬಲ್ಲದು ಎಂಬ ಹೊಸ ಆತ್ಮ ವಿಶ್ವಾಸವನ್ನು ಮೂಡಿಸಿದ ಬೃಹತ್ ಮೆರವಣಿಗೆಯದು.

ಎರಡು ಗಂಟೆಗಳ ಕಾಲ ಕೋಲಾರ ಪಟ್ಟಣಾದಾದ್ಯಂತ ಸಮ್ಮೇಳನದ ಕಂಪು ಬೀರಿದ ಮೆರವಣಿಗೆ ಸ್ವಾಗತ ಬ್ಯಾನರುಗಳಿಂದ, ಕೆಂಪು ಪತಾಕೆಗಳಿಂದ ತುಂಬಿದ್ದ ಹಾಗೂ ಸರಳವಾಗಿ ಆಕರ್ಷಕವಾಗಿ ನಿರ್ಮಿಸಿದ್ದ ವೇದಿಕೆಯಿದ್ದ ಬಹಿರಂಗ ಸಭೆಯ ತಾಣವನ್ನು ತಲುಪಿ ದಾಗ ಉತ್ಸಾಹ ಮುಗಿಲು ಮುಟ್ಟಿತ್ತು.

ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನಾರ್, ಸಿ.ಪಿ.ಐ.(ಎಂ)ನ ಅತ್ಯುನ್ನತ ಅಂಗವಾದ ಪೊಲಿಟ್ ಬ್ಯೂರೋದ ಇನ್ನಿಬ್ಬರು ಮುಖಂಡರಾದ ಇ. ಬಾಲಾನಂದನ್ ಹಾಗೂ ಪಿ. ರಾಮ ಚಂದ್ರನ್ ಜೊತೆಗೆ ರಾಜ್ಯದ ಸಿ.ಪಿ.ಐ.(ಎಂ) ಮುಖಂಡರು ಆಗಮಿಸಿದಾಗ ಕೆಂಪು ವಂದನೆಗಳೊಂದಿಗೆ ಜಯಘೋಷ. ಎರಡು ಹುತಾತ್ಮ ಜ್ಯೋತಿಗಳನ್ನು ಇಬ್ಬರು ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಸದಸ್ಯರು ಸ್ವೀಕರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಜಿ.ವಿ. ಶ್ರೀರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಮ್ಮೇಳನದ ಬಹಿರಂಗ ಸಭೆಯನ್ನು ಕೇರಳದ ಜನಪ್ರಿಯ ಮುಖ್ಯಮಂತ್ರಿ, ಹಾಗೂ ಸಿ.ಪಿ.ಐ.(ಎಂ) ಪೊಲಟ್‌ಬ್ಯೂರೋ ಸದಸ್ಯರಾದ ಇ.ಕೆ. ನಾಯನಾರ್ ಸ್ಪೂರ್ತಿಯುತ ಭಾಷಣದೊಂದಿಗೆ ಉದ್ಘಾಟಿಸಿದರು. ವಿಶ್ವದಲ್ಲಿನ, ಭಾರತದಲ್ಲಿನ ಸನ್ನಿವೇಶವನ್ನು ವಿಶ್ಲೇಷಿಸುತ್ತಾ ಕರ್ನಾಟಕದಲ್ಲಿ ಬಲಿಷ್ಟವಾದ ದುಡಿಯುವ ಜನರ ಆಂದೋಲನವನ್ನು, ಪಕ್ಷವನ್ನು ಬೆಳೆಸುವ ನಿರೀಕ್ಷೆಯನ್ನು ವ್ಯಕ್ತಪಡಿಸಿದರು. ಇ. ಬಾಲಾನಂದನ್, ಪಿ. ರಾಮಚಂದ್ರನ್ ಹಾಗೂ ಎಸ್.ಸೂರ್ಯನಾರಾಯಣ ರಾವ್ ಕೂಡಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಐವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸ್ವಾತಂತ್ರ್ಯದ ಆಶಯಗಳನ್ನು ಸಾಕಾರಗೊಳಿಸಲು ಈಗಲೂ ದುಡಿಯುತ್ತಿರುವವರನ್ನು ಸನ್ಮಾನಿಸ ಲಾಯಿತು. ಸ್ವಾತಂತ್ರ್ಯದ ಸ್ವರ್ಣ ಜಯಂತಿಯ ನೆನಪಿನಲ್ಲಿ ಸ್ವಾಗತ ಸಮಿತಿ ಪ್ರಕಟಿಸಿದ್ದ ವರ್ಣ ರಂಜಿತ ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು. ಆರಂಭದಲ್ಲಿ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿಯವರು ಸ್ವಾಗತಿಸಿದರು. ನಾರಾಯಣಸ್ವಾಮಿಯವರು ವಂದನಾರ್ಪಣೆ ಮಾಡಿದರು.

ಜಿಲ್ಲೆಯ ಮೂಲೆ-ಮೂಲೆಗಳಿಂದ ಬಂದಿದ್ದ ದುಡಿಯುವ ಜನರು ತಮ್ಮ ಆಕಾಂಕ್ಷೆಗಳು, ಕನಸುಗಳು ಈಡೇರುವತ್ತ ಈ ಆಂದೋಲನ ಬೆಳೆಯುತ್ತದೆ ದಿಕ್ಕಿನಲ್ಲಿ ಈ ಸಮ್ಮೇಳನ ಪ್ರಯತ್ನಿಸುತ್ತದೆ ಎಂಬ ಹಾರೈಕೆ, ನಿರೀಕ್ಷೆಗಳೊಂದಿಗೆ ತಮ್ಮ ಊರುಗಳಿಗೆ ಹಿಂದಿರುಗಿದರು. ಪ್ರತಿನಿಧಿಗಳು ಈ ನಿರೀಕ್ಷೆಗಳ ಈಡೇರಿಕೆಯ ದಿಕ್ಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಪಕ್ಷ ನಡೆಸಿದ ಚಟುವಟಿಕೆಗಳ ವಿಶ್ಲೇಷಣೆ ನಡೆಸಿ, ಈಗಿನ ವಿಶಿಷ್ಟ ಸನ್ನಿವೇಶದಲ್ಲಿ ಈಡೇರಿಸಬೇಕಾದ ಕರ್ತವ್ಯಗಳ ಬಗ್ಗೆ ಚರ್ಚಿಸಲು ಸಮ್ಮೇಳನದ ಸಭಾಂಗಣದತ್ತ ಹೊರಟರು. ○

ಡಿಸೆಂಬರ್ 31 ರ ಬೆಳಿಗ್ಗೆ ಕೆಂಬಾವುಟವನ್ನು ಹಾರಿಸುವುದರೊಂದಿಗೆ ಸಿಪಿಐ(ಎಂ) ನ 16ನೇ ಕರ್ನಾಟಕ ರಾಜ್ಯ ಸಮ್ಮೇಳನದ ಕಲಾಪಗಳು ಆರಂಭವಾದವು. ರಾಜ್ಯದ ಹಿರಿಯ ಕಮ್ಯುನಿಸ್ಟ್ ಮುಖಂಡ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಎನ್.ಕೆ.ಉಪಾಧ್ಯಾಯ ಕೆಂಬಾವುಟವನ್ನೇರಿಸಿ ರಾಜ್ಯದ ಉದ್ದಗಲಕ್ಕೂ ದುಡಿಯುವ ಜನರ ಪಕ್ಷದ ಪ್ರಭಾವವನ್ನು ವ್ಯಾಪಕಗೊಳಿಸುವ ಪಣವನ್ನು ಪುನರುಚ್ಚರಿಸಿದರು. ನಂತರ ಹೋರಾಟಗಳಲ್ಲಿ ಪ್ರಾಣಾರ್ಪಣೆ ಮಾಡಿದ ಹುತಾತ್ಮರಿಗೆ ಸಮ್ಮೇಳನದ ಎಲ್ಲಾ ಪ್ರತಿನಿಧಿಗಳು ಹಾಗೂ ವೀಕ್ಷಕರು ಪುಷ್ಪಾಂಜಲಿ ಅರ್ಪಿಸಿದರು.

ಪ್ರತಿನಿಧಿ ಅಧಿವೇಶನದ ಕಲಾಪಗಳು ಸ್ವಾಗತ ಸಮಿತಿಯ ಅಧ್ಯಕ್ಷ ಜಿ.ವಿ. ಶ್ರೀರಾಮರೆಡ್ಡಿಯವರ ಸ್ವಾಗತ ಭಾಷಣದೊಂದಿಗೆ ಆರಂಭವಾದವು. ಜಿಲ್ಲೆಯಲ್ಲಿ ಪಕ್ಷದ ಇತಿಹಾಸದ ಬಗ್ಗೆ ವಿಹಂಗಮ ನೋಟ ಬೀರಿದ ಶ್ರೀರಾಮರೆಡ್ಡಿಯವರು ಸ್ವಾತಂತ್ರ್ಯ ಹೋರಾಟ ಗಾರರೂ, ಆರಂಭದಲ್ಲಿ ಕಾಂಗ್ರೆಸ್ಸಿಗರೂ ಆಗಿದ್ದ ಪಾಪಣ್ಣನವರು ಸ್ವಾತಂತ್ರ್ಯದ ಹೊಸದರಲ್ಲಿಯೇ ಕಾಂಗ್ರೆಸ್‌ನ ಸ್ವಾತಂತ್ರ್ಯೋತ್ತರ ಧೋರಣೆಗಳಿಂದ ಬೇಸತ್ತು ಕಮ್ಯುನಿಸ್ಟ್ ಪಕ್ಷ ಸೇರಿ ಜಿಲ್ಲೆಯ ಜನತೆಗೆ ಸಲ್ಲಿಸಿದ ಸೇವೆಗಳನ್ನು ನೆನಪಿಸಿದರು.



ಧ್ವಜಾರೋಹಣದೊಂದಿಗೆ ಆರಂಭ

ಸಿ.ನಂಜುಂಡಪ್ಪ, ಬಿ.ಮಾಧವ, ಪಿ.ಜಗನ್ನಾಥ್ ಹಾಗೂ ಕೆ.ಎಸ್.ವಿಮಲಾ ರವರಿದ್ದ ಅಧ್ಯಕ್ಷ ಮಂಡಳಿಯನ್ನು ಸಮ್ಮೇಳನದ ಕಲಾಪಗಳನ್ನು ನಡೆಸಿಕೊಡಲು ಆರಿಸಲಾಯಿತು. ನಿತ್ಯಾನಂದ ಸ್ವಾಮಿಯವರ ಸಂಯೋಜಕತ್ವದಲ್ಲಿ ನಿರ್ಣಯ ಸಮಿತಿಯನ್ನು, ಪಿ.ಸುಕುಮಾರ್ ರವರ ನೇತೃತ್ವದಲ್ಲಿ ಅರ್ಹತಾ ಪರಿಶೀಲನಾ ಸಮಿತಿಯನ್ನು ಹಾಗೂ ಯು.ಬಸವರಾಜ್ ನೇತೃತ್ವದಲ್ಲಿ ನಡವಳಿಕೆ ಸಮಿತಿಯನ್ನು ಆರಿಸಲಾಯಿತು. ಈ ಸಮಿತಿಯ ಸದಸ್ಯರ ವಿವರಗಳು ಹೀಗಿವೆ.

ನಿರ್ಣಯ ಸಮಿತಿ:

ನಿತ್ಯಾನಂದ ಸ್ವಾಮಿ, ಮಾರುತಿ ಮಾನ್ಪಡೆ, ಪ್ರಸನ್ನ ಕುಮಾರ್, ಸಿ.ಆರ್. ಭಟ್, ಕೆ.ಶಂಕರ್, ಕೆ.ಪ್ರಕಾಶ್, ನೀಲಾ.ಕೆ

ಅರ್ಹತಾ ಪರಿಶೀಲನಾ ಸಮಿತಿ: ವಿ.ಸುಕುಮಾರ್, ಅಣ್ಣಾರಾಯ ಇಳಿಗೇರ, ರತ್ನಾಕರ ಶೆಣೈ, ಸಜ್ಜನ್, ವರಲಕ್ಷ್ಮಿ.ಎಸ್.

ನಡವಳಿಕೆ ಸಮಿತಿ: ಯು.ಬಸವರಾಜ್, ಶಾಂತರಾಮ್ ನಾಯಕ್, ಪ್ರಭಾ.

ಕಾರ್ಯದರ್ಶಿ ಮಂಡಳಿ ಚುಕ್ಕಾಣಿ ಸಮಿತಿಯಾಗಿ ಕಾರ್ಯನಿರ್ವಹಿಸಬೇಕೆಂದು ನಿರ್ಧರಿಸಲಾಯಿತು.

ಕಲಾಪಗಳ ಆರಂಭದಲ್ಲಿ ಹಿಂದಿನ ಸಮ್ಮೇಳನದ ನಂತರ ನಿಧನರಾದ ಕಾರ್ಮಿಕ ವರ್ಗದ ಮುಖಂಡರಿಗೆ, ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಪೊಲಿಟ್ ಬ್ಯೂರೋ ಸದಸ್ಯರಾಗಿದ್ದ ಸುನೀಲ್ ಮೈತ್ರ ಹಾಗೂ ವಿ.ನಲ್ಲಶಿವಂ, ಕೇಂದ್ರ ಸಮಿತಿ ಸದಸ್ಯರಾಗಿದ್ದ ಗೋದಾವರಿ ಪರುಳೇಕರ್, ಚೀಣಾದ ಹಿರಿಯ ಕಮ್ಯುನಿಸ್ಟ್ ಮುಖಂಡ ಡೆಂಗ್ ಕ್ಸಿಯಾವೋಪಿಂಗ್, ರಾಷ್ಟ್ರಮಟ್ಟದ ಇತರ ಮುಖಂಡರು ಹಾಗೂ ರಾಜ್ಯದಲ್ಲಿ ನಮ್ಮನ್ನಗಲಿದ ಮುಖಂಡರು ಹಾಗೂ ಸಂಗಾತಿಗಳಿಗೆ ಈ ನಿರ್ಣಯಗಳ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ನಂತರ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಇ.ಬಾಲಾನಂದನ್ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು.




ಪ್ರಸ್ತುತ ಸನ್ನಿವೇಶದಲ್ಲಿ ಸಿಪಿಐ[ಎಂ] ಮಧ್ಯಪ್ರವೇಶ ಅತ್ಯಗತ್ಯ

- ಇ.ಬಾಲಾನಂದನ್

ದೇಶದ ಆಳುವ ವರ್ಗಗಳ ಅತಿದೊಡ್ಡ ಪಕ್ಷವಾದ ಕಾಂಗ್ರೆಸ್ ತೀವ್ರವಾಗಿ ಅವನತಿ ಹೊಂದುತ್ತಿದೆ. ಅದರ ಸ್ಥಾನವನ್ನು ಪಡೆಯಲು ಬಿಜೆಪಿ ಆತುರದಿಂದಿದೆ. ಆಳುವ ವರ್ಗಗಳ ಒಂದು ವಿಭಾಗ ತನ್ನೆಲ್ಲಾ ಬಲ ಉಪಯೋಗಿಸಿ ಬಿಜೆಪಿಗೆ ಬೆಂಬಲವಾಗಿ ನಿಂತಿದೆ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡನ್ನೂ ಸೋಲಿಸಲು ಹಾಗೂ ಸಂಯುಕ್ತರಂಗವನ್ನು ಗೆಲ್ಲಿಸಲು ನಿರ್ಧರಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಬಾಲಾನಂದನ್ ಡಿಸೆಂಬರ್ 31 ರಂದು ಕೋಲಾರದಲ್ಲಿ ಸಿಪಿಐ(ಎಂ) ನ ಹದಿನಾರನೇ ಕರ್ನಾಟಕ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು.

ಮೂರು ವರ್ಷಗಳ ಹಿಂದೆ ನಡೆದ ಸಿಪಿಐ(ಎಂ) 15ನೇ ಅಖಿಲ ಭಾರತ ಮಹಾಧಿವೇಶನ ದೇಶದಲ್ಲಿ ಹೆಚ್ಚುತ್ತಿರುವ ರಾಜಕೀಯ ಅಸ್ಥಿರತೆಯನ್ನು ಆರ್ಥಿಕ ಬಿಕ್ಕಟನ್ನು ಗಮನಿಸಿತ್ತು. ಇದನ್ನು ತಡೆಯಲು ಮಧ್ಯಪ್ರವೇಶಿಸಬೇಕು ಎಂದು ನಿರ್ಧರಿಸಿತ್ತು. ಆ ಪ್ರಕಾರವೇ ಕೇಂದ್ರದಲ್ಲಿ ಕೋಮುವಾದಿ ಶಕ್ತಿಗಳು ಸರಕಾರ ರಚಿಸದಂತೆ ತಡೆಯುವಲ್ಲಿ ಯಶಸ್ವಿಯಾಗಿದೆ. ಆದ್ದರಿಂದ ಸಿಪಿಐ(ಎಂ) ಪ್ರಥಮ ಶತ್ರು ಎಂದು ಬಿಜೆಪಿ ಪರಿಗಣಿಸುತ್ತಿದೆ ಎಂದ ಅವರು ಬಿಜೆಪಿ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಬಿ.ಎಸ್.ಪಿ. ಶಾಸಕರನ್ನು ಖರೀದಿಸಿದ್ದಷ್ಟೇ ಅಲ್ಲ, ಅವರನ್ನು ಹೊಡೆದು-ಬಡಿದು ಸರಕಾರ ಉಳಿಸಿಕೊಂಡಂತೆ ಕೇಂದ್ರದಲ್ಲಿ ಹಿಂದಿನ ಬಾಗಿಲಿನಿಂದ ಅಧಿಕಾರಕ್ಕೆ ಬದಲು ಪ್ರಯತ್ನಿಸಿತು. ಕೇಂದ್ರ ಇನ್ನು ಏಕಪಕ್ಷದ ಸರಕಾರ ಸಾಧ್ಯವಿಲ್ಲ ಎಂದೂ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸ್ಪಷ್ಟಪಡಿಸಿದರು.

ಬೇರೆಲ್ಲಾ ಪಕ್ಷಗಳ ಮುಖಂಡರು ಭ್ರಷ್ಟಾಚಾರದ ಅಪಾದನೆಗಳಿಂದ ಕಳಂಕಿತರಾಗಿರುವಾಗ ಸಿಪಿಐ(ಎಂ) ಯನ್ನು ಮಾತ್ರ ಅದು ಎಳ್ಳಷ್ಟು ತಟ್ಟಿಲ್ಲ. ಮೂರು ರಾಜ್ಯಗಳಲ್ಲಿ ಸಿಪಿಐ(ಎಂ) ನೇತೃತ್ವದ ಸರಕಾರಗಳು ಭಿನ್ನವಾದ ದಾರಿಯೊಂದನ್ನು ತೋರಿಸುತ್ತಿವೆ. ಇದರಿಂದಾಗಿ ಸಿಪಿಐ(ಎಂ) ಕಾಂಗ್ರೆಸ್ ಮತ್ತು ಬಿಜೆಪಿಯ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದೆ ಎಂದ ಅವರು ಜನರ ಸಮಸ್ಯೆಗಳಿಗೆ ಸ್ಪಂದಿಸುವ ರಾಜಕೀಯಕ್ಕಾಗಿ ಸಿಪಿಐ(ಎಂ) ನ್ನು ಬಲಗೊಳಿಸ ಬೇಕು ಎಂದರು.




ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸುತ್ತಾ ಉದಾರೀಕರಣದ ಮೊದಲಿನ ಹತ್ತು ವರ್ಷಗಳಿಗೆ ನಂತರದ 7 ವರ್ಷಗಳಲ್ಲಿ ಆರ್ಥಿಕದ ಎಲ್ಲಾ ಸೂಚ್ಯಂಕಗಳೂ ಇಳಿಮುಖವಾಗಿವೆ ಎಂದು ವಿವರಿಸಿದ ಬಾಲಾನಂದನ್ ಉದಾರೀಕರಣದಿಂದ ದೊಡ್ಡ ದೊಡ್ಡ ಕಂಪನಿಗಳ ಲಾಭಗಳು ಹೆಚ್ಚಿರುವುದು ವರದಿಯಾಗಿದೆ, ಆದರೊಂದಿಗೆ ಬಡತನ ಮತ್ತು ನಿರುದ್ಯೋಗ ಕೂಡಾ ಹೆಚ್ಚಿದೆ ಎಂಬುದನ್ನೂ ಗಮನಿಸಬೇಕು ಎಂದರು. ಬಡತನದ ರೇಖೆಯ ಕೆಳಗೆ ಇರುವ ಜನರ ಸಂಖ್ಯೆ 1989-90 ರಲ್ಲಿ 34% ಇದ್ದದು ಈಗ 39.66% ಕ್ಕೇರಿದೆ ಎಂದರು.

ಅಂತರ್ರಾಷ್ಟ್ರೀಯ ಪರಿಸ್ಥಿತಿಯ ವಿಶ್ಲೇಷಣೆ ಮಾಡುತ್ತಾ ಇತ್ತೀಚಿನ ದಿನಗಳಲ್ಲಿ 'ಏಶ್ಯನ್ ಹುಲಿಗಳು' ಎಂದು ಉದಾರೀಕರಣವಾದಿಗಳು ನಮಗೆ ಉದಾಹರಣೆಯಾಗಿ ತೋರುತ್ತಿದ್ದ ದೇಶಗಳಲ್ಲಿ ಈಗ ಆರ್ಥಿಕ ಬಿಕ್ಕಟ್ಟು ತೀವ್ರವಾಗಿರುವತ್ತ ಗಮನ ಸೆಳೆದರು. ಇದರ ಪರಿಣಾಮ ಈ ದೇಶಗಳಲ್ಲಷ್ಟೇ ಅಲ್ಲ ಇಡೀ ಜಗತ್ತಿನ ಮೇಲಾಗುತ್ತದೆ ಎಂದರು. ಇದರಿಂದಾಗಿ ನಮ್ಮ ದೇಶದ ಬಂಡವಾಳಿಗರೂ ಇದುವರೆಗೆ ಸರಕಾರ ತಮ್ಮ ಕ್ಷೇತ್ರದಲ್ಲಿ ಕೈಹಾಕಬಾರದು ಎನ್ನುತ್ತಿದ್ದವರು ಈಗ ಸರಕಾರ ಹೆಚ್ಚೆಚ್ಚು ಮಧ್ಯಪ್ರವೇಶಿಸಬೇಕು ಎನ್ನುತ್ತಿದ್ದಾರೆ. ಅತ್ತ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಶ್ರೀಮಂತ ಬಂಡವಾಳಶಾಹಿ ದೇಶಗಳು ಮೂರನೇ ಜಗತ್ತಿಗೆ ಮಾತ್ರ ಉದಾರೀಕರಣ, ತಮ್ಮ ಉದ್ದಿಮೆಗಳಿಗೆ ರಕ್ಷಣಾ ನೀತಿ ಎಂದು ಹೇಳುತ್ತಿದ್ದಾರೆ ಎಂದು ಕಾಂ।। ಬಾಲಾನಂದನ್ ಲೇವಡಿ ಮಾಡಿದರು.

ಸರ್ವಕಾಲಕ್ಕೂ ತನ್ನದೇ ಅತ್ಯುತ್ತಮ ವ್ಯವಸ್ಥೆಯೆಂಬ ಬಂಡವಾಳಶಾಹಿಯು ಹೆಗ್ಗಳಿಕೆ ಅರ್ಥ ಹೀನ ಎಂಬ ಮಾತು ಈಗ ಸಾಬೀತಾಗಿದೆ. ವಿಜ್ಞಾನ - ತಂತ್ರ ಜ್ಞಾನದ ಬೆಳವಣಿಗೆ ಮಾನವ ಕುಲಕ್ಕೆ ಪ್ರಗತಿಯ ಹೆಬ್ಬಾಗಿಲು ತೆರೆಯಬೇಕಾಗಿತ್ತು. ಆದರ ಬದಲು ನಾವು ಕಾಣುತ್ತಿರುವುದು 'ಉದ್ಯೋಗರಹಿತ ಬೆಳವಣಿಗೆ' ಎಂದ ಬಾಲಾನಂದನ್ ಬಂಡವಾಳಶಾಹಿಯ ವೈರುಧ್ಯಗಳು ಈಗ ಎಲ್ಲರ ಗಮನ ಸೆಳೆದಿದೆ ಎಂದು 1996 ರ ಮಾನವ ಅಭಿವೃದ್ಧಿ ವರದಿಯ ಅಂಕಿ-ಅಂಶಗಳನ್ನು ಉದ್ಗರಿಸುತ್ತಾ ಹೇಳಿದರು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ 20% ಮಂದಿ ವಿಶ್ವದ ಸಂಪತ್ತಿನ 80% ರ ಮೇಲೆ ಒಡೆತನ ಹೊಂದಿದ್ದಾರೆ. ಈ ಅಸಮಾನ ಬೆಳವಣಿಗೆಯೊಂದಿಗೆ ಸಾಮ್ರಾಜ್ಯಶಾಹಿ ದೇಶಗಳ ನಡುವಿನ ವೈರುದ್ಯಗಳೂ ತೀವ್ರಗೊಳ್ಳುತ್ತಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಈ ಯುಗದ ಎಲ್ಲಾ ನಾಲ್ಕು ವೈರುಧ್ಯಗಳೂ ಈಗ ತೀಕ್ಷ್ಣಗೊಳ್ಳುತ್ತಿವೆ ಎಂದು ಬಾಲಾನಂದನ್ ಹೇಳಿದರು.

ರಾಷ್ಟ್ರೀಯ ಸನ್ನಿವೇಶದ ಬಗ್ಗೆ ಹೇಳುತ್ತಾ ಈಗ ದೇಶದಲ್ಲೂ ಪರಿಸ್ಥಿತಿ ಬದಲಾಗಿದೆ, ನಾವು ರಾಜಕೀಯವಾಗಿ ಮಧ್ಯ ಪ್ರವೇಶಿಸುವ ಅವಕಾಶ ಹೆಚ್ಚಿದೆ, ಈ ರೀತಿಯ ಮಧ್ಯಪ್ರವೇಶ ಅತೀ ಅಗತ್ಯ ಕೂಡಾ ಎಂದು ಅವರು ಹೇಳಿದರು. ನಾವ ಕೇವಲ ಸನ್ನಿವೇಶದ ಅತ್ಯುತ್ತಮ ವಿಶ್ಲೇಷಣೆ ಮಾಡಿದರೆ ಸಾಲದು, ಅದನ್ನು ಬದಲಿಸಲು ಕಾರ್ಯೋನ್ಮುಖರೂ ಆಗಬೇಕು ಎಂದ ಅವರು "ಈಗಿನ ಸನ್ನಿವೇಶದ ದೌರ್ಬಲ್ಯ ಏನು ಎಂದು ಯಾರಾದರೂ ಕೇಳಿದರೆ ಸಿಪಿಐ(ಎಂ)ನ ಸಂಘಟನಾ ದುರ್ಬಲತೆಯೇ ಈಗಿನ ಸನ್ನಿವೇಶದ ದುರ್ಬಲತೆ ಕೂಡಾ ಎನ್ನಬಹುದು" ಎಂದು ಸಿಪಿಐ(ಎಂ) ನ್ನು ಬಲಪಡಿಸುವ ತೀವ್ರ ಅಗತ್ಯದತ್ತ ಅವರು ಗಮನ ಸೆಳೆದರು. ಸಾಮೂಹಿಕ ಸಂಘಟನೆಗಳಲ್ಲಿ, ಮುಖ್ಯವಾಗಿ ಕಾರ್ಮಿಕ ಸಂಘಟನೆಯಲ್ಲಿ ನಮ್ಮ ಕೆಲಸದ ಪರಾಮರ್ಶೆ ನಡೆಸುತ್ತಿರಬೇಕು ಎಂದು ಅವರು ಕರೆ ನೀಡಿದರು.

ವರದಿ: ಕೆ.ವಿ



ಕೋಲಾರದಲ್ಲಿ ಕಮ್ಯುನಿಸ್ಟ್ ಆಂದೋಲನ

ಕೋಲಾರ ಜಿಲ್ಲೆಯಲ್ಲಿ ಪಕ್ಷದ ರಾಜಕೀಯ ಪ್ರಭಾವವು 1952 ರಿಂದಲೂ ಇದೆ. 1945 ರಲ್ಲಿ ಪ್ರಾರಂಭವಾದ ತೆಲಂಗಾಣ ಹೋರಾಟ ಪ್ರಭಾವದಿಂದಲೂ ಮತ್ತು ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕೆಲವು ಪ್ರಮುಖ ಮುಖಂಡರುಗಳು ಕಾಂಗ್ರೆಸ್ಸಿನ ಧೋರಣೆಗಳಿಂದ ಜಿಗುಪ್ಸೆಗೊಂಡು ಸ್ವಾತಂತ್ರ್ಯಾನಂತರದಲ್ಲಿ ಇಡೀ ದೇಶದಲ್ಲಿ ಅಂದು ಪ್ರಬಲವಾಗಿದ್ದ ಕಮ್ಯುನಿಸ್ಟ್ ಚಳುವಳಿಯ ಪ್ರಭಾವದಿಂದಾಗಿ ಅವಿಭಜಿತ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿಕೊಂಡರು. ಹಾಗಾಗಿ, ಈ ಜಿಲ್ಲೆಯಲ್ಲಿ 1952 ರಿಂದ 1977 ರವರೆಗೆ ಜನತೆಗೆ ಗೊತ್ತಿದ್ದುದು ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳು ಮಾತ್ರ. ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾದ ನಾಯಕತ್ವದಲ್ಲಿ 1952 ರಲ್ಲಿ ಇಡೀ ಕರ್ನಾಟಕದಲ್ಲಿ ಮೊದಲ ಬಾರಿಗೆ ಜೋಡಿದಾರ ಪದ್ಧತಿ ಹಾಗೂ ಇನಾಂತಿ ರದ್ದತಿಗಾಗಿ ಪ್ರಬಲ ಹೋರಾಟ ನಡೆಯಿತು. ಇದರ ಪ್ರಭಾವ ಇಡೀ ರಾಜ್ಯದ ಮೇಲೆ ಬಿದ್ದು ರಾಜ್ಯದಲ್ಲಿ ಜೋಡಿ ಇನಾಂತಿ ರದ್ದತಿಗಾಗಿ ಪ್ರಬಲ ಹೋರಾಟ ನಡೆದು ಕಡೆಗೆ ಅಂದಿನ ಸರ್ಕಾರ ಜೋಡಿ ಇನಾಂತಿ ರದ್ದು ಮಾಡುವಂತಾಯಿತು. ಈ ಹೋರಾಟಗಳ ಪ್ರಭಾವವೇ ಕಾಗೋಡು ಸತ್ಯಾಗ್ರಹಕ್ಕೂ ಪ್ರೇರಣೆಯನ್ನು ನೀಡಿದ್ದು. ಅಂದಿನಿಂದ ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳುವಳಿಯ ಪ್ರಭಾವ ಪ್ರಾರಂಭವಾಗಿದ್ದು, ಅಂದಿನಿಂದ ಇಂದಿನವರೆಗೂ ಈ ಜಿಲ್ಲೆಯಲ್ಲಿನ ಹೆಚ್ಚು ಕಡಿಮೆ ಎಲ್ಲಾ ಜನಪರ ಹೋರಾಟಗಳಿಗೂ ಕಮ್ಯುನಿಸ್ಟ್ ಪಕ್ಷ ಮತ್ತು ಕಿಸಾನ್ ಸಭಾ ನಾಯಕತ್ವವನ್ನು ಕೊಟ್ಟಿದೆ. 1952 ರ ಜೋಡಿ ಇನಾಂತಿ ರದ್ದತಿಯ ಹೋರಾಟದ ನಂತರ 1973 ರಲ್ಲಿ ನಡೆದ 'ಭೂ ಗ್ರಹಣ' ಚಳುವಳಿಯು ಬಹಳ ಪ್ರಮುಖವಾದದ್ದು. ಸತತವಾಗಿ 3 ತಿಂಗಳುಗಳ ಕಾಲ ನಡೆದ ಈ ಹೋರಾಟದಲ್ಲಿ ಸುಮಾರು 10,000 ಜನರು ಪಾಲ್ಗೊಂಡಿದ್ದೇ ಅಲ್ಲದೆ, 3,600 ಜನರು ಮೂರು ತಿಂಗಳಿಗೂ ಹೆಚ್ಚು ಕಾಲ ಜೈಲುವಾಸವನ್ನು ಅನುಭವಿಸಿದರು. ಇದರಲ್ಲಿ ಸುಮಾರು 600 ಜನ ಮಹಿಳೆಯರು ಕೂಡ ಸೆರೆಮನೆ ವಾಸವನ್ನು ಅನುಭವಿಸಿದರು. ಇದರಿಂದಾಗಿ ಇಡೀ ಜಿಲ್ಲೆಯಲ್ಲಿ 4 ಲಕ್ಷ ಎಕರೆ ಭೂಮಿಯನ್ನು ಭೂಹೀನರು ಹಿಡಿಯುವಂತಾಯಿತು. ಈ ಭೂ ಗ್ರಹಣ ಚಳುವಳಿಯನ್ನು ಉದ್ಘಾಟನೆ ಮಾಡಿದ್ದು ದಿವಂಗತ ಕಾಂ. ಎ.ಕೆ. ಗೋಪಾಲನ್‌ರವರು. ಇದರ ಜೊತೆಗೆ ಕರ್ನಾಟಕ ರಾಜ್ಯದಲ್ಲೇ ಮೊದಲ ಬಾರಿಗೆ ಕೆಂಬಾವುಟದ ಅಡಿಯಲ್ಲಿ ಸಂಘಟನೆ ಪ್ರಾರಂಭವಾಗಿದ್ದು ಈ ಜಿಲ್ಲೆಯ ಚಿನ್ನದ ಗಣಿಯಲ್ಲೇ.

ಇಷ್ಟೆಲ್ಲಾ ಹೋರಾಟಗಳನ್ನು ನಡೆಸಿದ್ದರೂ ಪಕ್ಷವನ್ನು ಸಂಘಟನಾತ್ಮಕವಾಗಿ ಮತ್ತು ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷವನ್ನಾಗಿ ಕಟ್ಟುವುದರಲ್ಲಿ ಸಂಘಟನಾತ್ಮಕ ವಿಫಲತೆಯನ್ನೂ ಕಂಡಿತು. ಇದರಿಂದಾಗಿ 1977 ರಲ್ಲಿ ಬಂಡವಾಳಶಾಹಿ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿಗೆ ಪರ್ಯಾಯವಾಗಿ ಮತ್ತೊಂದು ಬಂಡವಾಳಶಾಹಿ ಭೂಮಾಲೀಕ ಪಕ್ಷವಾಗಿ ಜನತಾ ಪಕ್ಷ ಹುಟ್ಟಿಕೊಂಡಾಗ ಈ ಜಿಲ್ಲೆಯಲ್ಲಿನ ಕೆಲವು ನಾಯಕರು ಕಮ್ಯುನಿಸ್ಟ್ ಪಕ್ಷವನ್ನು ತ್ಯಜಿಸಿ ಜನತಾ ಪಕ್ಷವನ್ನು ಸೇರಿ ಕೊಂಡರು. ಇದರಿಂದಾಗಿ ನಮ್ಮ ಪಕ್ಷ ರಾಜಕೀಯ ಶಕ್ತಿಯನ್ನು ಕಳೆದುಕೊಳ್ಳ ಬೇಕಾಯಿತು. 1977 ರಿಂದ 1985 ರವರೆವಿಗೂ ಹಲವಾರು ಸಂಘಟನಾತ್ಮಕ ಸಮಸ್ಯೆಗಳನ್ನು ಎದುರಿಸಿ 1985 ರ ನಂತರ ಸಂಘಟನಾತ್ಮಕವಾಗಿ ಪಕ್ಷವನ್ನು ಕಟ್ಟುವ ಕೆಲಸ ಪ್ರಾರಂಭವಾಗಿ, ಈಗ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷದ ಜಿಲ್ಲಾ ಸಮಿತಿಯು ಪಕ್ಷದ 16ನೇ ರಾಜ್ಯ ಸಮ್ಮೇಳನವನ್ನು ನಡೆಸುವುದನ್ನು ಒಂದು ಸವಾಲಾಗಿ ಸ್ವೀಕರಿಸಿ ಕಾರ್ಯೋನ್ಮುಖವಾಯಿತು.

- ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಜಿ.ವಿ. ಶ್ರೀರಾಮರೆಡ್ಡಿಯವರ ಸ್ವಾಗತ ಭಾಷಣ

ನೀವು ಬಿದ್ದ ಮರಗಳಲ್ಲ, ಬಿತ್ತಿದ ಬೀಜಗಳು.........

ಅದು ಕಣ್ಣಲ್ಲಿ ನೀರು ತರಿಸಿದ ಕ್ಷಣ.,

ಕಮ್ಯುನಿಸ್ಟರ ಎದೆ ಹೊಲದಲ್ಲಿ ಸದಾ ಚೈತನ್ಯವನ್ನು ಹರಡುವ ಕೆಂಪು ಬಾವುಟ ಮೂಡಿದ್ದು ಸಂಗಾತಿಗಳ ರಕ್ತದಿಂದ. ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವಾಗ ಸಾಮ್ರಾಜ್ಯಶಾಹಿಗಳ, ಬಂಡವಾಳಗಾರರ, ಕೋಮುವಾದಿಗಳ, ಭೂಮಾಲಿಕರ, ಗೂಂಡಾಗಳ ಅಟ್ಟಹಾಸದ ಮಧ್ಯೆಯೂ ತಮ್ಮ ಪ್ರಾಣವನ್ನೇ ಬಲಿಕೊಟ್ಟು ಕೆಂಪು ಬಾವುಟ ಎತ್ತಿಹಿಡಿದ ಸಂಗಾತಿಗಳನ್ನು ಸ್ಮರಿಸಿಯೇ ಸಮ್ಮೇಳನ ಆರಂಭ.

ಪಕ್ಷದ ಬಾವುಟವನ್ನು ಮೇಲೆರಿಸಿದ ನಂತರ ಎಲಾ ಸಂಗಾತಿಗಳು ಸಾಲಾಗಿ ಹೂ ಪಕಳೆಗಳನ್ನು ಹಿಡಿದು ಹುತಾತ್ಮ ಸಂಗಾತಿಗಳಿಗೆ ಅರ್ಪಿಸಿದರು. ಹುತಾತ್ಮರ ಬಲಿದಾನದಿಂದ ಎತ್ತರ ಎತ್ತರವಾಗಿ ಹೋಗುತ್ತಿರುವ ಪಕ್ಷದ ಮಧ್ಯೆ ಅವರ ನೆನಪು ಅವರು ತೋರಿದ ಬೆಳಕು ಇನ್ನೂ ಉರಿಯುತ್ತಿದೆ ಎಂಬುದರ ಸಂಕೇತವೆಂಬಂತೆ ಹಣತೆಯೊಂದು ಉರಿಯುತ್ತಿತ್ತು.

ಓ ಹುತಾತ್ಮ ಸಂಗಾತಿಗಳೇ ನೀವು ಬಿದ್ದ ಮರಗಳಲ್ಲ, ಬಿತ್ತಿದ ಬೀಜಗಳು ಎಂದು ಸ್ಮರಿಸಿಕೊಂಡ ಸಂಗಾತಿಗಳು ನಂತರ ಹೋರಾಟದ ಚೈತನ್ಯ ತುಂಬುವ ಸಮ್ಮೇಳನ ಸಭಾಂಗಣಕ್ಕೆ ಕಾಲಿಟ್ಟರು.

ತಮ್ಮ ತಮ್ಮ ಹಳ್ಳಿಗಳಲ್ಲಿ ಕಮ್ಯುನಿಸ್ಟ್ ಆಂದೋಲನವನ್ನು ಕಟ್ಟುವ, ಅದಕ್ಕಾಗಿ ನೆಲ ಉತ್ತು ಬಿತ್ತು ಹದ ಮಾಡುವುದಕ್ಕಾಗಿ ಹೋರಾಟದ ಬೀಜಗಳನ್ನು ಪಡೆದರು. ಒಂದು ಬೀಜ ಹಲವು ಬೀಜಕ್ಕೆ ದಾರಿ ಮಾಡಿಕೊಟ್ಟಿತು. ಒಂದು ಚಿಗುರು ಎತ್ತರದ ಒಂದು ಮರಕ್ಕೆ



"ಸಾಮೂಹಿಕ ಚಳುವಳಿಗಳು ಸರ್ವಾಂಗೀಣ ಸ್ವರೂಪ ಪಡೆಯಬೇಕು."

ಸಿ.ಪಿ.ಐ.(ಎಂ)ನ ಹದಿನಾರನೇ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನದ ಕಲಾಪಗಳು ಡಿಸೆಂಬರ್ 31ರಂದು ಆರಂಭವಾದವು. ಪೊಲಿಟ್‌ಬ್ಯೂರೋದ ಸದಸ್ಯರಾದ ಕಾಂ|| ಇ.ಬಾಲಾನಂದನ್‌ರವರು ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿದ ನಂತರ ಪಕ್ಷದ ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾಂ|| ಪಿ. ರಾಮಚಂದ್ರ ರಾವ್ ರಾಜ್ಯ ಸಮಿತಿಯ ಕರಡು ವರದಿಯನ್ನು ಮಂಡಿಸಿದರು.



ರಾಜ್ಯದ ಪ್ರಸ್ತುತ ರಾಜಕೀಯ ಸನ್ನಿವೇಶ ವಿಶ್ಲೇಷಣೆ ಮಾಡಿರುವ ಈ ಕರಡು ವರದಿಯ ಒಂದು ವಿಶಿಷ್ಟ ಅಂಶವೆಂದರೆ ಇದಕ್ಕೆ ಹಿನ್ನೆಲೆಯಾಗಿ ಮೂಡಿರುವ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪರಿಸ್ಥಿತಿಯ ಒಂದು ಸ್ಥೂಲ ಪರಾಮರ್ಶೆ. ರಾಜ್ಯ ಸರಕಾರ ಹೊಸ ಆರ್ಥಿಕ ನೀತಿಗಳ ಹೆಸರಲ್ಲಿ ಗುತ್ತೇದಾರಿ ಮತ್ತಿತರ ಬಂಡವಾಳಶಾಹಿ, ಭೂ ಮಾಲಕರು ಹಾಗೂ ಶ್ರೀಮಂತ ರೈತರಿಗೆ ವಿವಿಧ ಅನುಕೂಲಗಳನ್ನು ಕಲ್ಪಿಸುವ ದಾರಿಯಲ್ಲಿಯೇ ಮುಂದುವರೆದಿದೆ. ಇದರ ಅಂಗವಾಗಿ ಅದು ಜಾರಿಗೆ ತಂದಿರುವ ಹೊಸ ಕೃಷಿ ನೀತಿಯ ಮುಖ್ಯ ಅಂಶಗಳನ್ನು ವಿಶ್ಲೇಷಿಸುತ್ತಾ ಪಿ. ರಾಮಚಂದ್ರರಾವ್ ರವರು ಇದರ ಪರಿಣಾಮವಾಗಿ ಆಹಾರ ಸ್ವಾವಲಂಬನೆಗೆ ಬಂದಿರುವ ಸಂಚಕಾರ, ಬಡ-ಮಧ್ಯಮ ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿರುವ ಪ್ರಕ್ರಿಯೆಯತ್ತ ಗಮನ ಸೆಳೆದರು. ಅಲ್ಲದೆ ಸಾರ್ವಜನಿಕ ವಿತರಣಾ ವ್ಯವಸ್ಥೆ, ಪ್ರಾಥಮಿಕ ಶಿಕ್ಷಣ, ಆರೋಗ್ಯಗಳಿಗೆ ಹಣ ಕಡಿತ ಮಾಡುತ್ತಿದೆ, ಇದು ರಾಜ್ಯದ ರೈತರಿಗೆ ಅತ್ಯಂತ ಹಾನಿಕಾರಕವಾಗಿ ಪರಿಣಮಿಸಿದೆ ಎಂದು ಅವರು ಹೇಳಿದರು.

ಕೈಗಾರಿಕಾ ರಂಗದ ಸಮೀಕ್ಷೆ ಮಾಡುತ್ತಾ ವಿದೇಶೀ ಬಂಡವಾಳವನ್ನು ಆಕರ್ಷಿಸುವ ನಿರಂತರ ಪ್ರಯತ್ನದಿಂದಾಗಿ ಬಂಡವಾಳ ಹೂಡಿಕೆ ಒಪ್ಪಂದಗಳ ಮೊತ್ತವನ್ನು ಗಮನಿಸಿದಾಗ ಇಡೀ ದೇಶದಲ್ಲಿ ಎರಡನೇ ಸ್ಥಾನವನ್ನು ಪಡೆದಿರುವುದನ್ನು ಕರಡು ವರದಿ ಗಮನಿಸಿದೆ. ಈ ಬಂಡವಾಳದಲ್ಲಿ ಬಹುಪಾಲು ಮೂಲಭೂತ ಸೌಕರ್ಯಗಳಲ್ಲಿ ಹೂಡಿಕೆಯಾಗುತ್ತಿದ್ದರೂ ಇದರ ಪ್ರಾದೇಶಿಕ ಹೂಡಿಕೆಯನ್ನು ಗಮನಿಸಿದಾಗ ಮುಖ್ಯವಾಗಿ ರಾಜ್ಯದ ಮೂರೇ ವಲಯಗಳಲ್ಲಿ (ಬೆಂಗಳೂರು ನಗರ ವಲಯ, ಬಳ್ಳಾರಿ-ಕೊಪ್ಪಳ ವಲಯ, ಉ.ಕ.-ದ.ಕ. ವಲಯ)-ಅದರಲ್ಲೂ ಪ್ರಧಾನವಾಗಿ ಬೆಂಗಳೂರು ವಲಯದಲ್ಲಿಯೇ ಹೂಡಿಕೆಯಾಗುತ್ತಿರುವಲ್ಲಿನ ಪ್ರಾದೇಶಿಕ ವಿಷಮತೆಯನ್ನು ಕರಡು ವರದಿ ವಿಶ್ಲೇಷಿಸಿದೆ. ಇನ್ನೊಂದು ಕಡೆ ಇದೇ ನೀತಿಗಳ ಪರಿಣಾಮವಾಗಿ ಕರ್ನಾಟಕದ ಹಲವಾರು ಕೈಗಾರಿಕೆಗಳು ಮುಚ್ಚಿ, ಹಲವಾರು ತಂತ್ರಗಳ ಮೂಲಕ ಕಾರ್ಮಿಕರನ್ನು ಬೀದಿಪಾಲು ಮಾಡಿವೆ ಎಂದು ಈ ಪರಾಮರ್ಶೆ ಗಮನಿಸಿದೆ. ಈ ನೀತಿಗಳ ಭಾಗವಾಗಿ ಕರ್ನಾಟಕದಲ್ಲಿ ಕೂಡಾ ರಾಜ್ಯ ಸರ್ಕಾರದ ಬಂಡವಾಳ ಹೂಡಿಕೆ ಕಡಿಮೆಯಾಗುತ್ತಿದೆ. ಇದು ಮುಖ್ಯವಾಗಿ ನೀರಾವರಿ ಮತ್ತು ಸಾರ್ವಜನಿಕ ಕಾರ್ಖಾನೆಗಳನ್ನು ತಟ್ಟುತ್ತಿದೆ ಎಂದು ರಾಮಚಂದ್ರರಾವ್ ಹೇಳಿದರು.

ಈ ಹೊಸ ಅರ್ಥಿಕ ನೀತಿಗಳು ಸಾಂಸ್ಕೃತಿಕ ರಂಗದಲ್ಲಿ ಉಂಟುಮಾಡುತ್ತಿರುವ ದುಷ್ಪರಿಣಾಮಗಳನ್ನು ಪರಿಶೀಲಿಸಿರುವ ಕರಡು ವರದಿ ಜನರನ್ನು ರಾಜಕೀಯದಿಂದ ವಿಮುಖವಾಗಿಸುವ, ಸ್ವಾತಂತ್ರ್ಯ ಆಂದೋಲನದಲ್ಲಿ ಮೂಡಿ ಬಂದ ಪ್ರಗತಿಪರ ಮೌಲ್ಯಗಳ ಪ್ರಭಾವವನ್ನು ತೊಡೆದು ಹಾಕುವ ಪ್ರವೃತ್ತಿಯೂ ಪತ್ರಿಕೆಗಳು ಮತ್ತು ಸ್ಯಾಟಿಲೈಟ್ ಟಿವಿಗಳ ಪ್ರಭಾವದಿಂದ ಆರಂಭವಾಗಿದೆ ಎಂದಿದೆ.

ಇವೆಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ದುಡಿಯುವ ಜನರ ಜೀವನ ಮಟ್ಟದ ರಕ್ಷಣೆಗಾಗಿ, ದೇಶ ಮತ್ತು ರಾಜ್ಯದ ಹಿತ ರಕ್ಷಣೆಗಾಗಿ ಸಾಮೂಹಿಕ ಎಚ್ಚರವನ್ನು ಮೂಡಿಸಬೇಕಾಗಿದೆ. ಸಮರಧೀರ ಹಾಗೂ ವಿಶಾಲ ಚಳುವಳಿಗಳನ್ನು ರೂಪಿಸಬೇಕಾಗಿದೆ. ಹೊಸ ಆರ್ಥಿಕ ನೀತಿ ಜನ ಜೀವನದ ಮೇಲೆ ಎಲ್ಲಾ ದಿಕ್ಕಿನಿಂದಲೂ ಧಾಳಿ ಮಾಡುತ್ತಿರುವುದರಿಂದ ಈ ಚಳುವಳಿಗಳು ಸರ್ವಾಂಗೀಣ ಸ್ವರೂಪವನ್ನು ಪಡೆಯಬೇಕಾಗಿದೆ ಎಂದು ರಾಮಚಂದ್ರರಾವ್ ಒತ್ತಿ ಹೇಳಿದರು.

ಕಳೆದ ಮೂರು ವರ್ಷಗಳ ರಾಜ್ಯದ ರಾಜಕೀಯ ಬೆಳವಣಿಗೆಗಳನ್ನು ವಿಮರ್ಶಿಸುತ್ತಾ ಜನತಾ ದಳ ಸರ್ಕಾರದ (ಎರಡು ಹಂತಗಳಲ್ಲಿ) ವಿವಿಧ ಜನ-ವಿರೋಧಿ ನೀತಿಗಳ ಬಗ್ಗೆ ವಿವರಿಸುತ್ತಾ ಸಮ್ಮೇಳನದ ಕರಡು ವರದಿ "ಅದೇ ಸಮಯದಲ್ಲಿ ಜನತಾದಳ ಸರ್ಕಾರವನ್ನು ಹಿಂದಿನ ಕಾಂಗ್ರೆಸ್ ಸರಕಾರಗಳೊಂದಿಗೆ ಸಮೀಕರಿಸುವುದು ತಪ್ಪಾಗುತ್ತದೆ" ಎಂದಿದೆ. ಈಗ ಜನತಾದಳ ಸರ್ಕಾರದಡಿ ಜಾರಿಗೆ ತರುತ್ತಿರುವ ಹಲವು ಜನ-ವಿರೋಧಿ ಯೋಜನೆಗಳು ಹಿಂದೆ ಕಾಂಗ್ರೆಸ್ ಸರಕಾರಗಳಡಿಯೇ ರೂಪಿತವಾಗಿದ್ದವು ಎಂಬುದನ್ನೂ ಮರೆಯ ಬಾರದು ಎಂದು ಪಿ. ರಾಮಚಂದ್ರರಾವ್ ಹೇಳಿದರು. ಕಾಂಗ್ರೆಸ್, ವಿರೋಧ ಪಕ್ಷವಾಗಿ ಜನರ ಯಾವುದೇ ಸಮಸ್ಯೆಯನ್ನೆತ್ತದೆ, ತಮ್ಮ ಸೋಲಿನ ಬಗ್ಗೆ ಕಿಂಚಿತ್ತು ಸ್ವಯಂ ಪರೀಕ್ಷೆ ನಡೆಸದೆ ಕೇವಲ ಜನ ವಿಭಜಕ, ರಾಷ್ಟ್ರ ವಿರೋಧಿ ಘೋಷಣೆಗಳ ಮೂಲಕ ಆಕರ್ಷಿಸಲೆತ್ನಿಸಿತು. ಆದರೆ ಕಾಂಗ್ರೆಸ್ ಪಕ್ಷ ಅಧಿಕಾರವೆಂದರೆ ಮತ್ತೆ ಭ್ರಷ್ಟತೆಯ, ಒಳಜಗಳಗಳ ರಣರಂಗಕ್ಕೆ ಅವಕಾಶ ಕೊಡುವುದೆಂದೇ ಅರ್ಥ ಎಂದು ರಾಮಚಂದ್ರರಾವ್ ನುಡಿದರು.

ವಿಧಾನಸಭಾ ಚುನಾವಣೆಗಳಲ್ಲಿ 40, ಲೋಕಸಭಾ ಚುನಾವಣೆಗಳಲ್ಲಿ 6 ಸ್ಥಾನಗಳನ್ನು ಪಡೆದ ಬಿ.ಜೆ.ಪಿ. ಪಂಚಾಯತ್ ಚುನಾವಣೆಗಳಲ್ಲಿ ತೀವ್ರ ಸೋಲನ್ನು ಅನುಭವಿಸಿದರೂ ಈಗ ಜನತಾದಳದಿಂದ ದೂರ ಸರಿದಿರುವ ಜನರ ಒಂದು ವಿಭಾಗವನ್ನು ಒಲಿಸಿಕೊಳ್ಳಲು ತೀವ್ರ ಪ್ರಚಾರ ನಡೆದಿದೆ. ಕೋಮುವಾದಿಯಷ್ಟೇ ಅಲ್ಲ, ಖಾಸಗೀಕರಣ, ಜಾಗತೀಕರಣದ ನೀತಿಗಳಲ್ಲೂ ಬಿ.ಜೆ.ಪಿ. ಭಾಗವಹಿಸಿರುವ ಸರ್ಕಾರಗಳು ಒಂದು ಹೆಜ್ಜೆ ಮುಂದೆ ಹೋಗಿವೆ ಎಂಬುದನ್ನು ಜನರ ಗಮನಕ್ಕೆ ತರಬೇಕಾಗಿದೆ ಎಂದು ರಾಮಚಂದ್ರರಾವ್ ಹೇಳಿದರು. ಇದೇ ರೀತಿ ರಾಜ್ಯದಲ್ಲಿನ ಇತರ ಪಕ್ಷಗಳಾದ ಲೋಕಶಕ್ತಿ, ಬಿ.ಎಸ್.ಪಿ. ಹಾಗೂ ನ್ಯಾಶನಲಿಸ್ಟ್ ಚಟುವಟಿಕೆಗಳನ್ನು, ಪ್ರಭಾವವನ್ನು ಕರಡು ವರದಿ ವಿಶ್ಲೇಷಿಸಿದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಬೆಳವಣಿಗೆಗಳನ್ನು ಹಾಗೂ ಅದರಲ್ಲಿ ಜನರ ಪರವಾಗಿ ಸಿ.ಪಿ.ಐ.(ಎಂ)ನ ಮಧ್ಯಪ್ರವೇಶದ, ಚಳವಳಿಗಳ, ವಿವಿಧ ದುಡಿಯುವ ಜನಗಳ, ಜನ ವಿಭಾಗಗಳ, ಹೋರಾಟಗಳ ವಸ್ತುನಿಷ್ಠ ವಿಮರ್ಶೆ ಮಾಡುತ್ತಾ ಪಿ. ರಾಮಚಂದ್ರ ರಾವ್ ಅವರು ಸಿ.ಪಿ.ಐ.(ಎಂ) ದಲಿತರು, ಇತರ ಕೆಳ ಜಾತಿಗಳು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ, ವರದಕ್ಷಿಣೆ ಬಾಲ್ಯ ವಿವಾಹ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡಬೇಕಾಗಿದೆ, ರಾಜ್ಯದಲ್ಲಿ ಅರೆಪಾಳೆಯಗಾರಿ ಹಿಡಿತ ಬಲವಾಗಿರುವ ಪ್ರದೇಶಗಳಲ್ಲಿ ಈ ಕರ್ತವ್ಯ ನಿರ್ವಹಣೆಗೆ ವಿಶೇಷ ಗಮನ ನೀಡಬೇಕು ಎಂದರು. ಕೋಮುವಾದ, ಜಾತೀವಾದ, ಸರಕು ಸಂಸ್ಕೃತಿ, ಅತಿಸ್ವಾರ್ಥ, ಭಾಷಾ ಪ್ರಾದೇಶಿಕ ಅಂಧಾಭಿಮಾನಗಳ ವಿರುದ್ಧ ಸೈದ್ಧಾಂತಿಕ ಹೋರಾಟವನ್ನು ನಿರಂತರವಾಗಿ ನಡೆಸ ಬೇಕಾಗಿದೆ. ಪ್ರಾದೇಶಿಕ ಆದ್ಯತೆಗಳನ್ನು ಗುರುತಿಸಿ ಅಲ್ಲಿ ಸಾಮೂಹಿಕ ಚಳುವಳಿಗಳನ್ನು, ಪಕ್ಷದ ರಾಜಕೀಯ ಕೆಲಸವನ್ನು ಸಂಘಟಿಸಬೇಕಾಗಿದೆ ಎಂದರು. ○

ವರದಿಯನ್ನು ಶ್ರೀಮಂತ ಗೊಳಿಸಿದ ಚರ್ಚೆ...........

ರಾಜ್ಯ ಕಾರ್ಯದರ್ಶಿಗಳು ಮಂಡಿಸಿದ ವರದಿ ಮೇಲಿನ ಚರ್ಚೆಯಲ್ಲಿ 61 ಪ್ರತಿನಿಧಿಗಳು ಮಾತನಾಡಿದರು. ಇವರಲ್ಲಿ ನಾಲ್ವರು ಮಹಿಳೆಯರು. ಅಂದರೆ ಸಮ್ಮೇಳನದಲ್ಲಿ ಭಾಗವಹಿಸಿದ್ದ ಐವರಲ್ಲಿ ಒಬ್ಬರು ಮಾತನಾಡಿದರು. ಇವರು ಚರ್ಚೆಯಲ್ಲಿ ಮಂಡಿಸಿದ್ದು ಬರಿಯ ತಮ್ಮ ಅಭಿಪ್ರಾಯಗಳನ್ನಲ್ಲ. ರಾಜ್ಯ ಕಾರ್ಯದರ್ಶಿಗಳ ವರದಿ ಮಂಡನೆ ನಂತರ ಪ್ರತಿನಿಧಿಗಳು ಜಿಲ್ಲಾವಾರು, ಕ್ಷೇತ್ರವಾರು ಚರ್ಚೆ ನಡೆಸಿದರು. ಈ ಗುಂಪು ಚರ್ಚೆಯಲ್ಲಿ ಬಂದ ಅಂಶಗಳನ್ನು, ಮಾತ ನಾಡಿದ ಪ್ರತಿನಿಧಿಗಳು ಮಂಡಿಸಿದರು ಹೀಗೆ ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಪ್ರತಿನಿಧಿಗಳು ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸು ವಂತಾಯಿತು.

ಬೇರೆಯಾವುದೇ ಪಕ್ಷದ ಸಮ್ಮೇಳನಗಳಲ್ಲಿ ಇಷ್ಟು ಪ್ರಜಾಸತಾತ್ಮಕ ರೀತಿಯಲ್ಲಿ ನಡೆಯುವುದಿಲ್ಲ. ಚರ್ಚೆಯಲ್ಲಿ ಮೂಡಿಬಂದ ಕೆಲವು ಅಭಿಪ್ರಾಯಗಳ ಬಗ್ಗೆ ಒಂದು ವರದಿ............

ಬಿ.ಜೆ.ಪಿ.ಯ ಕೋಮುವಾದಿ ತಂತ್ರಗಳ ಹಾಗೂ ಅದು ಒಡ್ಡಿರುವ ಸವಾಲುಗಳ ಬಗ್ಗೆ ಮಾತನಾಡಿದ ಪ್ರತಿನಿಧಿಗಳು, ಅದನ್ನು ಎದುರಿಸಿ ಗೆಲ್ಲಲು ಸಾಧ್ಯವಿದೆ ಎಂಬ ಭರವಸೆ ವ್ಯಕ್ತಪಡಿಸಿದರು. ಕೋಮುವಾದಿ ತಂತ್ರಗಳ ಬಗ್ಗೆ ವರದಿಯಲ್ಲಿನ ವಿಶ್ಲೇಷಣೆಯನ್ನು ಬಲಗೊಳಿಸುವ ಶ್ರೀಮಂತಗೊಳಿಸುವ ವಿವರಗಳನ್ನು ತುಂಬಿದರು.

ಚರ್ಚೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳಲ್ಲಿ ಹೆಚ್ಚಿನವರು ವರದಿಯನ್ನು ಬೆಂಬಲಿಸಿ, ಅಲ್ಲಿನ ವಿಶ್ಲೇಷಣೆಗೆ ಪೂರಕವಾದ ವಿವರಗಳನ್ನು ಕೇಳಿದರು, ಕೆಲವರು ವರದಿಯಲ್ಲಿನ ಕೊರತೆಗಳನ್ನು ತುಂಬಿದರು. ಇನ್ನೂ ಹಲವರು ತಮ್ಮ ಪ್ರದೇಶದಲ್ಲಿನ ಚಟುವಟಿಕೆಗಳು ರೋಚಕ ವಿವರಗಳನ್ನು ಸಮ್ಮೇಳನದ ಮುಂದಿಟ್ಟರು. ಕೊಡಗು ರಾಜ್ಯಕ್ಕಾಗಿ ನಡೆಯುತ್ತಿರುವ ಪ್ರತ್ಯೇಕ ಚಳುವಳಿಯ ವಿವರದ ಚಿತ್ರಣ ನೀಡುತ್ತಾ ಕೊಡಗಿನ ಸಂಗಾತಿಗಳು, ರಾಜ್ಯಗಳ ಬಗ್ಗೆ ಪಕ್ಷದ ನಿಲುಮೆ ಎತ್ತಿ ಹೆಳಿದರು.

ಸ್ವಯಂಸೇವಾ ಸಂಘಟನೆಗಳ ಚಟುವಟಿಕೆಗಳ ಅಪಾಯಗಳ ಬಗ್ಗೆ ಹಲವು ಸಂಗಾತಿಗಳು ಸಮ್ಮೇಳನವು ಗಮನ ಸೆಳೆದರು. ಹೇಳುವುದು ವಾಕ್ಯವಾದ ಬೆಂಬಲ ಕಾಂಗ್ರೆಸ್‌ಗೆ ಎಂದು ಒಬ್ಬ ಪ್ರತಿನಿಧಿ ಮಾರ್ಮಿಕವಾಗಿ ಹೇಳಿದರು. ಜನತಾದಳದ ಜನವಿರೋಧಿ ನೀತಿಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ಟೀಕಿಸಿದ ಸಂಗಾತಿಗಳು, ವರದಿಯಲ್ಲಿ ಹೇಳಿರುವಂತೆ ಜನತಾದಳ ಸರ್ಕಾರದ ಎರಡನೇ ಹಂತದ ವೈಫಲ್ಯಗಳ ಬಗ್ಗೆ ಮನಬಿಚ್ಚಿ ಮಾತನಾಡಿದರು.

ಜನತಾದಳದ ಜತೆ ರಾಜಕೀಯ ಮೈತ್ರಿಯ ಸಮಸ್ಯೆಗಳ ಬಗ್ಗೆ ಹಲವು ಸಂಗಾತಿಗಳು ರಾಜ್ಯ ಸಮ್ಮೇಳನದ ಗಮನ ಸೆಳೆದರು. ಅದೆ ರೀತಿ ಎಡ ಪಕ್ಷಗಳ ಐಕ್ಯತೆಯ ನೀತಿಯ ಜಾರಿಯಲ್ಲಿ, ಕರ್ನಾಟಕ ಸಿ.ಪಿ.ಐನ ಘಟಕದ ತಪ್ಪು ನಿಲುವೆಗಳಿಂದ ಸಿ.ಪಿ.ಐ.(ಎಂ)ನ ಘಟಕಗಳು ಎದುರಿಸುವ ಸಮಸ್ಯೆಗಳನ್ನು ಹಲವಾರು ಸಂಗತಿಗಳು ಸಮ್ಮೇಳನದ ಮುಂದಿಟ್ಟರು.

ಸ್ಥಳೀಯ ಸಂಸ್ಥೆಗಳಲ್ಲಿ ಸಿ.ಪಿ.ಐ.(ಎಂ) ನಿಂದ ಆಯ್ಕೆಯಾದ ಸದಸ್ಯರು ತಮ್ಮ ಅನುಭವಗಳನ್ನು ಹೇಳಿದರು, ಕುಂದಾಪುರ ಪುರಸಭೆಯ ಸಾಧನೆಗಳ ಬಗೆಗೂ ಸಂಗಾತಿಗಳು ವಿವರಗಳನ್ನು ಮುಂದಿಟ್ಟರು.

ರಾಜ್ಯದಲ್ಲಿ ಪಕ್ಷದ ಹಲವು ಘಟಕಗಳಲ್ಲಿ ಇತ್ತೀಚಿಗೆ ನಡೆದ ತಿದ್ದುಪಡಿ ಚಳುವಳಿಯ ಬಗ್ಗೆ ಸಂಗಾತಿಗಳು ತಮ್ಮ ಅನುಭವಗಳನ್ನು ನೀಡಿದರು. ತಿದ್ದುಪಡಿ ಚಳುವಳಿಯ ಭಾಗವಾಗಿ, ತಿದ್ದುಪಡಿ ಮಾಡಿಕೊಳ್ಳದವರ ಸದಸ್ಯತ್ವವನ್ನು ಸಂದರ್ಭವನ್ನು ನಿರ್ದಾಕ್ಷಿಣ್ಯವಾಗಿ ರದ್ದುಪಡಿಸಿದ ಬಗೆಗೆ ಜಿಲ್ಲೆಯೊಂದರ ಸಂಗಾತಿಗಳು ಹೇಳಿದರು. ತಿದ್ದುಪಡಿ ಚಳುವಳಿಯನ್ನು ತೀವ್ರವಾಗಿ ಜಾರಿಗೆ ತಂದು ಈ ಜಿಲ್ಲೆಯಲ್ಲಿ ಸದಸ್ಯತ್ವದ ಕಾಲು ಭಾಗವನ್ನು ಕೈಬಿಡಲಿಕ್ಕೂ ಹಿಂಜರಿಯಲಿಲ್ಲ. ತಿದ್ದುಪಡಿ ಚಳವಳಿ ಪಕ್ಷದ ಗುಣಮಟ್ಟ ಹೆಚ್ಚಿಸುವಲ್ಲಿ, ಸ್ಫೂರ್ತಿದಾಯಕವಾಗುವಲ್ಲಿ ಸಹಾಯಕವಾಗಿದೆ ಎಂದು ಬೆಳಕಿಗೆ ಬಂತು.



ಮಹಿಳೆಯರ ಮಧ್ಯೆ ಪಕ್ಷವನ್ನು ಬೆಳೆಸುವ ಮತ್ತು ಪಕ್ಷದಲ್ಲಿ ಮಹಿಳೆಯರನ್ನು ಬೆಳೆಸುವ ಬಗ್ಗೆ ಮಹಿಳಾ ಸಂಗಾತಿಗಳು ತಮ್ಮ ಅನುಭವ ವಿಚಾರಗಳನ್ನು ಹಂಚಿಕೊಂಡರು. ಮಹಿಳೆಯರಿಗೆ ಅಲಂಕಾರಿಕವಾಗಿ ಅಲ್ಲದೆ ನಿಜವಾದ ಸ್ಥಾನ ಕೊಟ್ಟು, ಅವರಿಗೆ, ಬೇಕಾದ ವಿಶಿಷ್ಟ ತರಬೇತಿ ಕೊಡುವ ಅಗತ್ಯದ ಬಗ್ಗೆ ಅವರು ಗಮನ ಸೆಳೆದರು. ಮಹಿಳಾ ಪೂರ್ಣವಾಧಿ ಕಾರ್ಯಕರ್ತರನ್ನು ಹೆಚ್ಚುಮಾಡಲು ಅವರ ವಿಶಿಷ್ಟ ಸಮಸ್ಯೆಗಳ ಬಗ್ಗೆ ಗಮನ ನೀಡುವಂತೆ ಅವರು ಕರೆಯಿತ್ತರು. ಮಹಿಳೆಯರ ಮಧ್ಯೆ ಪಕ್ಷದ ಪ್ರಭಾವ ಮತ್ತು ಪಕ್ಷದಲ್ಲಿ ಮಹಿಳೆಯರ ಸಂಖ್ಯೆ, ಗುಣಮಟ್ಟ ಹೆಚ್ಚಿಸುವ ಬಗ್ಗೆ ಪಕ್ಷದ ಎಲ್ಲಾ ಹಂತದ ನಾಯಕತ್ವ ಪ್ರಾಶಸ್ತ್ಯ ಕೊಡಲು ಅವರು ಒತ್ತಾಯಿಸಿದರು.

ಬೆಂಗಳೂರಿನಲ್ಲಿ ಬೆಳೆಯುತ್ತಿರುವ ಮಾಫಿಯಾ ಮತ್ತು ಅದು ಕಾರ್ಮಿಕರ ಬಡವರ ಚಳುವಳಿ ಒಡೆಯುವುದರಲ್ಲಿ ಭಾಗವಹಿಸಿದ್ದರ ಬಗ್ಗೆ ಗಮನ ಸೆಳೆದರು. ಒಬ್ಬ ಸಂಗಾತಿ. ಮಾಫಿಯಾ ಮತ್ತು ಕೋಮುವಾದಿಗಳ ಸವಾಲನ್ನು ಎದುರಿಸಲು ಪಕ್ಷ ಸಜ್ಜಾಗಬೇಕೆಂದು ಎಚ್ಚರಿಸಿದರು.

ದಲಿತರ ಮೇಲಿನ ದೌರ್ಜನ್ಯಗಳು, ದಲಿತ-ಸವರ್ಣೀಯರ ನಡುವೆ ಘರ್ಷಣೆ, ಜಲವಿವಾದಗಳ ಬಗ್ಗೆ, ಪ್ರಾದೇಶಿಕ ಸಮಾನತೆ ಬಗ್ಗೆ ವರದಿಯಲ್ಲಿನ ವಿಶ್ಲೇಷಣೆ ಬಗ್ಗೆ ಹಲವು ಸಂಗಾತಿಗಳು ಬೆಂಬಲಿಸಿ ಮಾತನಾಡಿದರು.

ರಾಜ್ಯದ ರಾಜಕೀಯದಲ್ಲಿ ಮಧ್ಯಪ್ರವೇಶ, ಕಾರ್ಮಿಕ ರಂಗದಲ್ಲಿನ ದೌರ್ಬಲ್ಯಗಳು ಇತ್ಯಾದಿಗಳ ಬಗ್ಗೆ ವರದಿ ಗುರುತಿಸಿರುವ ದೌರ್ಬಲ್ಯಗಳನ್ನು ಹೋಗಲಾಡಿಸುವ ಬಗ್ಗೆ ಸಂಗಾತಿಗಳು ಅಮೂಲ್ಯ ಸಲಹೆಗಳನ್ನು ನೀಡಿದರು. ಮೀನುಗಾರರ ಮಧ್ಯೆ ಪಕ್ಷದ ಚಳುವಳಿ ಪ್ರಭಾವ ಬೆಳೆಸುವ ಬಗ್ಗೆ, ಪೈವಡ್ ಕೈಗಾರಿಕೆಯ ಬಿಕ್ಕಟ್ಟಿನ ಬಗ್ಗೆ ಪಕ್ಷ ಗಮನ ಹರಿಸಬೇಕೆಂದು ಸಂಗಾತಿಗಳು ಒತ್ತಾಯಿಸಿದರು. ಸಾಮ್ರಾಜ್ಯಶಾಹಿ ಪ್ರೇರಿತ ಪರಿಸರವಾದಿಗಳ ವಿರುದ್ಧ ಹೋರಾಟ, ಗುತ್ತೇದಾರಿಗಳ ಪರಿಸರದ ಬಗ್ಗೆ ಅಲಕ್ಷ್ಯದ ವಿರುದ್ಧದ ಹೋರಾಟ, ಬೆಳವಣಿಗೆಯ ಯೋಜನೆಗಳಿಂದ ತೊಂದರೆಗೊಳಗಾದವರಿಗೆ ಪರಿಹಾರ/ಪುನರ್ವಸತಿ -ಇವೆಲ್ಲವನ್ನೂ ಪರಿಣಾಮಕಾರಿಯಾಗಿ ಜಾರಿಗೆ ತರುವ ಪರಿಸರ ನೀತಿಯ ಜಾರಿಯ ಬಗ್ಗೆ ಹಲವು ಸಂಗಾತಿಗಳು ಜಿಜ್ಞಾಸೆ ನಡೆಸಿದರು.

ಪಕ್ಷದ ಮೇಲೆ ಹೆಚ್ಚುತ್ತಿರುವ ದಾಳಿ, ಅಥವಾ ಪಕ್ಷ ಎದುರಿಸಲು ಪಕ್ಷದ ವರ್ಗನೀತಿ, ರಾಜಕೀಯವಾಗಿ ಹೋರಾಡುವ ಬಗ್ಗೆ ಹಲವು ಸಂಗಾತಿಗಳು ಒತ್ತಿ ಹೇಳಿದರು. ಪಕ್ಷದ ಕೇಂದ್ರ ಹಾಗೂ ಎಲ್ಲಾ ಹಂತಗಳ ಸಂಘಟನೆಯನ್ನು ಬಲಗೊಳಿಸುವ ಬಗ್ಗೆ ಪಕ್ಷದ ಮುಂದಿರುವ ಕರ್ತವ್ಯಗಳ ಬಗ್ಗೆ ಸಂಗಾತಿಗಳು ತೀವ್ರ ಚರ್ಚೆ ನಡೆಸಿದರು.

ಐಕ್ಯರಂಗದ ಪ್ರಚಾರ ಹೆಚ್ಚಿಸುವ ಬಗ್ಗೆ ಒತ್ತು ನೀಡಿದ ಹಲವು ಸಂಗಾತಿಗಳು, ಪಕ್ಷದ ರಾಜಕೀಯ ಚಟುವಟಿಕೆಗಳಲ್ಲಿಐಕ್ಯರಂಗದ ಪಾತ್ರದ ಬಗ್ಗೆ ಮಾತನಾಡಿದರು. ಐಕ್ಯರಂಗ ಅಲ್ಲದೆ ಇತರ ಹಲವಾರು ಮಾಧ್ಯಮಗಳನ್ನು (ಇತರ ಪತ್ರಿಕೆಗಳ ಕಾಲಂಗಳು, ಆಡಿಯೋ, ವಿಡಿಯೋ ಕ್ಯಾಸೆಟ್ ಇತ್ಯಾದಿ) ಬಳಸಿ ಪ್ರಚಾರದಲ್ಲಿ ತೊಡಗಲು ಪಕ್ಷ ಸಜ್ಜಾಗಬೇಕೆಂದು ಒತ್ತಾಯಿಸಿದರು. ಪಕ್ಷದ ಸಾಂಸ್ಕೃತಿಕ ಕ್ಷೇತ್ರದಲ್ಲಿನ ಜವಾಬ್ದಾರಿಗಳ ಬಗ್ಗೆ ಹಲವಾರು ಸಂಗಾತಿಗಳು ಮಾತನಾಡಿ, ಅದನ್ನು ನಿರ್ವಹಿಸುವ ಬಗ್ಗೆ ಸಲಹೆ ಇತ್ತರು. ಪಕ್ಷ ಸಂಪರ್ಕ ತಂತ್ರಜ್ಞಾನದಲ್ಲಿ ಆಗಿರುವ ಬೆಳವಣಿಗೆ (ಇ-ಮೈಲ್, ಇಂಟರ್‌ನೆಟ್) ಗಳನ್ನು ಬಳಸಿ ತನ್ನ ಪ್ರಚಾರದ ಪರಿಣಾಮಕಾರಿತನ ಹೆಚ್ಚಿಸುವ ಬಗ್ಗೆ ಸಂಗಾತಿಗಳು ಸಲಹೆ ನೀಡಿದರು.

"ನಾಲ್ಕು ಸಾವಿರದ ಮೂರು ಊಟ ಬಿಟ್ಟಿದ್ದೇನೆ.."

ಪಕ್ಷದ ಕಾರ್ಯಕರ್ತರು ಪಕ್ಷ ಕಟ್ಟಲು ಮಾಡಬೇಕಾದ ತ್ಯಾಗ, ಎದುರಿಸಬೇಕಾದ ಸ್ಥಿತಿ ಬಗ್ಗೆ ಹೇಳುತ್ತಾ ಇದು ತುಮಕೂರಿನ ಹಿರಿಯ ಸಂಗಾತಿ ಕಾಂ. ಚೆನ್ನಪ್ಪನವರ ಉದ್ಗಾರ. ಒಂದು ಹೊತ್ತು ಊಟ ಬಿಟ್ಟರೆ ಆರೋಗ್ಯಕ್ಕೆ ಒಳ್ಳೆಯದು ಎಂದು ಹಾಸ್ಯ ಮಾಡಿದ ಅವರು ಪಕ್ಷದ ಪೂರ್ಣಾವಧಿ ಕಾರ್ಯಕರ್ತರ ಜವಾಬ್ದಾರಿಯ ಬಗ್ಗೆ ಮಾರ್ಮಿಕವಾಗಿ ಮಾತನಾಡಿದರು.

"ಜೋಳದ ರೊಟ್ಟಿ ಇದ್ದಂಗ....'

ಸಮ್ಮೇಳನದಲ್ಲಿ ಮಂಡಿಸಿದ ವರದಿ ಜೋಳದ ರೊಟ್ಟಿಇದ್ದಂಗ ಅಗಿಯುತ್ತ ಹೋದ ಹಾಗೆ ರುಚಿಯಾಗುತ್ತಾಹೋಗುತ್ತದೆ. ಆದರೆ ಹಲ್ಲು ಇಲ್ಲದವರಿಗೆ ಇದ ರುಚಿ ಗೊತ್ತಾಗುವುದಿಲ್ಲ ಎಂದು ವರದಿಯ ಸಮಗ್ರತೆ, ಆಳದ ಬಗ್ಗೆ ಹೇಳಿದವರು ಕಾಂ. ಫಕೀರಪ್ಪ ಹೋತನಹಳ್ಳಿ.

"ಸಮುದ್ರ ಮಂಥನದಲ್ಲಿ ಸಿಪಿಐ(ಎಂ) ಕಡೆಗೋಲಾಗಬೇಕು.."

ಈಗ ಭಾರತದ ರಾಜಕೀಯದಲ್ಲಿ ನಡೆಯುತ್ತಿರುವುದು ಸಮುದ್ರಮಂಥನ. ಸಮುದ್ರಮಂಥನದಲ್ಲಿ ಮೊದಲು ಬರುವುದು ಹಾಲಾಹಲ ವಿಷ. ಕೋಮುವಾದದ ವಿಷ ಈಗಾಗಲೇ ಬಂದಿದೆ. ಸಿಪಿಐ(ಎಂ) ಈ ಸಮುದ್ರ ಮಂಥನ ಮುಂದುವರೆಸಿ ಅಮೃತ ತರುವ ಕಡೆಗೋಲಾಗಬೇಕು ಎಂದು ವ್ಯಾಖ್ಯಾನಿಸಿದವರು ಬೆಂಗಳೂರಿನ ಕಾಂ. ಸುರೇಂದ್ರ ರಾವ್.

"ಹೆಂಡ್ತಿಗೆ ಹೊಡಿತಾನೆ ......"

ತಿದ್ದುಪಡಿ ಚಳುವಳಿ ಬಗ್ಗೆ ವಿವರವಾಗಿ ಮಾತನಾಡಿದ ಸಂಗಾತಿಯೊಬ್ಬರು, ಕುಡಿತ, ಜೂಜು ಮುಂತಾದ ದುಶ್ಚಟಗಳನ್ನು ತಿದ್ದುಪಡಿ ಚಳುವಳಿಯಲ್ಲಿ ಬಿಟ್ಟರೂ ಹೆಂಡತಿಗೆ ಹೊಡೆಯುವ ದುಶ್ಚಟದ ಸಂಗಾತಿಯನ್ನು ಕೈ ಬಿಡಬೇಕಾದ ಬಗ್ಗೆ ಹೇಳುತ್ತಾ ತಿದ್ದುಪಡಿ ಚಳುವಳಿ ಪರಿಣಾಮಕಾರಿತನದ ಬಗ್ಗೆ ಹೇಳಿದರು.

"ಝಣ ಝಣ.. ಜೇಬಿನ ತುಂಬ ಹಣ.."

ಇದು ರಾಜ್ಯದಲ್ಲಿ ಜಾರಿಗೆ ಬರಲು ತಯಾರಾಗುತ್ತಿರುವ ಬದಲಾದ ಪ್ರಾಥಮಿಕ ಶಾಲೆಯ ಪಠ್ಯಪುಸ್ತಕದ ಪಾಠ. ಸರಕು ಸಂಸ್ಕೃತಿಯನ್ನು ಎಳೆ ಮನಗಳಲ್ಲಿ ಬಿತ್ತಲು ವಿಶ್ವಬ್ಯಾಂಕ್ ಪ್ರಾಯೋಜಿತ ಕಾರ್ಯಕ್ರಮವೊಂದರ ಅಪಾಯದ ಬಗ್ಗೆ ಹೇಳುತ್ತಾ ಸಂಗಾತಿಯೊಬ್ಬರ ಎಚ್ಚರಿಕೆ.

- ಶರತ್‌ಚಂದ್ರ

ದುಡಿಯುವ ವರ್ಗದ ದೃಷ್ಟಿಕೋಣದಿಂದ ಹೊಸಶಕ್ತಿಯಾಗಿ ಮೂಡಿಬರುತ್ತಿರುವ ಸಿಪಿಐ(ಎಂ)ನ ಹದಿನಾರನೇ ರಾಜ್ಯ ಸಮ್ಮೇಳನ ಸಹಜವಾಗಿಯೇ ಭಾರತದ ಸ್ವಾತಂತ್ರ್ಯ ಆಂದೋಲನದ ಕನಸುಗಳ ಈಡೇರಿಕೆಯತ್ತ ನಡೆದ ಪ್ರಯತ್ನಗಳ ಸಫಲತೆ-ವಿಫಲತೆಗಳ ಪರಾಮರ್ಶೆ ನಡೆಸಿ ಒಟ್ಟು ೭೯ ನಿರ್ಣಯಗಳನ್ನು ಅಂಗೀಕರಿಸಿತು. ವಿವಿಧ ಜನವಿಭಾಗಗಳ ಸಮಸ್ಯೆಗಳತ್ತ, ಅವುಗಳ ಪರಿಹಾರದತ್ತ, ರಾಜ್ಯದ ಅಭಿವೃದ್ಧಿ ಅವಶ್ಯಕತೆಗಳತ್ತ, ಸಮೂಹ ಮಾಧ್ಯಮ-ಸಾಂಸ್ಕೃತಿಕ ಬೆಳವಣಿಗೆಗಳತ್ತ, 'ಐಕ್ಯರಂಗ' ದ ಪ್ರಸಾರವೂ ಸೇರಿದಂತೆ ಸೈದ್ಧಾಂತಿಕ ಚಟುವಟಿಕೆಗಳನ್ನು ವಿಸ್ತರಿಸುವತ್ತ ಗಮನ ಸೆಳೆದು ರಾಜ್ಯದ ದುಡಿಯುವ ಜನಗಳ ಆಂದೋಲನವನ್ನು ಪ್ರಜಾಪ್ರಭುತ್ವ ಆಂದೋಲನವನ್ನು ಬೆಳೆಸುವಲ್ಲಿ ಬಹಳ ಮಹತ್ವಪೂರ್ಣವಾದವುಗಳು. ಈ ಸಂಚಿಕೆಯಲ್ಲಿ ಸ್ಥಳಾಭಾವದಿಂದ ಕೆಲವನ್ನಷ್ಟೇ ಮುಂದಿನ ಪುಟಗಳಲ್ಲಿ ಪ್ರಕಟಿಸಲಾಗಿದೆ. ಇತರ ನಿರ್ಣಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

16ನೇ ರಾಜ್ಯ ಸಮ್ಮೇಳನ ಕೋಲಾರ
ಸಿ.ಪಿ.ಐ.(ಎಂ)
ನಿರ್ಣಯಗಳು

ಭೂಹೀನ ಬಡವರ ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಲು ಆಗ್ರಹ

ರಾಜ್ಯದಲ್ಲಿಸಾವಿರಾರು ಹೆಕ್ಟೇರ್ ಕೃಷಿಯೋಗ್ಯ ಭೂಮಿಯನ್ನು ಸರ್ಕಾರ ತನ್ನ ವಶದಲ್ಲಿ ಇಟ್ಟುಕೊಂಡಿದೆ. ಗೋಮಾಳ ಮುಂತಾದ ಹೆಸರಿನಲ್ಲಿ ಸಾವಿರಾರು ಎಕರೆ ಭೂಮಿ ಕಂದಾಯ ಇಲಾಖೆಯ ಅಡಿಯಲ್ಲಿದೆ. ಕಾರಣಾಂತರಗಳಿಂದ ಜನವಸತಿ ನಷ್ಟವಾದ ಬೇಚಿರಾಕ್ ಗ್ರಾಮಗಳ ಕೃಷಿ ಭೂಮಿ ಕೆಲವು ವರ್ಷಗಳ ಹಿಂದೆ ಸಾಮಾಜಿಕ ಅರಣ್ಯ ಬೆಳೆಸುವ ಹೆಸರಿನಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಸಿ. ಮತ್ತು ಡಿ ವರ್ಗದ ಸಾವಿರಾರು ಎಕರೆ ಭೂಮಿಯ ಒಂದು ದೊಡ್ಡ ಭಾಗ ಕೃಷಿಗೆ ಯೋಗ್ಯವಾದ ಭೂಮಿಯಾಗಿದೆ.

ಕಳೆದ ಕೆಲವು ದಶಕಗಳಿಂದ ಭೂಹೀನ ಬಡವರು, ಮತ್ತು ಸಣ್ಣ ರೈತರು ಸರ್ಕಾರದ ಸ್ವಾಧೀನದಲ್ಲಿರುವ ಕೃಷಿಯೋಗ್ಯ ಭೂಮಿಯನ್ನು ಸಾಗುವಳಿ ಮಾಡಲು ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಧಾರವಾಡ ಜಿಲ್ಲೆಯ ಹಾನಗಲ್ ಮತ್ತು ಇತರ ತಾಲೂಕುಗಳಲ್ಲಿ, ಬೆಳಗಾಂವ್ ಜಿಲ್ಲೆಯ ಸವದತ್ತಿ, ರಾಮದುರ್ಗ ಮೊದಲಾದ ತಾಲೂಕುಗಳಲ್ಲಿ, ಬಿಜಾಪುರ, ಗುಲ್ಬರ್ಗಾ, ಚಿತ್ರದುರ್ಗ, ಬಳ್ಳಾರಿ, ಕೋಲಾರ, ಬೆಂಗಳೂರು, ದ.ಕನ್ನಡ ಮತ್ತು ಉ.ಕನ್ನಡ ಜಿಲ್ಲೆಗಳಲ್ಲಿ ಸರ್ಕಾರಿ ಭೂಮಿ ಆಕ್ರಮಣ ಚಳವಳಿ ನಡೆಯುತ್ತಲೇ ಬಂದಿದೆ. ಹಾಸನ, ಕೊಡಗು, ಚಿಕ್ಕಮಗಳೂರು, ಮೊದಲಾದ ಜಿಲ್ಲೆಗಳಲ್ಲಿ ಶ್ರೀಮಂತ ತೋಟ ಮಾಲೀಕರು ಸಹ ಸರ್ಕಾರಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ.

ಸರ್ಕಾರದ ವಶದಲ್ಲಿರುವ ಕೃಷಿಯೋಗ್ಯ ಭೂಮಿಯನ್ನು ಭೂಹೀನ ಬಡವರಿಗೆ ವಿತರಣೆ ಮಾಡುವ ಮೂಲಕ ಭೂಹೀನ ಬಡವರ ಮತ್ತು ಬಡರೈತರ ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವ ಮೂಲಕ, ಗ್ರಾಮೀಣ ನಿರುದ್ಯೋಗ ಕಡಿಮೆಯಾಗುವುದಲ್ಲದೆ, ಕೃಷಿ ಉತ್ಪಾದನೆ ಗಣನೀಯವಾಗಿ ಹೆಚ್ಚಾಗುತ್ತದೆ. ಭೂಹೀನ ಕೃಷಿ ಕೂಲಿಕಾರರು ಜೀವನೋಪಾಯಕ್ಕಾಗಿ ಉದ್ಯೋಗ ಹುಡುಕಿಕೊಂಡು ಊರೂರು ಅಲೆಯುವುದು ತಪ್ಪುತ್ತದೆ. ಗ್ರಾಮೀಣ ಅಭಿವೃದ್ಧಿಗೆ ಚಾಲನೆ ದೊರೆಯುತ್ತದೆ.

ಆದರೆ ಬಂಡವಾಳಶಾಹಿ ಭೂಮಾಲಿಕ ಶಕ್ತಿಗಳ ಹಿಡಿತದಲ್ಲಿರುವ ಸರ್ಕಾರಗಳು ಭೂಮಿಯನ್ನು ವಿತರಣೆ ಮಾಡಲು ಮುಂದಾಗುತ್ತಿಲ್ಲ. ಬದಲಾಗಿ ಬಗರ್‌ಹುಕುಂ ಸಾಗುವಳಿದಾರರ ಮೇಲೆ ಸುಳ್ಳ ಕೇಸುಗಳನ್ನು ದಾಖಲು ಮಾಡಿ, ಮಹಿಳೆಯರು ಮುದುಕರು ಎಂಬ ಭೇದವಿಲ್ಲದೆ ಅವರನ್ನು ಬಂಧಿಸಿ ಜೈಲಿಗೆ ಹಾಕಲಾಗುತ್ತದೆ ಮತ್ತು ಆ ಮೂಲಕ ಬಲತ್ಕಾರದಿಂದ ಅವರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಹಲವು ವರ್ಷಗಳಿಂದ ಕಷ್ಟಪಟ್ಟು ಸಾಗುವಳಿ ಮಾಡಿದ ಭೂಮಿಯಲ್ಲಿ ಸಾಮಾಜಿಕ ಅರಣ್ಯ ಬೆಳೆಸುವ ಹೆಸರಿನಲ್ಲಿ ನೀಲಗಿರಿ ಮರಗಳನ್ನು ಬೆಳೆಸಲಾಗುತ್ತಿದೆ. ಭೂಮಿಗಾಗಿ ಬಡ ಕೃಷಿ ಕೂಲಿಕಾರರು ನಡೆಸುತ್ತಿರುವ ಚಳುವಳಿಯನ್ನು ಬಳಸಿಕೊಂಡು ಶ್ರೀಮಂತ ಕಾಫಿ ಪ್ಲಾಂಟರುಗಳು ಕಬಳಿಸಿದ ಸಾವಿರಾರು ಹೆಕ್ಟೇರ್ ಅರಣ್ಯ ಭೂಮಿಯನ್ನು ಸಕ್ರಮ ಗೊಳಿಸಲಾಗುತ್ತಿದೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16ನೇ ರಾಜ್ಯ ಸಮ್ಮೇಳನವು ಬಡ ಬಗರ್‌ಹುಕುಂ ಸಾಗುವಳಿದಾರರನ್ನು ದೌರ್ಜನ್ಯದಿಂದ ಒಕ್ಕಲೆಬ್ಬಿಸಿ ಶ್ರೀಮಂತರ ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ನಂ.50 ರ ನಮೂನೆಯಲ್ಲಿ ಅರ್ಜಿಸಲ್ಲಿಸಲು ಮತ್ತೊಮ್ಮೆ ಅವಧಿಯನ್ನು ನಿಗದು ಪಡಿಸಲು ರಾಜ್ಯ ಜನತಾದಳ ಸರ್ಕಾರವು ಇತ್ತೀಚಿಗೆ ಕೈಗೊಂಡಿರುವ ತೀರ್ಮಾನವನ್ನು ಸಮ್ಮೇಳನವು ಸ್ವಾಗತಿಸುತ್ತಿದೆಯಾದರೂ ಇದೂ ಸಹ ಕಾಫಿ ತೋಟಗಳ ಮಾಲೀಕರ ಅನುಕೂಲಕ್ಕಾಗಿ ಹೂಡುವ ತಂತ್ರವಾಗ ಬಾರದೆಂದು ಎಚ್ಚರಿಸುತ್ತದೆ.

ಧಾರವಾಡ ಜಿಲ್ಲೆಯ ಹಾನಗಲ್ ಪ್ರದೇಶದಲ್ಲಿ ಬಗರ್‌ಹುಕುಂ ಸಾಗುವಳಿದಾರ ಬಡವರ ಮೇಲೆ ದಾಖಲು ಮಾಡಲಾದ ಎಲ್ಲ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ. ಸರ್ಕಾರವು ಭರವಸೆ ಕೊಟ್ಟಿರುವಂತೆ ಅಲ್ಲಿ ಸಾಗುವಳಿ ಮಾಡಲಾಗುತ್ತಿರುವ ಸರ್ಕಾರಿ ಭೂಮಿಯನ್ನು ಪರಿಶೀಲಿಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಬೇಕೆಂದು ಆಗ್ರಹಿಸುವ ಸಮ್ಮೇಳನವು ಹಾನಗಲ್ ಪ್ರದೇಶದ ಭೂ ಹೋರಾಟಕ್ಕೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ.

ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಿಂದ 10 ಕಿ.ಮೀ. ವರೆಗಿನ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಲು ಬರುವುದಿಲ್ಲ ಎಂಬ ಅಡೆತಡೆಯನ್ನು ತೆಗೆದುಹಾಕಬೇಕೆಂದು ಒತ್ತಾಯಿಸುವ ಸಮ್ಮೇಳನವು ಮಂಗಳೂರು ಮಾತ್ರವಲ್ಲದೆ ಇತರ ಎಲ್ಲ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿ ಈ ತರದ ನಿರ್ಬಂಧಗಳನ್ನು ತೆಗೆದುಹಾಕಬೇಕೆಂದು ಒತ್ತಾಯಿಸುತ್ತದೆ.

ಕಾರಣಾಂತರಗಳಿಂದ ಅರಣ್ಯ ಇಲಾಖೆಗೆ ವರ್ಗಾಯಿಸಲಾದ ಎಲ್ಲ ಕೃಷಿ ಯೋಗ್ಯ ಭೂಮಿಯನ್ನು ವಾಪಸ್ ಪಡೆದು ಭೂಹೀನ ಬಡವರಿಗೆ ವಿತರಣೆ ಮಾಡಬೇಕೆಂದು ಒತ್ತಾಯಿಸುವ ಸಮ್ಮೇಳನವು ಸರ್ಕಾರಿ ಜಾಗೆಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ವಸತಿಹೀನರ ಮನೆ ನಿವೇಶನಗಳನ್ನು ಸಕ್ರಮಗೊಳಿಸಿ ಅವರಿಗೆ ಹಕ್ಕು ಪತ್ರಗಳನ್ನು ನೀಡಬೇಕೆಂದೂ, ರಸ್ತೆಗಳನ್ನು ಅಗಲ ಮಾಡುವ ಸಂದರ್ಭಗಳಲ್ಲಿ ಮನೆಗಳನ್ನು, ಸಣ್ಣಪುಟ್ಟ ಅಂಗಡಿಗಳನ್ನು ಕಳೆದು ಕೊಳ್ಳುವಬಡವರಿಗೆ ಸೂಕ್ತ ಬದಲಿ ವ್ಯವಸ್ಥೆ ಮಾಡಬೇಕೆಂದು ಸಮ್ಮೇಳನವು ಒತ್ತಾಯಿಸುತ್ತದೆ.

ಮಂಡನೆ: ನಿತ್ಯಾನಂದ ಸ್ವಾಮಿ
ಅನುಮೋದನೆ: ಭೀಮಸಿ ಕಲಾದಗಿ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹೋರಾಟಕ್ಕೆ ಬೆಂಬಲ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು, ಕೇಂದ್ರ ಸರ್ಕಾರದ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಸರ್ಕಾರಿ ನೌಕರರಿಗೂ ಅನುಷ್ಠಾನಗೊಳಿಸುವಂತೆ ಒತ್ತಾಯಿಸಿ ದಿನಾಂಕ 2.1.98 ರಿಂದ ರಾಜ್ಯಾದ್ಯಂತ ನಡೆಯುವ ಅನಿರ್ದಿಷ್ಟ ಮುಷ್ಕರಕ್ಕೆ ಸಿ.ಪಿ.ಐ(ಎಂ) 16ನೇ ರಾಜ್ಯ ಸಮ್ಮೇಳನ ಬೆಂಬಲಿಸುತ್ತದೆ.

ಕೇಂದ್ರದ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗಳಿಸುವಲ್ಲಿ ರಾಷ್ಟ್ರದ ಅನೇಕ ರಾಜ್ಯ ಸರ್ಕಾರಗಳು ಈಗಾಗಲೇ ಪ್ರಯತ್ನಿಸುತ್ತಿವೆ ಹಾಗೂ ಜಾರಿಗೊಳಿಸಿವೆ. ಆದರೆ ಕರ್ನಾಟಕ ಸರ್ಕಾರ ರಾಜ್ಯದ ಸುಮಾರು 6 ಲಕ್ಷ ಸರ್ಕಾರಿ ನೌಕರರಿಗೆ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡುವಲ್ಲಿ ವಿಳಂಬ ನೀತಿ ಅನುಸರಿಸುವುದು ನೌಕರರಲ್ಲಿ ಆತಂಕ ಉಂಟುಮಾಡಿದೆ.

ಈ ಸಂದರ್ಭದಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್ ಮತ್ತು ಉಪ ಮುಖ್ಯಮಂತ್ರಿಗಳಾದ ಶ್ರೀಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರವು 5ನೇ ವೇತನ ಆಯೋಗ ಶಿಫಾರಸ್ಸು ಮಾಡಿದ ನಂತರದಲ್ಲಿ ಕರ್ನಾಟಕದಲ್ಲಿಯೂ ರಾಜ್ಯ ಸರ್ಕಾರಿ ನೌಕರರಿಗೂ ವಿಸ್ತರಿಸುತ್ತೇವೆಂದು ಆಶ್ವಾಸನೆ ನೀಡಿದ್ದರು. ಅಲ್ಲದೇ 16.12.97 ರಂದು ನಡೆದ ಸರ್ಕಾರ ಮತ್ತು ಸಂಘದ ಪದಾಧಿಕಾರಿಗಳ ಮಾತುಕತೆ ಸಭೆಯಲ್ಲಿಯೂ ಡಿಸೆಂಬರ್ 30 ರೊಳಗಾಗಿ 5ನೇ ವೇತನ ಆಯೋಗದ ಶಿಫಾರಸ್ಸು ಜಾರಿಗೊಳಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆದರೆ ಈಗ ಪುನಃ 5ನೇ ವೇತನ ಆಯೋಗಕ್ಕೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ ಒಂದು ಆಯೋಗ ರಚಿಸುತ್ತೇವೆ, ಒಂದು ವರ್ಷದೊಳಗಾಗಿ ವರದಿ ಸಲ್ಲಿಸಲಾಗುವುದು ಎಂದು ಹೇಳಿಕೆ ನೀಡಿರುವುದು ಸರ್ಕಾರಿ ನೌಕರರು ನಿರಾಶೆಗೊಳ್ಳುವಂತಹದ್ದಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ದಿನಾಂಕ 2.1.98 ರಿಂದ ಅನಿರ್ದಿಷ್ಟ ಮುಷ್ಕರಕ್ಕೆ ಕರೆ ಕೊಟ್ಟಿದೆ. ಈ ಅನಿರ್ದಿಷ್ಟ ಮುಷ್ಕರಕ್ಕೆ ಸಿ.ಪಿ.ಐ.(ಎಂ) 16ನೇ ರಾಜ್ಯ ಸಮ್ಮೇಳನವು ಬೆಂಬಲ ವ್ಯಕ್ತಪಡಿಸುತ್ತದೆ ಹಾಗೂ ಸರ್ಕಾರವು ತಕ್ಷಣ ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದೆ. ಕೇಂದ್ರ ಸರಕಾರವು ಈ ಬೇಡಿಕೆಯ ಈಡೇರಿಕೆಗೆ ಬೇಕಾದ ಧನಸಹಾಯವನ್ನು ಮಾಡಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟಕ್ಕ ಬೆಂಬಲ

ದೇಶಕ್ಕೆ ಭಾರೀ ವಿದೇಶಿ ವಿನಿಮಯವನ್ನು ದೊರಕಿಸುವ, ಮಾಲೀಕರಿಗೆ ಭಾರೀ ಲಾಭವನ್ನು ಒದಗಿಸುವ ಬೆಂಗಳೂರಿನ ಸಿದ್ಧ ಉಡುಪು (ಗಾರ್ಮೆಂಟ್ಸ್) ತಯಾರಿಸುವ ಕೆಲವು ಕಾರ್ಖಾನೆಗಳ ಸಾವಿರಾರು ಕಾರ್ಮಿಕರು ಕಳೆದ ಒಂದೆರಡು ವರ್ಷಗಳಿಂದ ತಮ್ಮ ಹಕ್ಕುಗಳ ರಕ್ಷಣೆಗಾಗಿ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಇವರೆಲ್ಲರು ಮಹಿಳೆಯರು. ಕನಿಷ್ಠ ಕೂಲಿಯ ಜಾರಿಗಾಗಿ, ಕಾರ್ಮಿಕ ಸಂಘದ ಮಾನ್ಯತೆಗಾಗಿ ಈ ಮಹಿಳಾ ಕಾರ್ಮಿಕರು ಆರಂಭಿಸಿದ ಹೋರಾಟವನ್ನು ಛಿದ್ರಗೊಳಿಸಲು ಮಾಲೀಕ ವರ್ಗ ಆರಂಭದಲ್ಲಿ ಗುಂಡಾಗಿರಿಯನ್ನು ಬಳಸಿತಲ್ಲದೆ ಕಾರ್ಮಿಕ ಸಂಘದ ಮುಖಂಡರನ್ನು ಕೆಲಸದಿಂದ ತೆಗೆದುಹಾಕಿತು. ಮಾಲೀಕ ವರ್ಗದ ಈ ದಬ್ಬಾಳಿಕೆಯನ್ನು ಕಾರ್ಮಿಕರು ಧೈರ್ಯದಿಂದ ಎದುರಿಸಿ ಹೋರಾಟವನ್ನು ತೀವ್ರಗೊಳಿಸುತ್ತಾ ಹೋದುದರಿಂದ ತೀವ್ರ ಮುಖಭಂಗಕ್ಕೆ ಒಳಗಾದ ಮಾಲೀಕ ವರ್ಗ ಕಾರ್ಖಾನೆಗಳಿಗೆ ಅಕ್ರಮ ವಾಗಿ ಬೀಗಮುದ್ರೆ ಹಾಕಿ ಕಾರ್ಮಿಕರ ಕೆಲಸದ ಹಕ್ಕನ್ನು ಕಿತ್ತುಕೊಳ್ಳುವ ಕ್ರಮ ಕೈಗೊಂಡಿದೆ. ಸಾಮ್ರಾಟ್ ಅಶೋಕ್ ಎಕ್ಸ್‌ಪೋರ್ಟ್ಸ್ ಲಿ., ಅಪಿಗೋ, ಟೆಕ್ಸ್, ರಂಕಾ ಫ್ಯಾಷನ್ಸ್ ಮುಂತಾದ ಕಾರ್ಖಾನೆಗಳನ್ನು ಅಕ್ರಮವಾಗಿ ಮುಚ್ಚಿರುವುದರಿಂದ ಸುಮಾರು 5000 ಮಹಿಳಾ ಕಾರ್ಮಿಕರು ಇಂದು ಬೀದಿ ಪಾಲಾಗುವ ಪರಿಸ್ಥಿತಿ ಉಂಟಾಗಿದೆ. ಕಾರ್ಮಿಕರ ಕಾನೂನುಗಳನ್ನು ಧಿಕ್ಕರಿಸಿ ಮಾಲೀಕರು ಕಾರ್ಖಾನೆಗಳನ್ನು ಮುಚ್ಚುತ್ತಿದ್ದರೂ ಸರ್ಕಾರ ಮಾಲೀಕರ ವಿರುದ್ಧ ಕ್ರಮ ಜರುಗಿಸಲು ವಿಫಲವಾಗಿರುವುದು ಕಳವಳಕಾರಿ ಸಂಗತಿಯಾಗಿದೆ.

ಸರ್ಕಾರದ ಉದಾರೀಕರಣ ನೀತಿ ಈ ಲಾಭಕೋರ ಮಾಲೀಕರಿಗೆ ತುಂಬ ಸಹಕಾರಿಯಾಗಿ ಬಂದಿದೆ. ಕಾರ್ಮಿಕ ಹೋರಾಟವನ್ನು ಮುರಿಯುವ ಉದ್ದೇಶದಿಂದ ಇವರು ಒಂದು ಘಟಕದ ಬಾಗಿಲು ಮುಚ್ಚಿ ತಮ್ಮ ಒಡೆತನದ ಇನ್ನೊಂದು ಘಟಕದಲ್ಲಿ ಉತ್ಪಾದನೆಯನ್ನು ನಡೆಸುವುದಕ್ಕೆ, ಅಥವಾ ಇನ್ನೊಂದು ಹೆಸರಿನಲ್ಲಿ ಹೊಸ ಕಾರ್ಖಾನೆ ಯನ್ನು ಆರಂಭಿಸಿ ಉತ್ಪಾದನೆಯನ್ನು ಮಾಡಲು ಸರ್ಕಾರದ ಧೋರಣೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಡಿಸೆಂಬರ್ 30 ರಿಂದ ಕೋಲಾರದಲ್ಲಿ ಆರಂಭವಾಗಿರುವ ಸಿ.ಪಿ.ಐ.(ಎಂ) ಪಕ್ಷದ 16ನೇ ರಾಜ್ಯ ಸಮ್ಮೇಳನವು ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಮಿಕರ ಮೇಲೆ ಮಾಲೀಕ ವರ್ಗದಿಂದ ನಡೆದಿರುವ ದೌರ್ಜನ್ಯವನ್ನು ತಡೆಯಲು ಸರ್ಕಾರದ ವಿಫಲತೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತದೆ. ಮತ್ತು ಹೋರಾಟ ನಿರತ ಕಾರ್ಮಿಕರಿಗೆ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ.

ಮಂಡನೆ: ರಾಮಯ್ಯ
ಅನುಮೋದನೆ: ವರಲಕ್ಷ್ಮಿ



ಸಾಂಸ್ಕೃತಿಕ ಉತ್ಸವ

ಪ್ರಶ್ನಿಸಲು ಪ್ರೇರೇಪಿಸುವಂತೆ ಕಲಾವಿದರಿಗೆ ಕರೆ

ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರಲು ಬಹುರಾಷ್ಟ್ರೀಯ ಕಂಪನಿಗಳನ್ನು ಒಳಗೊಂಡಂತೆ ಬಂಡವಾಳಶಾಹಿಗಳು ಎಲ್ಲಾ ರೀತಿಯ ಸಹಕಾರ ನೀಡುತ್ತಿವೆ. ಕೋಮುವಾದಿಗಳನ್ನು, ಬಹುರಾಷ್ಟ್ರೀಯ ಕಂಪನಿಗಳನ್ನೂ ಹಿಮ್ಮೆಟ್ಟಿಸಬೇಕು ಎಂದು ಪತ್ರಕರ್ತ ಜಿ.ಎನ್. ಮೋಹನ್ ಅವರು ಕರೆ ನೀಡಿದರು.

ಕೋಲಾರದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ೧೬ನೇಯ ರಾಜ್ಯ ಸಮ್ಮೇಳನದ ಅಂಗವಾಗಿ ಹಮ್ಮಿಕೊಂಡಿದ್ದ ಮೂರು ದಿನಗಳ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಕೋಮುವಾದಿಶಕ್ತಿಗಳು ಅಧಿಕಾರವನ್ನು ಹಿಡಿಯಲು ಹವಣಿಸುತ್ತಿರುವ ಈ ಸಂದರ್ಭದಲ್ಲಿ ದೇಶವು ಆತಂಕದಿಂದಲೇ ಹೊಸ ವರ್ಷಕ್ಕೆ ಕಾಲಿಡುತ್ತಿದೆ. ಕೋಮುವಾದಿಗಳ ಪರವಾಗಿ ಮಾಧ್ಯಮಗಳಲ್ಲಿ ಅಪಪ್ರಚಾರ, ಸುಳ್ಳು ಸಮೀಕ್ಷೆಗಳು ನಡೆಯುತ್ತಿವೆ. ಇದು ದೇಶದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಟಿವಿ, ಸಿನಿಮಾಗಳು, ಜನತೆಯ ಆಲೋಚನೆಯನ್ನು ಬೇರೆಡೆ ತಿರುಗಿಸಿ ನೋಡುಗರನ್ನು ಭ್ರಾಮಕಲೋಕದಲ್ಲಿ ಬಂಧಿಸಿವೆ. ಇಂತಹ ಸಂದರ್ಭದಲ್ಲಿ ಜನಪರ ಸಾಂಸ್ಕೃತಿಕ ಸಂಘಟನೆಗಳು ದೇಶ ಹಾಗೂ ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿ ಮೂಡಿಸ ಬೇಕು ಎಂದರು.

ಸಾಹಿತ್ಯವನ್ನು ಅಂತಃಪುರಗಳಿಂದ ಜನರ ಬಳಿಗೆ ತಂದಂತೆಯೇ ರಂಗಭೂಮಿಯನ್ನೂ ಸಹ ಜನರ ಬಳಿಗೆ, ಬೀದಿಗೆ ತರಲಾಗಿದೆ. ಹಾಗೆಯೇ ಅವುಗಳ ವಿಷಯ ಪೌರಾಣಿಕದಿಂದ ಸಾಮಾಜಿಕವಾಗಿದೆ.

ನಾಟಕಗಳು ಜನಸಾಮಾನ್ಯನ ದಿನನಿತ್ಯದ ನೋವು ನಲಿವುಗಳನ್ನು ಬಿಂಬಿಸಬೇಕು ಎಂದು ಅದಕ್ಕಾಗಿ ತನ್ನನ್ನು ತೊಡಗಿಸಿಕೊಂಡ ಸಫ್ದರ್ ಹಶ್ಮಿಯವರನ್ನು ಹತ್ಯೆ ಮಾಡಲಾಯಿತು. ತಾಜ್ ಮಹಲನ್ನು ಕಟ್ಟಿದವರು ಬಡ ಕೂಲಿಕಾರರು, ಬಂಗಲೆಗಳನ್ನು ನಿರ್ಮಿಸಿದವರು ಬಡವರು, ಹಸು ಕಾಯುವ ಬಾಲಕನಿಗೇ ಕುಡಿಯಲು ಹಾಲಿಲ್ಲ, ಎಂಬುದನ್ನು ಈ ನಾಟಕಗಳು ಜನರಿಗೆ ಮತ್ತೆ ಮನವರಿಕೆ ಮಾಡಿ ಕೊಟ್ಟಿವೆ. ಇದೀ ಬೀದಿ ನಾಟಕಗಳು ಪ್ರಶ್ನಿಸುವಂತೆ ಜನರನ್ನು ಪ್ರೋತ್ಸಾಹಿಸಿವೆ.

ಇಂದಿನ ಸಮಾಜಕ್ಕೆ ಪ್ರಶ್ನಿಸುವವರು ಬೇಡ. ಆ ಕಾರಣಕ್ಕಾಗಿಯೇ ಹತ್ಯೆ ನಡೆಸಲು ಮುಂದಾಗಿದ್ದಾರೆ ಎಂದರು.

ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಅವರು ರಾವಿನದಿಯ ದಂಡೆಯಲ್ಲಿ ನಾಟಕವನ್ನು ವಿವರಿಸುತ್ತಾ ಇಡೀ ರಾಜ್ಯದಲ್ಲಿ ಮೂಲೆ ಮೂಲೆಯಲ್ಲಿ ಹೇಗೆ ಕೋಮು ಸೌಹಾರ್ದತೆ ನೆಲೆಸಿದೆ ಎಂಬುದನ್ನು ವಿವರಿಸಿ ಈ ಸೌಹಾರ್ದವನ್ನು ಕೆಡಿಸಿ ಕೋಮುವಾದ ಹರಡುತ್ತಿರುವವರ ಬಗ್ಗೆ ಎಚ್ಚರದಿಂದಿರುವಂತೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ಧರ್ಮವನ್ನು ರಾಜಕೀಯದಲ್ಲಿ ಬೆರೆಸಿದವರ ಹುನ್ನಾರಗಳನ್ನು ಅರಿಯುವಂತೆ ಕರೆ ನೀಡಿದರು. ಈ ಚುನಾವಣೆಯಲ್ಲಿ ಕೋಮುವಾದಿಗಳನ್ನು ಅಧಿಕಾರಕ್ಕೆ ತರುವುದಿಲ್ಲ ಎಂದು ಪ್ರತಿಜ್ಞೆ ಮಾಡುವಂತೆ ಮನವಿ ಮಾಡಿದರು.

ವೇದಿಕೆಯಲ್ಲಿ 'ಸಮುದಾಯ' ದ ಗುಂಡಣ್ಣ, ಗಾಂಧಿನಗರ ನಾರಾಯಣ ಸ್ವಾಮಿ, ಎಂ.ವಿ.ನಾರಾಯಣಸ್ವಾಮಿ ಉಪಸ್ಥಿತರಿದ್ದರು. ಕೆ.ಎಸ್.ನಾರಾಯಣ ಸ್ವಾಮಿ ಸ್ವಾಗತಿಸಿದರು. ವಿ.ವಿ.ವೆಂಕಟ ರಾಂ ಕಾರ್ಯಕ್ರಮ ನಿರ್ವಹಿಸಿದರು.

ಮೂರು ದಿನಗಳ ಕಾಲ ಕೆಜಿಎಫ್ ಬೆಮೆಲ್ ಸಮುದಾಯ ತಂಡ 'ರಾವಿ ನದಿಯ ದಂಡೆಯಲ್ಲಿ', ಚಾರ್ಲಿ ಚಾಪ್ಲಿನ್ ರವರ 'ದಿ ಗ್ರೇಟ್ ಡಿಕ್ಟೇಟರ್ ' ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಸಂಗಾತಿಗಳಿಂದ ಮೈಮ್ ಹಾಗೂ ಹಾಡುಗಳ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದಲಿತರ ಮೇಲಿನ ದೌರ್ಜನ್ಯ

ಸಮಾಜದ ಸಮಾನತೆಯ ಅಂಚಿನಿಂದ ಆಚೆಗಿಡಲ್ಪಟ್ಟ ದಲಿತ ಸಮುದಾಯವು ಈಚಿನ ದಿನಗಳಲ್ಲಿ ತೀವ್ರ ದೌರ್ಜನ್ಯಕ್ಕೆ, ಧಾಳಿಗೆ ತುತ್ತಾಗುತ್ತಿದೆ. ಅವರನ್ನು ದಿನನಿತ್ಯದ ಆಗು-ಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ತಪ್ಪಿಸಲಾಗುತ್ತಿದೆ. ಅತ್ಯಂತ ವ್ಯವಸ್ಥಿತವಾಗಿ ರಾಜ್ಯದ ಹಲವೆಡೆ ದೌರ್ಜನ್ಯ ದಬ್ಬಾಳಿಕೆಗಳು ನಡೆದಿವೆ. ಇವು ಭೂಮಾಲಿಕ, ಪಾಳೆಯಗಾರಿ ಶಕ್ತಿಗಳ ಅಟ್ಟಹಾಸವಾಗಿದೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಸೂಲನಾಯಕನ ಹಳ್ಳಿಯಲ್ಲಿ, ಮೈಸೂರು ಜಿಲ್ಲೆಯ ಉದ್ಬೂರಿನಲ್ಲಿ, ಕೋಲಾರ ಜಿಲ್ಲೆಯ ಚಿಂತಾಮಣಿಯ ಬಿಲ್ಲಾಂಡ್ಲಹಳ್ಳಿಯಲ್ಲಿ, ಗುಲಬರ್ಗಾ ಜಿಲ್ಲೆಯ ಶಹಾಪೂರ್‌ನಲ್ಲಿ, ಬೀದರ್ ಜಿಲ್ಲೆಯ ಕಮಲಾಪುರದಲ್ಲಿ, ದ.ಕ.ಜಿಲ್ಲಾ ಮಂಜನಾಡಿ ಗ್ರಾಮದಲ್ಲಿ ದಲಿತರಿಗೆ ವಂಚನೆ ಹೀಗೆ ಅನೇಕ ಕಡೆಗಳಲ್ಲಿ ಅಮಾನವೀಯ ಹಲ್ಲೆಗಳು-ದೌರ್ಜನ್ಯಗಳು ನಡೆದಿರುವುದನ್ನು ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ ಮತ್ತು ಶಹಾಪೂರ್ ಘಟನೆ ನಡೆದ ಮೇಲೆಯೂ ಚುನಾಯಿತ ಪ್ರತಿನಿಧಿಗಳು-(ಮಂತ್ರಿಗಳು) ದಲಿತರನ್ನು-ದಲಿತೇತರರನ್ನು ಬೇರ್ಪಡಿಸುವ ಒಡೆದು ಆಳುವ ನೀತಿಯನ್ನು ಮಾಡಿದ್ದಾರೆ. ಇದು ಅತ್ಯಂತ ಹೇಯ ಪ್ರವೃತ್ತಿ ಎಂದು ಪಕ್ಷವು ಈಗಾಗಲೇ ಖಂಡಿಸಿದೆ. ತಮ್ಮ ಸ್ವಾರ್ಥ ಹಿತಾಸಕ್ತಿಗಾಗಿ ಬಡ ಜನತೆಯ ನಡುವೆ ಒಡಕುಂಟು ಮಾಡುತ್ತಿರುವುದು ಪಾಳೇಗಾರಿ-ಬಂಡವಾಳಶಾಹಿಗಳ ಹುನ್ನಾರವಾಗಿದೆ.

ಅಕ್ಷರ ಲೋಕದಿಂದ ದಲಿತರನ್ನು ಹೊರಗಿಡಲಾಗಿತ್ತು. ಆದರೆ ಈಚೆಗೆ ಅಕ್ಷರದೊಂದಿಗೆ ಸಮಾಜದ ಪ್ರಕ್ರಿಯೆಯಲ್ಲಿ ತಾವೂ ತೊಡಗಬೇಕೆಂಬ ವಿಶೇಷ ಜಾಗೃತಿ ದಲಿತ ಸಮುದಾಯದ ನಡುವೆ ಬರುತ್ತಿದೆ. ಇದರಿಂದ ಜಮೀನ್ದಾರಿ ಮತ್ತು ಬಂಡವಾಳಶಾಹಿ ವರ್ಗದ ಕುತಂತ್ರ ಕೋಟೆಗೆ ಧಕ್ಕೆ ಬರುತ್ತಿರುವುದರಿಂದ ಅವರು ಹೆಣೆದ ಜಾಲವು ಹುಸಿಯಾಗುತ್ತಿದೆ. ಆದ್ದರಿಂದ ದಲಿತೇತರರನ್ನು ದಲಿತರ ಮೇಲೆ ಛೂ ಬಿಡುವ, ದೌರ್ಜನ್ಯ ನಡೆಸಲು ಕುಮ್ಮಕ್ಕು ಕೊಡುವ ದುಷ್ಟ ಪ್ರಕ್ರಿಯೆಗೆ ಇಳಿದಿರುವರು. ಹೀಗಾಗಿಯೇ ದಲಿತರ ಭಾವನೆಗಳಿಗೆ ನೋವಾಗುವಂತೆ ಅಂಬೇಡ್ಕರ್ ಭಾವ ಚಿತ್ರಕ್ಕೆ ಅವಮಾನಗೊಳಿಸುವುದು, ದಲಿತರನ್ನು ಸಾಮಾಜಿಕವಾಗಿ ಅವಮಾನಗೊಳಿಸುವುದು ಇತ್ಯಾದಿಗಳಿಗೆ ಇಂಬು ಕೊಡುವುದು ನಡೆದಿದೆ. ಇದರಿಂದ ದಲಿತ ಸಮುದಾಯ ಕೋಪ ಮತ್ತು ಅಸಮಧಾನದ ಬೆಂಕಿಯಿಂದ ಬೇಯುತ್ತಿದೆ. ಆದರೆ ದಲಿತ ಸಂಘಟನೆಗಳು ಆಳುವ ವರ್ಗದ ಬಾಲಂಗೋಚಿಗಳಾಗಿ ಇವರ ಕೋಪ ಮತ್ತು ರೊಚ್ಚನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ. ದಲಿತ ಸಮುದಾಯವನ್ನು ಒಟ್ಟು ಸಮಾಜದ ಪ್ರಮುಖ ಧಾರೆಯಿಂದ ಬೇರ್ಪಡಿಸುವ ರೀತಿಯಲ್ಲಿ ದಲಿತ ಸಂಘಟನೆಗಳು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿವೆ. ಇದು ಅತ್ಯಂತ ವಿಷಾದದ ಸಂಗತಿಯಾಗಿದೆ. ಇದನ್ನು ತಪ್ಪಿಸಲಿಕ್ಕೆ ನಮ್ಮ ಪಕ್ಷದ ಮಧ್ಯಪ್ರವೇಶದ ಅವಶ್ಯಕತೆ ಇದೆ.

ಶಹಾಪುರ ಘಟನೆಯ ತರುವಾಯ ಗುಲಬರ್ಗಾ ಜಿಲ್ಲೆಯಲ್ಲಿ ಜಿಲ್ಲಾ ಆಡಳಿತವು ಜನ ವಿರೋಧಿ ಸಂಘ-ಸಂಸ್ಥೆಗಳವರ ಬೆಂಬಲ ಪಡೆದು ಜಿಲ್ಲೆಯ ರಸ್ತೆಗಳಲ್ಲಿರುವ ಎಲ್ಲ ಮಹಾತ್ಮರುಗಳ ಹೆಸರಿನ ಚೌಕಗಳನ್ನು ತೆಗೆದು ಹಾಕಿದೆ. ಇದರಿಂದ ಜನತೆ ನೆಮ್ಮದಿಯ ಉಸಿರು ಬಿಡುವಂತಾಗಿದೆ. ಆಡಳಿತ ಮಂಡಳಿಯ ಈ ಕ್ರಮ ಸ್ವಾಗತಾರ್ಹ ವಾಗಿದ್ದುದಾಗಿದೆ.

ದಲಿತರ ಮೇಲೆ ಮೇಲ್ಜಾತಿಯ ಭೂಮಾಲೀಕ ಶಕ್ತಿಗಳ ದಬ್ಬಾಳಿಕೆ, ದೌರ್ಜನ್ಯಗಳನ್ನು ವಿರೋಧಿಸಿ ನಮ್ಮ ಪಕ್ಷದ ಎಲ್ಲ ಹಂತದ ಸಮಿತಿಗಳು ಸಮರ್ಥವಾಗಿ ಮಧ್ಯಪ್ರವೇಶ ಮಾಡಬೇಕೆಂದು ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನ ಕರೆ ಕೊಡುತ್ತದೆ.

ಮೀನುಗಾರರಿಗೆ ವಸತಿ ವ್ಯವಸ್ಥೆ ಹಾಗೂ ಕರಾವಳಿ ಉದ್ದಕ್ಕೂ ಶಾಶ್ವತ ತಡೆಗೋಡೆ

ನಮ್ಮ ದೇಶದ ಕರಾವಳಿಯಲ್ಲಿ ವಿದೇಶಿ ಹಡಗುಗಳಿಂದ ಆಳ ಸಮುದ್ರದಲ್ಲಿ ಮೀನು ಹಿಡಿಯುವುದನ್ನು ಕೇಂದ್ರದಲ್ಲಿ ಸಂಯುಕ್ತ ರಂಗ ಸರಕಾರ ಬಂದ ಕೂಡಲೇ ಎಡಪಕ್ಷಗಳ ಲೋಕಸಭಾ ಸದಸ್ಯರ ಒತ್ತಾಯದ ಫಲವಾಗಿ ನಿಷೇಧಿಸಲಾಗಿದೆ. ಆದರೂ ಕೂಡ ಕೆಲವು ಹಡಗುಗಳು ಇನ್ನೂ ಕೂಡಾ ಮೀನು ಹಿಡಿಯುತ್ತಿರುವುದು ಕಂಡು ಬಂದಿದೆ. ಇದರಿಂದಾಗಿ ಮೀನುಗಾರರಿಗೆ ಮೀನು ಸಾಕಷ್ಟು ಸಿಗದೆ ತೊಂದರೆಯಾಗಿದೆ. ಮೀನು ಕ್ಷಾಮ ಉಂಟಾಗುವ ಅಪಾಯ ಬರುತ್ತಿದೆ.

ಪ್ರತಿ ಮಳೆಗಾಲದ ಈ ಅವಧಿಯಲ್ಲಿ ಗಾಳಿ, ಮಳೆ ಮತ್ತು ಅಬ್ಬರದ ತೆರೆಗಳಿಂದ ಕರಾವಳಿ ಉದ್ದಕ್ಕೂ ಅಲ್ಲಲ್ಲಿ ಸಮುದ್ರ ತೀರದ ಪ್ರದೇಶಗಳ ಕೊರೆತದಿಂದಾಗಿ ಸಾವಿರಾರು ಕುಟುಂಬಗಳು ವಸತಿ ಹೀನರಾಗಿ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಅಂತಹವರಿಗೆ ಭೂಮಿ ಮತ್ತು ವಸತಿ ವ್ಯವಸ್ಥೆ ಮಾಡಲು ಸರಕಾರ ವಿಫಲವಾಗಿದೆ. ಬದಲು ಮೀನುಗಾರರಿಗೆ ರಕ್ಷಣೆಯ ನೆಪದಲ್ಲಿ ಅಲ್ಲಲ್ಲಿ ತಡೆಗೋಡೆಗಳನ್ನು ನಿರ್ಮಾಣ ಮಾಡಲು ಸರಕಾರ ಲಕ್ಷಗಟ್ಟಲೆ ಹಣ ಖರ್ಚುಮಾಡಿ ಶಿಲೆ ಕಲ್ಲುಗಳನ್ನು ರಾಶಿ ಹಾಕುತ್ತಿರುವುದು ಕಾಣುತ್ತಿದೆ. ಕಂಟ್ರಾಕ್ಟ್‌ದಾರರು ಕೆಲವರು ಹಣ ಸಂಪಾದನೆ ಮಾಡುತ್ತಿದ್ದಾರೆ. ಇದರಿಂದಾಗಿ ಕಡಲ ಕೊರೆತ ಕಡಿಮೆಯಾಗಲಿಲ್ಲ. ಮಳೆಗಾಲದ ಕೊನೆಯಲ್ಲಿ ಹಾಕಿದ ಶಿಲೆ ಕಲ್ಲುಗಳು ಕಾಣದ ಸ್ಥಿತಿ ಉಂಟಾಗಿದೆ. ಕರಾವಳಿ ಉದ್ದಕ್ಕೂ ಮೀನುಗಾರರಿಗೆ ರಕ್ಷಣೆ ಸಿಗಬೇಕಾದರೆ ಶಾಶ್ವತ ತಡೆಗೋಡೆಗಳನ್ನು ನಿರ್ಮಿಸಿ, ಈಗಾಗಲೇ ವಸತಿ ಹೀನರಿಗೆ; ಭೂಮಿ ಮತ್ತು ವಸತಿ ವ್ಯವಸ್ಥೆಯಾಗಬೇಕಾಗಿದೆ.

ಕರಾವಳಿಯಲ್ಲಿ ನಾಡದೋಣಿ ಮತ್ತು ಯಾಂತ್ರಿಕ ದೋಣಿಗಳಿಂದ ಮೀನು ಹಿಡಿಯುತ್ತಿದ್ದಾರೆ. ವರ್ಷದ ಕೆಲವೇ ತಿಂಗಳುಗಳಲ್ಲಿ ಮಾತ್ರ ಇವರಿಗೆ ಮೀನು ಹಿಡಿಯುವ ಅವಕಾಶ ಇದ್ದು, ಇದರ ವರಮಾನ ಕೆಳಮಟ್ಟದಲ್ಲಿದೆ. ಆದುದರಿಂದ ಇವರಿಗೆ ಮುಖ್ಯವಾಗಿ ಯಾಂತ್ರಿಕ ದೋಣಿ ಗಳಿಗೆ ಡೀಸೆಲ್ ಕಡಿಮೆ ಬೆಲೆಯಲ್ಲಿ ವಿತರಣೆ ಮಾಡು ವುದು ತೀರಾ ಅವಶ್ಯವಿದೆ. ಇವರು ಮಧ್ಯವರ್ತಿಗಳಿಂದ ಬಹಳಷ್ಟು ಸುಲಿಗೆಗೊಳಗಾಗುತ್ತಿರು ವುದನ್ನು ತಡೆಯಬೇಕಾಗಿದೆ.

ಮೀನುಗಾರರಿಗೆ ರಿಯಾಯಿತಿ ದರದಲ್ಲಿ ಡೀಸೆಲ್, ವಸತಿ, ಭೂಮಿ ಒದಗಿಸಿಕೊಡಬೇಕು, ಕರಾವಳಿ ಉದ್ದಕ್ಕೂ ಶಾಶ್ವತ ತಡೆಗೋಡೆ ಮಾಡುವ ಯೋಜನೆಯನ್ನು ಕೈಗೊಂಡು ಮೀನುಗಾರರನ್ನು ರಕ್ಷಣೆಮಾಡಲು ಸರಕಾರವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯದ 16ನೇ ಸಮ್ಮೇಳನವು ಒತ್ತಾಯಿಸುತ್ತದೆ.

ಮಂಡನೆ: ಕೆ.ಯಾದವಶೆಟ್ಟಿ
ಅನುಮೋದನೆ: ತಿಲಕಗೌಡ



ಬಿರುಸಿನ ಪುಸ್ತಕ ಮಾರಾಟ

'ಇನ್ನು ನನಗೆ ಕೆಲಸವಿಲ್ಲ'

'ಶಿರಸಿಯಿಂದ ಶಾನ್ ಭಾಗ್ ಬರಬೇಕು' ಎನ್ನುವುದು ತಪ್ಪಿಹೋಯಿತು ಎಂದು ಶಿರಸಿಯ ಚಿಂತನ ಪುಸ್ತಕ ಮಳಿಗೆಯ ಸಿ.ಆರ್.ಶಾನ್ ಭಾಗ್ ಸಂತಸದಿಂದ ಹೇಳಿದರು.

ಅದಕ್ಕೆ ಕಾರಣವಿತ್ತು. ಶಾನ್ ಭಾಗ್ ಹಾಗೆ ಹೇಳುವಾಗ ಅವರ ಅಕ್ಕಪಕ್ಕದಲ್ಲಿ ಎರಡು ಪುಸ್ತಕಗಳ ಮಳಿಗೆಗಳಿದ್ದವು. ಪಕ್ಷದ ಸಾಹಿತ್ಯ, ಜನಪರ ಸಾಹಿತ್ಯವನ್ನು ಜನರ, ಪಕ್ಷದ ಸಂಗಾತಿಗಳ ಮಧ್ಯೆ ಕೊಂಡೊಯ್ಯಲು ಯಾವಾಗಲೇ ಪಕ್ಷವೂ ವಿಸ್ತಾರವಾಗುತ್ತಾ ಹೋಗುತ್ತದೆ ಎಂಬುದನ್ನು ಅರ್ಥ ಮಾಡಿಕೊಂಡ ನಮ್ಮ ಸಂಗಾತಿಗಳು ಸಮ್ಮೇಳನದ ಸಭಾಂಗಣದಲ್ಲಿ ಸಾವಿರಾರು ರೂಗಳ ಪುಸ್ತಕ ಮಾರಾಟ ನಡೆಸಿದರು.

'ಪುಸ್ತಕಗಳು ಮಾತಾಡುತ್ತವೆ' ಎಂದು ಖ್ಯಾತ ನಾಟಕಕಾರ, ಕವಿ ಬ್ರೆಕ್ಟ ಹೇಳಿದ್ದರು. ಪುಸ್ತಕಗಳು ಮಾತನಾಡುತ್ತವೆ ಎಂಬುದು ಈ ಸಮ್ಮೇಳನದಲ್ಲಿ ಬಂದವರೆಲ್ಲರಿಗೂ ಗೊತ್ತಾಗಿತ್ತು. ಹಿಂದಿನ ಸಮ್ಮೇಳನಗಳಲ್ಲಿ ಅಪರೂಪವಾಗಿದ್ದ ಈ ಪುಸ್ತಕ ಉತ್ಸಾಹ ಈ ಬಾರಿಕಂಡಿತು. ಇದನ್ನು ನೋಡಿಯೇ ಸದಾ ಪುಸ್ತಕ ಸಂಸ್ಕೃತಿಯ ಬಗ್ಗೆ ಮನವರಿಕೆ ಮಾಡಿಕೊಡುವ ಶಾನ್‌ಭಾಗ್ ಈ ಪುಸ್ತಕ ಮಾರಾಟ ಮಾಡುವ ಹೊಸ ಕುಡಿಗಳನ್ನು ಕಂಡು ಸಂತಸಗೊಂಡಿದ್ದರು.

ಮಂಡ್ಯ ಎಸ್‌ಎಫ್‌ಐ ಜಿಲ್ಲಾ ಸಮಿತಿ ಟಿ.ಎಲ್.ಕೃಷ್ಣೇಗೌಡರ ನೇತೃತ್ವದಲ್ಲಿ ಲಿಂಗರಾಜುವಿನ ಜೊತೆ ಸೇರಿ 25 ಸಾವಿರಕ್ಕೂ ಮೀರಿ ಪುಸ್ತಕಗಳನ್ನು ಮಾರಾಟ ಮಾಡಿದರು. ಸಂಗಾತಿಗಳು ಕೇಳುತ್ತಿದ್ದ ಪುಸ್ತಕಗಳನ್ನು ಬೆಂಗಳೂರಿಗೆ ಹೋಗಿ ತಂದು ಮುಂದಿಡುತ್ತಿದ್ದರು.

ಅದೇ ರೀತಿಯಲ್ಲಿಡಿವೈಎಫ್‌ಐ ಬೆಂಗಳೂರು ಜಿಲ್ಲಾಸಮಿತಿ ಗೋಪಾಲ ಕೃಷ್ಣರ ನೇತೃತ್ವದಲ್ಲಿ ಬಿರುಸಿನ ಮಾರಾಟ ನಡೆಸಿತು. ರವಿ, ಚಂದ್ರ, ಲಕ್ಷ್ಮಣ ಕುಮಾರ್ ಮಾರಾಟದಲ್ಲಿ ಪಾಲ್ಗೊಂಡಿದ್ದರು.

ಹೊಸ ಸ್ಫೂರ್ತಿಗೆ ನೆಲೆಯಾಗಿ ಬಂದ ಕೋಲಾರ ಸಮ್ಮೇಳನ

ಕೋಲಾರದಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16ನೇ ಸಮ್ಮೇಳನ ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆಗೆ ಹೊಸ ನೆಲೆಯಾಗಿ, ಸ್ಫೂರ್ತಿಯಾಗಿ ಮೂಡಿಬಂದಿತೆಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಆರು ವರ್ಷಗಳ ಹಿಂದೆ ಮಂಗಳೂರಿನಲ್ಲಿ ನಡೆದ 14ನೇ ಸಮ್ಮೇಳನದ ಸಂದರ್ಭದಲ್ಲಿ ಸಂಘಟಿಸಲ್ಪಟ್ಟ ಸಾವಿರಕ್ಕೂ ಮೇಲ್ಪಟ್ಟ ಸಮವಸ್ತ್ರಧಾರಿ ಮಹಿಳೆ-ಪುರುಷರ ಮೆರವಣಿಗೆ ನೋಡಿ ಪ್ರತಿನಿಧಿಗಳೂ, ಊರ ಜನರೂ ಹೆಮ್ಮೆಪಟ್ಟಿದ್ದರು. ಇದರಲ್ಲಿ ಕಾರ್ಮಿಕ ವರ್ಗದ ಪಾತ್ರವೇ ಪ್ರಧಾನವಾಗಿತ್ತು. ಗುಲ್ಬರ್ಗಾದಲ್ಲಿ ನಡದ 15ನೆಯ ಸಮ್ಮೇಳನದ ಅಂಗವಾಗಿ ನಡೆದ ಮೆರವಣಿಗೆ, ಸಾರ್ವಜನಿಕ ಸಭೆ ಮಳಖೇಡ ಸಿಮೆಂಟ್ ಕಾರ್ಖಾನೆ, ಎಂಎಸ್‌ಕೆ ಮಿಲ್ ಕಾರ್ಮಿಕರ ವಿವಿಧ ವೇಷ ಭೂಷಣ, ಕಲಾಕೃತಿಗಳಿಂದ ಕೂಡಿ ಹೈದರಾಬಾದ್ ಕರ್ನಾಟಕದ ವೈಶಿಷ್ಟತೆಯನ್ನು ಪ್ರದರ್ಶಿಸಿತ್ತು. ಸಮ್ಮೇಳನದ ಪೂರ್ವಭಾವಿಯಾಗಿ ಈ ಎರಡೂ ಸಮ್ಮೇಳನಗಳ ಸಮಯದಲ್ಲಿ ರಾಜಕೀಯ ಪ್ರಚಾರಕ್ಕೆ ಪ್ರಾಧಾನ್ಯತೆ ಸಿಕ್ಕಿಲ್ಲ ಎಂದೇನಲ್ಲ. ಕೇಂದ್ರೀಕೃತವಾದ, ಸುಸಜ್ಜಿತ, ಇಡೀ ಜಿಲ್ಲೆಯನ್ನು ಆವರಿಸಿ ಜನಸಾಮಾನ್ಯರ ಮೇಲೆ ಪಕ್ಷದ ಪ್ರಭಾವ ಬೀರುವಷ್ಟು ಕಲಾಜಾಥಾ, ಪಾದಯಾತ್ರೆಗಳು ನಡೆಯಲಿಲ್ಲ. ಕರಪತ್ರ ಪೋಸ್ಟರುಗಳ ಪ್ರಚಾರ ಕೆಲವು ತಾಲೂಕುಗಳಲ್ಲಿ ನಡೆಸಲು ಸಾಧ್ಯವಾಗಿದೆ.

ಎನ್.ಕೆ.ಉಪಾಧ್ಯಾಯ

ಆದರೆ ಕೋಲಾರದಲ್ಲಿ ನಡೆಸಲಾದ ಸಮ್ಮೇಳನದ ಸಿದ್ಧತೆ, ಪಾರ್ಟಿ ನಡೆಸಿದ ಪ್ರಚಾರ-ಪ್ರಕ್ಷೋಭೆ ಹಿಂದಿನ ಸಮ್ಮೇಳನಗಳನ್ನು ಮೀರಿಸಿ ಹೊಸ ದಾಖಲೆ ನಿರ್ಮಿಸಿದೆ ಎಂದು ಹೆಮ್ಮೆಯಿಂದಲೇ ಹೇಳಬಹುದಾಗಿದೆ. ಅದರ ಕೆಲವು ಅಂಶಗಳನ್ನು ಪ್ರತಿನಿಧಿಗಳೂ, ಜಿಲ್ಲಾ ಸಮಿತಿಗಳೂ ತಮ್ಮದಾಗಿಸಿಕೊಂಡು ಅನುಸರಿಸಿಕೊಂಡು ಹೋಗಲಿಕ್ಕೆ ಮಾದರಿಯಾಗಿವೆಂದು ಧೈರ್ಯದಿಂದ ಹೇಳಬಹುದು.

1. ಕೇರಳ, ತಮಿಳುನಾಡುಗಳಲ್ಲಿ ಅಲ್ಲಿಯ ರಾಜ್ಯ ಸಮಿತಿಗಳು, ಪಕ್ಷದ ನಿಧಿ ಸಂಗ್ರಹಕ್ಕೆ ಒಂದು ದಿವಸ ನಿರ್ಧರಿಸಿ ಆ ದಿನ ರಾಜ್ಯಾದ್ಯಂತ ಪಕ್ಷಕ್ಕೆ ನಿಧಿ ಸಂಗ್ರಹಿಸುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿವೆ. ಆ ದಿವಸ ಪಕ್ಷದ ಎಲ್ಲಾ ಘಟಕಗಳು ಇತರ ಎಲ್ಲಾ ಕಾರ್ಯಕ್ರಮ, ಚಟುವಟಿಕೆಗಳನ್ನು ಬದಿಗೊತ್ತಿ ಪಕ್ಷದ ನಿಧಿ ಸಂಗ್ರಹಣೆಗೆ ಮಾತ್ರ ತಮ್ಮನ್ನು ತೊಡಗಿಸಿಕೊಂಡು ಮನೆ-ಮನೆಗೆ, ಅಂಗಡಿಗಳಿಗೆ ಹೋಗಿ ಸಾಮೂಹಿಕವಾಗಿ ಪಕ್ಷಕ್ಕೆ ನಿಧಿ ಸಂಗ್ರಹಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ಪಕ್ಷದ ರಾಜ್ಯ ಸಮಿತಿ ನಿಧಿಗಾಗಲೀ, ಜಿಲ್ಲಾಸಮ್ಮೇಳನಗಳಿಗಾಗಲೀ ಆ ರೀತಿ ಒಂದು ದಿವಸದಲ್ಲಿ ರಾಜ್ಯ ಅಥವಾ ಜಿಲ್ಲಾ ಮಟ್ಟದಲ್ಲಿ ಎಲ್ಲರನ್ನು ತೊಡಗಿಸಿಕೊಂಡು ಹಣ ಸಂಗ್ರಹಿಸುವ ಪರಿಪಾಠ ಇಟ್ಟುಕೊಂಡಿಲ್ಲ. ಆದರೆ ಕೋಲಾರ ಜಿಲ್ಲಾಸಮಿತಿ ರಾಜ್ಯದ ಘಟಕಗಳಿಗೆ ಸ್ಫೂರ್ತಿದಾಯಕವಾದ ಒಂದು ಮಾದರಿ ತೋರಿಸಿದೆ. ಅದೇನೆಂದರೆ ಸಮ್ಮೇಳನಕ್ಕೆ ನಿಧಿ ಸಂಗ್ರಹದ ಒಂದು ನಮೂನೆಯಾಗಿ ಕೋಲಾರ ಜಿಲ್ಲೆಯಾದ್ಯಂತ ಒಂದು ದಿವಸ ಪಾರ್ಟಿನಿಧಿ ಸಂಗ್ರಹಣೆಯಲ್ಲಿ ತೊಡಗಿ ಐವತ್ತು ಸಾವಿರಕ್ಕಿಂತಲೂ ಹೆಚ್ಚು ಹಣ ಸಂಗ್ರಹಿಸಿದ್ದಾರೆ. ಸಮ್ಮೇಳನದ ಸಮಯದಲ್ಲಿ ಕೆಲವು ಪ್ರತಿನಿಧಿಗಳೊಡನೆ ಧನಸಂಗ್ರಹದ ಅನುಭವಗಳನ್ನು ಕೇಳಿ ರೋಮಾಂಚನಗೊಂಡೆ, ಇಂಥ ಅನುಭವವನ್ನು ರಾಜಾದ್ಯಂತ ವಿಸ್ತರಿಸಬೇಕಲ್ಲ ಎಂದು ಅಂದುಕೊಂಡೆ.

2. ಒಂದು ವಾರಕ್ಕೂ ಮೇಲ್ಪಟ್ಟು ಕನ್ನಡ, ತಮಿಳು, ತೆಲುಗು ಹಾಡು, ನಾಟಕಗಳನ್ನೊಳಗೊಂಡ ಐವತ್ತಕ್ಕೂ ಮೇಲ್ಪಟ್ಟ ಸಂಗಾತಿಗಳಿಗೆ ಶಿಬಿರ ನಡೆಸಿ, ಉತ್ತಮ ಕಲಾಗಾರರಾಗಿ ಮೂಡಿಬರುವಂತೆ, ಗುಣಾತ್ಮಕ ಬದಲಾವಣೆ ಆಗುವಂತೆ ಟ್ರೈನಿಂಗ್ ಕೊಟ್ಟು ಇಡೀ ಜಿಲ್ಲೆಯಾದ್ಯಂತ 15 ದಿವಸ ಕಲಾಜಾಥಾ ಪರಿಣಾಮಕಾರಿಯಾಗಿ, ನಮ್ಮ ಪಕ್ಷ ರಾಜಕೀಯ ನಿಲುಮೆಯನ್ನು ಜನರ ಮಧ್ಯೆಕೊಂಡೊಯ್ಯುವಂತೆ ಮಾಡಿದ ಸಾಹಸ ಪ್ರಶಂಸನೀಯ. ಜನಾಕರ್ಷಣೆಗೆ ಭಾಷಣಗಳಿಗಿಂತಲೂ ಹಾಡು, ನಾಟಕಗಳು ಹೆಚ್ಚು ಪರಿಣಾಮ ಬೀರುತ್ತವೆ. ಹೆಚ್ಚು ಮಹಿಳೆಯರನ್ನು ಆಕರ್ಷಿಸುತ್ತದೆ. ನಿಷ್ಠೆಯಿಂದ, ನಿಸ್ವಾರ್ಥದಿಂದ ಈ ತಂಡಗಳಲ್ಲಿ ಭಾಗವಹಿಸಿದ ಸಂಗಾತಿಗಳ ಅನುಭವಗಳು ಅತ್ಯಂತ ಸ್ಫೂರ್ತಿದಾಯಕ.

3. ಗುಲ್ಬರ್ಗಾ ಸಮ್ಮೇಳನದಲ್ಲಿಯೂ ಹುತಾತ್ಮ ಜ್ಯೋತಿಯೊಂದಿಗೆ ಒಂದು ಜಾಥಾ ಬಂದಿತ್ತು. ಪರಿಣಾಮ ಬೀರಿತ್ತು. ಕೋಲಾರದಲ್ಲಿ ಎರಡು ಜಾಥಾಗಳು ಹುತಾತ್ಮರ ಎರಡು ಕೇಂದ್ರಗಳಿಂದ ನಡೆಸಲಾಯಿತು. ಒಂದು ಕರ್ನಾಟಕದ ಜಲಿಯನ್ ವಾಲಾಭಾಗ್ ಎಂದು ಹೆಸರುವಾಸಿಯಾದ ಗೌರಿಬಿದನೂರು ತಾಲೂಕಿನ ವಿದುರಾಶ್ವಥದಿಂದ, 1930 ರಲ್ಲಿ ಬ್ರಿಟಿಶರ ವಿರುದ್ಧ ಹೋರಾಟ ಮಾಡಿದಾಗ 10 ಜನ ಗುಂಡಿಗಾಹುತಿಯಾಗಿದ್ದ ಪವಿತ್ರ ಕ್ಷೇತ್ರ. ಕಾಂಗ್ರೆಸ್ಸನ್ನೂ ಒಳಗೊಂಡು ಯಾವ ಪಕ್ಷವೂ ಸ್ವಾತಂತ್ರ್ಯ ಸಮರದ ಹುತಾತ್ಮರನ್ನು ನೆನಪಿಸಿಕೊಳ್ಳದಿರುವಾಗ ಐವತ್ತನೆಯ ಸ್ವಾತಂತ್ರ್ಯೋತ್ಸವದ ಈ ಸಂದರ್ಭದಲ್ಲಿ, ದೇಶದ ಸ್ವಾತಂತ್ರ್ಯಕ್ಕೇ ಅಪಾಯ ಉಂಟಾಗುತ್ತಿರುವ ಈ ಸಂಧಿಕಾಲದಲ್ಲಿ ವಿದುರಾಶ್ವಥದ ಹುತಾತ್ಮರನ್ನು ನೆನಪಿಸಿಕೊಂಡು ದೇಶದ ಸ್ವಾತಂತ್ರ್ಯ ರಕ್ಷಣೆಗಾಗಿ ಜನರನ್ನು ಅಣಿಗೊಳಿಸುವ ಉದ್ದೇಶದಿಂದ ಈ ಜಾಥಾ ಹೊರಡಿಸಿರುವುದು ಕೋಲಾರ ಜಿಲ್ಲಾ ಸಮಿತಿಯ ದೂರದೃಷ್ಟಿಯ ಸೂಚಕವಾಗಿದೆ. ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಹಾಗೆಯೇ ದೇಶದ ಸ್ವಾತಂತ್ರ್ಯಕ್ಕಾಗಿ ಮುಷ್ಕರದ ಮೂಲಕ ಹೋರಾಡಿ ನಾಲ್ವರು ಕಾರ್ಮಿಕರನ್ನು ಬಲಿಕೊಟ್ಟ ಕೋಲಾರದ ಚಿನ್ನದ ಗಣಿಯ ಕಾರ್ಮಿಕರಿಂದ ಹೋರಾಟ. ಎರಡನೇ ಜಾಥಾ ಕೆ.ಜಿ.ಎಫ್ ಕಾರ್ಮಿಕರ ತ್ಯಾಗ ಬಲಿದಾನದ ಸಂಕೇತವಾಗಿದೆ. ಈ ಎರಡೂ ಜಾಥಾಗಳೂ ತಮ್ಮದೇ ಆದ ಮಹತ್ವ ಹೊಂದಿವೆ.

ಕೊನೆಯದಾಗಿ, ಸಮ್ಮೇಳನದಲ್ಲಿ ಪ್ರತಿನಿಧಿಗಳ ಚರ್ಚೆ, ಮೇಲ್ಮಟ್ಟದಲ್ಲಿ, ರಾಜಕೀಯವಾಗಿ ಹೊರಹೊಮ್ಮಿರುವುದು ಪ್ರತಿನಿಧಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಮೂಡಿಬಂದ ಅನುಭವಗಳ ಪ್ರತೀಕವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಪಕ್ಷ ನಡೆಸಿದ ಸ್ವತಂತ್ರ ರಾಜಕೀಯ ಹೋರಾಟಗಳಲ್ಲಿ ಜಂಟಿಯಾಗಿ ನಡೆಸಿದ ಚಳುವಳಿಗಳು ಹಾಗೆಯೇ ಪಕ್ಷದೊಳಗೆ ನಡೆದ ಸಂಘಟನಾ ಮತ್ತು ತಿದ್ದುಪಡಿ ಚಳುವಳಿಗಳು ಪ್ರತಿನಿಧಿಗಳಲ್ಲಿ ಪಕ್ಷದ ಸಂಘಟನೆ, ಇಂದಿನ ರಾಜಕೀಯ ಪರಿಸ್ಥಿತಿಗಳ ಕುರಿತು ಹೊಸ ತಿಳುವಳಿಕೆ ಉಂಟುಮಾಡಿರುವುದೇ ಈ ಪ್ರಯೋಜನಕಾರಿ ರಾಜಕೀಯ ಚರ್ಚೆ ನಡೆಯುವಂತೆ ಮಾಡಿದೆ. ಹೊಸತಾಗಿ ಬಂದ ಯುವ ಪ್ರತಿನಿಧಿಗಳು ಕೂಡ ಉತ್ತಮ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸಿರುವುದು ಸದಸ್ಯರಲ್ಲಿ ರಾಜಕೀಯ ಪ್ರಜ್ಞೆ ಮೂಡಿಬರುತ್ತಿದೆ, ಜವಾಬ್ದಾರಿಯ ಅರಿವು ಉಂಟಾಗುತ್ತಿದೆ ಎಂಬುದನ್ನು ಗುರ್ತಿಸಬೇಕಾಗಿದೆ ಮಾತ್ರವಲ್ಲ ರಾಜಕೀಯ ಚರ್ಚೆ, ರಾಜಕೀಯ ತಿಳುವಳಿಕೆ ಉಂಟುಮಾಡುವುದಕ್ಕೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕೆಂಬುದರತ್ತ ಗಮನ ಹೆಚ್ಚಿಸುವುದರ ಅವಶ್ಯಕತೆಯನ್ನು ತೋರಿಸಿಕೊಟ್ಟಿದೆ.

ಎಲ್ಲ ದೃಷ್ಟಿಯಿಂದಲೂ ಕೋಲಾರದ ಸಮ್ಮೇಳನ ಪಕ್ಷದ ಶಿಸ್ತು ಬದ್ಧ ಬೆಳವಣಿಗೆಗೆ ಉತ್ತಮ ಮಾರ್ಗಸೂಚಿಯಾಗಿದೆ. ಕೋಲಾರ ಜಿಲ್ಲಾ ಸಮಿತಿಗೆ, ಇಡೀ ಪಕ್ಷಕ್ಕೆ ನಮ್ಮ ಅಭಿನಂದನೆಗಳು. ಈ ಅನುಭವಗಳ ಉಪಯೋಗ ಪಕ್ಷವನ್ನು ಬೆಳೆಸುವುದಕ್ಕೆ ಸಾಮೂಹಿಕ ಸಂಘಟನೆಗಳ ವಿಸ್ತಾರಕ್ಕೆ ಸಹಾಯವಾಗಲೆಂದು ಹಾರೈಸೋಣ.

ಗ್ರಾಮೀಣ ಅಸಂಘಟಿತರ ಬೇಡಿಕೆಗಳನ್ನು ಈಡೇರಿಸಿ

ಕರ್ನಾಟಕದ ಗ್ರಾಮೀಣ ಬಡಜನರಲ್ಲಿ ಲಕ್ಷಾಂತರ ಭೂಹೀನ ಕೃಷಿಕೂಲಿಕಾರರ ಮತ್ತು ಬಡ ರೈತರ ನಂತರ ಕಂಡು ಬರುವವರೆಂದರೆ, 5 ಲಕ್ಷ ನೇಕಾರರು, 80000 ಅಂಗನವಾಡಿ ಕಾರ್ಯಕರ್ತೆಯರು, 30 ಸಾವಿರ ಗ್ರಾಮ ಪಂಚಾಯತ್ ನೌಕರರು, 15 ಸಾವಿರ ಗ್ರಾಮ ಸಹಾಯಕರು ಮತ್ತು ಸಾವಿರಾರು ಕೈಕಸುಬುದಾರರು ಹಾಗೂ ದಿನಗೂಲಿಗಳು ಮುಖ್ಯವಾಗಿದ್ದಾರೆ. ಈ ಗ್ರಾಮೀಣ ಅಸಂಘಟಿತ ಕಾರ್ಮಿಕರಿಗೆ ಕೈಗಾರಿಕಾ ಕಾರ್ಮಿಕರಿಗೆ ಇರುವಂತೆ ಯಾವುದೇ ಕಾನೂನಿನ ರಕ್ಷಣೆ ಇರುವುದಿಲ್ಲ. ಅವರು ಕನಿಷ್ಠ ವೇತನದಿಂದ ವಂಚಿತರಾಗಿದ್ದಾರೆ. ಇತ್ತೀಚಿಗಿನ ವರ್ಷಗಳಲ್ಲಿ ಗ್ರಾಮೀಣ ಅಸಂಘಟಿತ ಕಾರ್ಮಿಕರು ನಮ್ಮ ಪಕ್ಷದ ಮಾರ್ಗದರ್ಶನದಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಆಶ್ರಯದಲ್ಲಿ ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ನಡೆಸುತ್ತಿರುವ ಪ್ರಜಾಸತ್ತಾತ್ಮಕ ಹೋರಾಟಗಳಿಗೆ ಸಿ.ಪಿ.ಐ.(ಎಂ) ರಾಜ್ಯದ 16ನೇ ಸಮ್ಮೇಳನ ತನ್ನ ಬೆಂಬಲ ವ್ಯಕ್ತಪಡಿಸುತ್ತದೆ. ಮತ್ತು ಹೋರಾಟ ನಿರತ ಸಂಗಾತಿಗಳನ್ನು ಅಭಿನಂದಿಸುತ್ತದೆ. ರಾಜ್ಯ ಸರಕಾರವು ಈ ಅಸಂಘಟಿತ ಗ್ರಾಮೀಣ ಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸಿ ತುರ್ತು ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

ಮುಖ್ಯವಾಗಿ ನಮ್ಮ ನಾಡಿನ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾದ ವಂಶಪಾರಂಪರ್ಯವಾಗಿ ಬಟ್ಟೆ ಉತ್ಪಾದಿಸುತ್ತಿರುವ ನೇಕಾರರು ಸದ್ಯ ತಮ್ಮ ಕೆಲಸಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಮಿಲ್ ವಿಭಾಗಕ್ಕೆ ಉದ್ಯೋಗಕ್ಕಾಗಿ ಸೇರಿದ ನೇಕಾರರು ಇಂದು ಹೊಸ ಆರ್ಥಿಕ ನೀತಿಯ ದುಷ್ಪರಿಣಾಮವಾಗಿ ಮಿಲ್‌ಗಳು ಮುಚ್ಚುತ್ತಿರುವಾಗ ಪುನಃ ನಿರುದ್ಯೋಗವಧಿ ನೇಕಾರರಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಇವರಿಗೆ ಹೊಸ ಉದ್ಯೋಗಾವಕಾಶಗಳನ್ನು ಒದಗಿಸಲಾಗುತ್ತಿಲ್ಲ. ಈ ಪ್ರಮುಖ ಉದ್ಯಮವನ್ನು ರಕ್ಷಿಸಲು ಸರಕಾರದ ನೆರವು ಸಾಕಷ್ಟು ಸಿಗುತ್ತಿಲ್ಲ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಾರ್ಯವ್ಯಾಪ್ತಿ ಹಾಗೂ ಪರಿಹಾರ ಬಹಳ ಸೀಮಿತ ಹಾಗೂ ಅಸಮರ್ಪಕವಾಗಿದೆ. ದ.ಕ. ಜಿಲ್ಲೆಯಲ್ಲಿ ನೇಕಾರರ ಸಹಕಾರ ಸಂಘಗಳಿದ್ದು 3000 ಜನರಿದ್ದಾರೆ. ಈ ಸಂಘಗಳಿಗೆ ಸರಕಾರದ ಧನ ಸಹಾಯವನ್ನು ಬಹಳಷ್ಟು ಅಧಿಕಾರಿಗಳು ತಿಂದು ಹಾಕುತ್ತಿದ್ದಾರೆ. ನೇಕಾರರು ತೀವ್ರ ಬಡತನ, ನಿರುದ್ಯೋಗದಿಂದಾಗಿ ಸಾಲದ ಭಾರದಿಂದ ತತ್ತರಿಸುತ್ತಿದ್ದಾರೆ. ಬದುಕು ಅಸಹನೀಯವಾಗಿ ಅಕಾಲ ಮರಣ, ಆತ್ಮಹತ್ಯೆ ಗ್ರಾಮೀಣ ನೇಕಾರರಲ್ಲಿ ಹೆಚ್ಚುತ್ತಿದೆ. ಕಾರಣ, ನೇಕಾರರ ರಾಜ್ಯವ್ಯಾಪಿ ಹೋರಾಟದ ಫಲವಾಗಿ ಸರಕಾರ ಈಗಾಗಲೇ ಘೋಷಿಸಿದ ತುಟ್ಟಿಭತ್ಯೆ ಸಹಿತ ಕನಿಷ್ಠ ವೇತನ ಜಾರಿಗೊಳಿಸಬೇಕು. ಗುಣಮಟ್ಟದ ಮಾಲು ಒದಗಿಸಬೇಕು. ಅವರಿಗೆ ವಿಮಾ, ವಸತಿ ಮುಂತಾದ ಸೌಕರ್ಯಗಳನ್ನು ನೀಡಬೇಕು. ಸರಕಾರದ ಸಹಾಯಧನದಲ್ಲಿ ಸೋರುವಿಕೆಯನ್ನು ತಡೆಯಬೇಕು.

- ಗ್ರಾಮೀಣ ಮಕ್ಕಳ ಆರೈಕೆಯ ಮಹತ್ವದ ಜವಾಬ್ದಾರಿ ಹೊತ್ತ ಅಂಗನವಾಡಿ ಕಾರ್ಯಕರ್ತೆಯರನ್ನು ಇತ್ತೀಚೆಗೆ ಸಾಕ್ಷರತೆ, ಬಾಲಕಾರ್ಮಿಕರ ಸಮೀಕ್ಷೆ, ಪೋಲಿಯೋ ಬಳಕೆ, ಹಸಿರು ಕಾರ್ಡು ವಿತರಣೆ ಮುಂತಾದ ಹಲವಾರು ಸರಕಾರಿ ಕಾರ್ಯಕ್ರಮಗಳಲ್ಲಿಯೂ ತೊಡಗಿಸ ಲಾಗುತ್ತಿದೆ. ಆದರೆ ಇವರು ಸೇವಾ ಭದ್ರತೆ, ಕನಿಷ್ಠ ಕೂಲಿ, ಇತ್ಯಾದಿಗಳಿಂದ ವಂಚಿತರಾಗಿದ್ದಾರೆ. ಆಡಳಿತ ನ್ಯಾಯ ಮಂಡಳಿ ನಿರ್ಣಯದಂತೆ ಮಾಸಿಕ ಗೌರವಧನ ಹೆಚ್ಚಿಸಬೇಕು. ಇವರನ್ನು ಸರಕಾರಿ ನೌಕರರೆಂದು ಪರಿಗಣಿಸಿ ಇವರ ನೇಮಕಾತಿ ಖಾಯಂಗೊಳಿಸಬೇಕು. ಇವರ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಗಟ್ಟಬೇಕು.
- ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು, ದೀಪ, ನೈರ್ಮಲ್ಯ ಮುಂತಾದ ನಾಗರೀಕ ಸೌಲಭ್ಯಗಳನ್ನು ಒದಗಿಸುತ್ತಿರುವ ಗ್ರಾಮಪಂಚಾಯತ್ ನೌಕರರಿಗೆ ಪ.ಬಂಗಾಳ, ಕೇರಳ ರಾಜ್ಯಗಳ ಎಡರಂಗ ಹಾಗೂ ಎಡ ಪ್ರಜಾಪ್ರಭುತ್ವವಾದಿ ರಂಗ ಸರಕಾರಗಳು ಮಾಡಿದಂತೆ ಸಮಾನ ಸೇವಾ ನಿಯಮಾವಳಿಗಳನ್ನು ರೂಪಿಸಿ, ವೇತನ ಶ್ರೇಣಿ, ಭಡ್ತಿ ಇತ್ಯಾದಿಗಳನ್ನು ನಿಗದಿ ಪಡಿಸಿ ಸರಕಾರಿ ಅಥವಾ ಪುರಸಭಾ ನೌಕರ ರಂತೆಯೇ ಪರಿಗಣಿಸಬೇಕು. ಇದಕ್ಕಾಗಿ ಗ್ರಾಮ ಪಂಚಾಯತ್‌ಗಳಿಗೆ ರಾಜ್ಯ ಸರಕಾರ ಸಾಕಷ್ಟು ಆಡಳಿತ ಅನುದಾನ ನೀಡಬೇಕು. ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ, ಸದಸ್ಯರಿಗೆ ಸಾಕಷ್ಟು ಗೌರವಧನ, ಭತ್ಯೆ ಕೊಡುತ್ತಿರುವ ರಾಜ್ಯ ಸರಕಾರ ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ಬಲಪಡಿಸಲು ಪಂಚಾಯತ್ ನೌಕರರ ಬೇಡಿಕೆಗಳನ್ನು ಈಡೇರಿಸಬೇಕು.
- ಗ್ರಾಮೀಣ ಪ್ರದೇಶದಲ್ಲೂ ಗ್ರಾಮ ಲೆಕ್ಕಿಗರ(ತಲಾಟಿಗಳು) ಕೈಗೆಳಗೆ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಕನಿಷ್ಠ ವೇತನ, ಕೆಲಸದ ಖಾಯಮಾತಿ, ಸೇವಾ ನಿಯಮಾವಳಿ ಗಳನ್ನು ರೂಪಿಸಿ ಜಾರಿಗೊಳಿಸಬೇಕು.
- ಹಾಗೆಯೇ ರಾಜ್ಯದ ವಿವಿಧ ಕೈಕಸುಬುದಾರರ ಉದ್ಯೋಗ ರಕ್ಷಣೆ, ನಿರ್ದಿಷ್ಟ ಗಳಿಕೆ ಖಾತರಿಪಡಿಸಬೇಕು. ಸರಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿಗಳಿಗೆ ಕನಿಷ್ಠ ವೇತನ, ಕೆಲಸದ ಖಾಯಮಾತಿ ಮಾಡಬೇಕು.

ಮಂಡನೆ: ಸಿ.ಆರ್.ಭಟ್
ಅನುಮೋದನೆ: ಗಂಗಮ್ಮ

ಸ್ವಾತಂತ್ರ್ಯ ಹೋರಾಟ: ಮರೆಮಾಚಿದ ಅಧ್ಯಾಯ

ಪಕ್ಷದ ಕ್ಯಾಲೆಂಡರ್ ನಿಮ್ಮ ಮನೆ ಪ್ರವೇಶಿಸಲಿ

ಪಕ್ಷದ ರಾಜ್ಯ ಸಮ್ಮೇಳನವನ್ನು ಜನರ ಬಳಿಗೆ ತೆಗೆದುಕೊಂಡು ಹೋಗಬೇಕು, ಜನರನ್ನು ಸಮ್ಮೇಳನದ ಹುಮ್ಮಸ್ಸಿನೊಡನೆ ಸೇರಿಸಬೇಕು ಎಂದು ಕನಸು ಕಂಡ ಸಮ್ಮೇಳನ ಸ್ವಾಗತ ಸಮಿತಿ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಚರಿತ್ರೆಯ ಪಠ್ಯಪುಸ್ತಕಗಳು ಮರೆ ಮಾಚಿದ ಅಧ್ಯಾಯಗಳನ್ನು ವಿವರಿಸುವ ಕ್ಯಾಲೆಂಡರ್‌ನ್ನು ಹೊರತಂದಿತು.

ಬಹುವರ್ಣದಲ್ಲಿ ಮುದ್ರಣಗೊಂಡ, ನಾಲ್ಕು ಪುಟಗಳ ಈ ಕ್ಯಾಲೆಂಡರ್ ಈ ೫೦ ವರ್ಷಗಳಲ್ಲಿ ಮರೆ ಮಾಚಿ ಹೋಗಿರುವ ತೆಲಂಗಾಣ ರೈತ ಹೋರಾಟ, ಭಗತ್‌ಸಿಂಗ್ ನೇತೃತ್ವದ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸೇನೆಯ ಹೋರಾಟ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳನ್ನು ನಡುಗಿಸಿದ ರಿನ್ ನಾವಿಕರ ಬಂಡಾಯ, ಗದರ್ ಪಾರ್ಟಿಯ ಧೀರ ಹೋರಾಟವನ್ನು ಬಿಂಬಿಸುತ್ತದೆ.

ಕಲಾವಿದ ಪ್ರಜಾವಾಣಿ ಬಳಗದ ಮೋನಪ್ಪ ಅವರು ಅತ್ಯಂತ ಸುಂದರವಾಗಿ ಈ ಕ್ಯಾಲೆಂಡರ್ ಕಲೆಯನ್ನು ರಚಿಸಿ ಕೊಟ್ಟಿದ್ದಾರೆ. ಪಕ್ಷದ ಮುದ್ರಣ ವಿಭಾಗ 'ಅಕ್ಷರ-ವಿನ್ಯಾಸ' ಮುತುವರ್ಜಿಯಿಂದ ಇದನ್ನು ಮುದ್ರಿಸಿದೆ.

ಈ ಕ್ಯಾಲೆಂಡರ್ ನಿಮ್ಮ ಮನೆಯ ಗೋಡೆಯಲ್ಲಿರಲಿ

ಈ ಕ್ಯಾಲೆಂಡರ್ ನಮ್ಮ ಪಕ್ಷದ ಎಲ್ಲಾ ಸಂಗಾತಿಗಳ ಮನೆಯ ಗೋಡೆ ಯಲ್ಲಿ ಇರಲೇಬೇಕು. ಏಕೆಂದರೆ ಬೆಳೆಯುವ ಮಕ್ಕಳು ಚರಿತ್ರೆ ಬೋಧಿಸದ ಈ ಹೋರಾಟಗಳನ್ನು ಕಲಿಯುತ್ತಲೇ ಬೆಳೆಯಬೇಕು. ಗೋಡೆಯ ಮೇಲೆ ಪ್ರತೀ ದಿನ ಈ ಕ್ಯಾಲೆಂಡರ್ ನಾವು ಹೋರಾಟ ನಡೆಸುವುದಕ್ಕೆ ಸ್ಫೂರ್ತಿ ನೀಡುತ್ತಿರಬೇಕು.

ಅಷ್ಟೇ ಅಲ್ಲ ಪಕ್ಷದ ಪತಿಯಿಂದ ಇಂತಹ ಜನಸಮೂಹವನ್ನು ಮುಟ್ಟುವ ಕೆಲಸ ಸಾಧ್ಯ ಎಂಬುದನ್ನು ಹರಡಬೇಕು. ಈ ಕ್ಯಾಲೆಂಡರ್ ನಿಮ್ಮ ಮನೆಯೊಳಗೆ ಬಂದರೆ ಮುಂದಿನ ವರ್ಷಗಳಲ್ಲಿ ಇನ್ನಷ್ಟು ಮತ್ತಷ್ಟು ಕ್ಯಾಲೆಂಡರ್ ಮುದ್ರಿಸುವ ಉತ್ಸಾಹ ಸಿಗುವಂತಾಗಬೇಕು.

ಈ ಕ್ಯಾಲೆಂಡರ್ ಮೂಲ ಬೆಲೆ ೧೫-೦೦ ರೂ. ಆದರೆ ಪಕ್ಷದ ಸಂಗಾತಿಗಳಿಗೆಂದು ೧೦-೦೦ ರೂ.ಗೆ ನೀಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಇದನ್ನು ಖರೀದಿಸಿ ಮನೆ ಮನೆಗೆ ಮುಟ್ಟಿಸಬೇಕು.

ಈ ಕ್ಯಾಲೆಂಡರನ್ನು ಅಕ್ಷರವಿನ್ಯಾಸ, ಕ್ರಿಯಾ ಪ್ರಕಾಶನ, ಪಕ್ಷದ ಕಛೇರಿಯಿಂದ ಪಡೆಯಬಹುದು.

ಪರಿಸರಕ್ಕೆ ಹಾನಿಯಾಗದಂತೆ ಹೆಚ್ಚಿನ ಉದ್ಯೋಗವಕಾಶದಿರುವ ಕೈಗಾರಿಕೆಗಳ ಸ್ಥಾಪನೆ

ಕರ್ನಾಟಕ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಹೆಚ್ಚಿನ ಹೊಸ ಕೈಗಾರಿಕೆಗಳು ಬರಲಿವೆ. ಸ್ಥಾಪಿತ ಹಿತಾಸಕ್ತಿಗಳು ಸ್ಥಳೀಯ ಕೆಲವು ಕೈಗಾರಿಕೋದ್ಯಮಿಗಳು ಪರಿಸರ ಹಾನಿಯಾಗುತ್ತದೆ ಎಂದು ವಿರೋಧಿಸಿ ಚಳುವಳಿಯನ್ನು ಮಾಡುತ್ತಾ ಕೈಗಾರಿಕೆಗಳು ಸ್ಥಾಪನೆಯಾಗದಂತೆ ಅಡ್ಡಿ ಉಂಟು ಮಾಡುತ್ತಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯದ 16ನೇ ಸಮ್ಮೇಳನವು ತೀವ್ರವಾಗಿ ಆಕ್ಷೇಪಿಸುತ್ತದೆ. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಇಂತಹ ಚಳುವಳಿಗಳನ್ನು ಬೆಂಬಲಿಸುತ್ತಿರುವುದನ್ನು ಖಂಡಿಸುತ್ತದೆ.

ಅಂತಹ ಶಕ್ತಿಗಳ ವಿರುದ್ಧ ಪ್ರಚಾರ-ಪ್ರಕ್ಷೋಭೆ ಜನಸಾಮಾನ್ಯರ ಮಧ್ಯೆ ಮಾಡಬೇಕಾಗಿದೆ. ಉದ್ಯೋಗಾವಕಾಶ ಹೆಚ್ಚಿಸುವ ಹಾಗೂ ಜಿಲ್ಲೆಗಳ ಅಭಿವೃದ್ಧಿಗೆ ಪೂರಕವಾದ ಕೈಗಾರಿಕೆಗಳನ್ನು ಸ್ಥಾಪಿಸು ವುದರ ಮಹತ್ವವನ್ನು ಯುವಜನತೆಗೆ ತಿಳಿಸಿ ಅವರ ಸಂಘಟನೆಯ ಮೂಲಕ ಸರಕಾರವನ್ನು ಒತ್ತಾಯಿಸುವ ಚಳುವಳಿಯನ್ನು ರೂಪಿಸಬೇಕಾಗಿದೆ.

ಪರಿಸರ ಮಾಲಿನ್ಯದ ಹೆಸರಿನಲ್ಲಿ ಯಾವುದೇ ವೈಜ್ಞಾನಿಕ ತಿಳುವಳಿಕೆ ಇಲ್ಲದೇ ಅಭಿವೃದ್ಧಿಗೆ ಮಾರಕವಾಗುವ ಚಳುವಳಿ ಮಾಡುವವರ ಮೇಲೆ ಕ್ರಮ ಕೈಗೊಂಡು, ಹೆಚ್ಚಿನ ಉದ್ಯೋಗಾವಕಾಶ ಇರುವ ಹೊಸ ಹೊಸ ಕೈಗಾರಿಕೆಗಳನ್ನು ಪರಿಸರಕ್ಕೆ ಹೆಚ್ಚಿನ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದರೊಂದಿಗೆ ಜಿಲ್ಲೆಗಳ ಮತ್ತು ರಾಜ್ಯದ ಅಭಿವೃದ್ಧಿಗೆ ಅನುಕೂಲವಾಗುವಂತೆ ಸ್ಥಾಪಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯದ 16ನೇ ಸಮ್ಮೇಳನವು ಸರಕಾರವನ್ನು ಒತ್ತಾಯಿಸುತ್ತದೆ.

ಮಂಡನೆ: ಕೆ. ಶಂಕರ್
ಅನುಮೋದನೆ:ಕೃಷ್ಣಪ್ಪ ಕೊಂಚಾಡಿ

ಮಹಿಳೆಯರ ಮೇಲಿನ ದೌರ್ಜನ್ಯ

ರಾಜ್ಯದಲ್ಲಿ ಪಾಳೇಗಾರಿ- ಅರೆಪಾಳೇಗಾರಿ ಬಂಡವಾಳಶಾಹಿ ಹಿಡಿತದ ವ್ಯವಸ್ಥೆಯು ಮಹಿಳೆಯರನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುತ್ತಿವೆ. ಮಹಿಳೆಯನ್ನು ಪೂಜಿಸುವ ವೈಭವೀಕರಣದ ನಾಟಕವಾಗುತ್ತಿರುವ ಈ ನೆಲದಲ್ಲಿ ಲಕ್ಷಾನುಗಟ್ಟಲೇ ಹೆಣ್ಣು ಕೂಸುಗಳನ್ನು ವೇಶ್ಯಾವೃತ್ತಿಗೆ ತಳ್ಳಲಾಗುತ್ತಿದೆ. ದೇವದಾಸಿ ಪದ್ಧತಿಯನ್ನು ದಲಿತ ಮಹಿಳೆಯರ ನಡುವೆ ಜೀವಂತವಾಗಿಟ್ಟು ಶೋಷಿಸುವ ಮೂಲಕ ಜಮೀನ್ದಾರಿ ವ್ಯವಸ್ಥೆ ತನ್ನ ಕ್ರೂರ ಅಟ್ಟಹಾಸ ಮೆರೆಯುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಮತ್ತು ಸಾಮಾಜಿಕ ದೌರ್ಜನ್ಯಗಳು, ಬಲತ್ಕಾರಗಳು ಸಿಕ್ಕಾಪಟ್ಟೆ ಹೆಚ್ಚಾಗುತ್ತಿದೆ. ಸಾಮಾಜಿಕ ಪಿಡುಗಾಗಿ ಭಯಂಕರ ಪೆಡಂಭೂತವಾಗಿ ಬೆಳೆಯುತ್ತಿರುವ ವರದಕ್ಷಿಣೆಗೆ ಅಸಂಖ್ಯಾತ ಮಹಿಳೆಯರು ಬಲಿಯಾಗುತ್ತಿದ್ದಾರೆ. ವರದಕ್ಷಿಣೆ ಸಾವುಗಳಲ್ಲಿ ನೂರಕ್ಕೆ ತೊಂಬತ್ತು ಕೊಲೆಗಳೇ ಆಗಿದ್ದರೂ ಆರೋಪಿಗಳ ಬಂಧನ ಹಾಗೂ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವುದು ಬಹಳ ಅಪರೂಪ.

ಆ ಪ್ರಕರಣಗಳನ್ನು ಆತ್ಮಹತ್ಯೆಯ ಪ್ರಕರಣಗಳೆಂದೇ ತಿರುಚಲಾಗುತ್ತಿದೆ. ಆರೋಪಿಗಳು ಬಡವರಾಗಿದ್ದಲ್ಲಿ, ಪೋಲೀಸರ ಕೈ ಬೆಚ್ಚಗೆ ಮಾಡಲು ಸಾಧ್ಯವಿಲ್ಲದಂಥವರಿದ್ದಲ್ಲಿ ಅಂಥವರನ್ನು ಮಾತ್ರ ಬಂಧಿಸಲಾಗುತ್ತದೆ. ಆರೋಪಿಗಳು ವೈದ್ಯರಿಲ್ಲ, ಪೋಲೀಸರಿಗೆ ಹಣ ಕೊಟ್ಟು ಕೊಂಡಲ್ಲಿ ಅವರ ವಿರುದ್ಧ ಯಾವುದೇ ಕ್ರಮ ನಡೆಯುವುದಿಲ್ಲ, ಆದ್ದರಿಂದಲೇ ಈವರೆಗೆ ಪೋಲೀಸ್ ಇಲಾಖೆಯಲ್ಲಿ ಬಡವರ ಕೇಸುಗಳು ನೊಂದಾಯಿಸಿದ್ದು ಹೆಚ್ಚಿಗೆ ಇಲ್ಲ. ನೊಂದಾಯಿಸಿದರೂ ಕೇಸುಗಳನ್ನು ದುರ್ಬಲಗೊಳಿಸಲಾಗುತ್ತಿದೆ. ಒಂದು ವೇಳೆ ನ್ಯಾಯಾಲಯದ ಕಟ್ಟೆ ಹತ್ತಿದರೂ ಯಾವುದೇ ನ್ಯಾಯ ಸಿಗದೆ ಆರಾಮಾಗಿ ಕೇಸುಗಳು ಖುಲಾಸೆಯಾಗಿ ಅಪರಾಧಿಗಳು ಆರೋಪ ಮುಕ್ತರಾಗಿ ಹೊರ ಬರುತ್ತಿರುವುದೇ ಹೆಚ್ಚು. ಅದು ರಾಯಚೂರು ಜಿಲ್ಲೆಯ ಸೌಮ್ಯಳ ಕೇಸಾಗಿರಬಹುದು. ಕೊಲೆಯಾದ ಮಂಗಳನಾಯಕ್‌ಳ ಕೇಸಾಗಿರಬಹುದು. ರೂಪಳ ಕೇಸಾಗಿರಬಹುದು. ಹಗರಿಬೊಮ್ಮನಹಳ್ಳಿಯ ವಡ್ಡರ ಮಹಿಳೆಯ ಕೇಸಾಗಿರಬಹುದು. ಇಂದಿರ ಪ್ರಿಯದರ್ಶಿನಿ ಕೇಸು, ಹರಿಹರದ ನಮ್ಮ ಒಬ್ಬ ಸಂಗಾತಿಯ ಮಗಳು ಅನೀತಳ ಕೇಸಾಗಿರಬಹುದು. ಒಟ್ಟಾರೆ ನ್ಯಾಯಾಲಯದಿಂದಲೂ ಈ ಎಲ್ಲಾ ಆರೋಪಿಗಳು ಮುಕ್ತರಾಗುತ್ತಿರುವುದು ಅತ್ಯಂತ ಕಳವಳದ ಸಂಗತಿಯಾಗುತ್ತಿದೆ. ಮತ್ತು ಸಾಬೀತಾಗಿಸುವ ಸಾಕ್ಷಿಗಳ ಮೇಲೆಯೂ ದೌರ್ಜನ್ಯ ನಡೆಸಿ ಸಾಕ್ಷಿಯೇ ಇಲ್ಲದಂತಾಗಿಸುವ ಗೂಂಡಾಗಿರಿಯೂ ಈಚಿನ ದಿನಗಳಲ್ಲಿ ಬೆಳೆದು ಬರುತ್ತಿದೆ. ಇದು ವಿಶೇಷವಾಗಿ ಪ್ರಭಾವಿ ರಾಜಕೀಯ ಮುಖಂಡರುಗಳಿಂದ ನಡೆಯುತ್ತಿದೆ. ಪೋಲೀಸ್ ಮಾಹಿತಿಯ ಪ್ರಕಾರ ತಿಂಗಳೊಂದರಲ್ಲಿಯೇ 5 ಜನ ಮಹಿಳೆಯರು ಬಲತ್ಕಾರಕ್ಕೆ ಮತ್ತು ದೌರ್ಜನ್ಯಕ್ಕೆ ಒಳಗಾಗಿದ್ದು ಅದರಲ್ಲಿ 3 ಜನ 18 ವರ್ಷ ವಯಸ್ಸಿನ ಕೆಳಗಿನವರು.

ಬಲಾತ್ಕಾರಕ್ಕೆ ಪ್ರಯತ್ನಗಳು ನಡೆದ ಕೇಸುಗಳಂತೂ ಈಚೆಗೆ ಗ್ರಾಮೀಣ ಮತ್ತು ನಗರಗಳೆರಡರಲ್ಲಿಯೂ ಹೆಚ್ಚುತ್ತಿದೆ. ಗುಲ್ಬರ್ಗದ ಆಳಂದ ಮತ್ತು ಮೊಳಕಾಲ್ಮೂರಿನಲ್ಲಿ ಅಂಗನವಾಡಿ ಮಹಿಳೆಯರ ಮೇಲೆ ಬಲಾತ್ಕಾರಕ್ಕೆ ಪ್ರಯತ್ನಗಳಲ್ಲದೆ ಬೀದರ್‌ನಲ್ಲಿ ಭಾನಾಮತಿ ಹೆಸರಿನಲ್ಲಿ ಮಹಿಳೆಯೊಬ್ಬಳನ್ನು ಬೆತ್ತಲಾಗಿಸಿ ಮೈಮೇಲೆ ಕಾದ ಕಬ್ಬಿಣದ ಬರವಣಿಗೆ ಬರೆದ ಕ್ರೂರ ಘಟನೆಯೂ ನಡೆದು ಹೋಗಿದೆ.

ಜೊತೆಗೆ ಕೌಟುಂಬಿಕವಾಗಿಯೂ ಮಹಿಳೆಯರ ಮೇಲೆ ದೌರ್ಜನ್ಯಗಳು ಬೆಳೆದು ಬರುತ್ತಿವೆ. ಗಂಡು ಮಗುವಾಗಿಲ್ಲವೆಂದು ವರದಕ್ಷಿಣೆ ಇತ್ಯಾದಿ ತರಲಿಲ್ಲವೆಂದು ಮಾನಸಿಕ ಮತ್ತು ದೈಹಿಕ ಕಿರುಕುಳಗಳು ಪರದೆಯ ಹಿಂದೆ ಅತ್ಯಂತ ಅಮಾನವೀಯವಾಗಿ ನಡೆಯುತ್ತಿವೆ.

ಹೊಟ್ಟೆಯಲ್ಲಿರುವ ಮಗು ಹೆಣ್ಣು ಮಗುವೆಂದಾಕ್ಷಣ ಅದನ್ನು ತೆಗೆಸಿ ಹಾಕಲು ಒತ್ತಡ ಹೇರಲಾಗುತ್ತಿದೆ. ಮಾನಸಿಕ ಕ್ಷೋಭೆಗೆ ನೋವಿಗೆ ಒಳಗಾಗಿ ಆ ಮಹಿಳೆ ಒಪ್ಪಿಕೊಳ್ಳುವಂಥ ಒತ್ತಡಕ್ಕೆ ಒಳಗಾಗುತ್ತಿದ್ದಾಳೆ.

ಗಂಡ ಬಿಟ್ಟ ಮಹಿಳೆಯರ ಸ್ಥಿತಿಯಂತೂ ಶೋಚನೀಯವಾಗಿದೆ. ಕೋರ್ಟ್‌ಗೆ ಅಲೆದಾಡುವುದರಲ್ಲಿಯೇ ದಿನ ತಳ್ಳುವಂತಾಗುತ್ತಿದೆ. ಅದರಲ್ಲಿಯೂ ಕರ್ನಾಟಕದ ಮುಸ್ಲಿಂ ಮಹಿಳೆಯರಂತೂ 'ತಲಾಖ್' ಎಂಬ ಕತ್ತಿಯ ಹರಿತಕ್ಕೆ ತತ್ತರಿಸುತ್ತಿರುವರು. ಅನಕ್ಷರತೆಯ ಕಾರಣದಿಂದಲೂ ಸಂಪ್ರದಾಯದ ಹಿಡಿತದ ಕಾರಣದಿಂದಲೂ ಮುಸ್ಲಿಂ ಮಹಿಳೆಯರ ದನಿ ನ್ಯಾಯಾಲಯ ಕಟ್ಟೆಯವರೆಗೂ ಮುಟ್ಟುತ್ತಿಲ್ಲ.

ಹೀಗೆ ಮಹಿಳೆಯರ ಮೇಲೆ ವ್ಯಾಪಕವಾಗಿ ಹೆಚ್ಚುತ್ತಿರುವ ದೌರ್ಜನ್ಯ - ಬಲತ್ಕಾರಗಳನ್ನು ತಡೆಯುವಲ್ಲಿ ಸರಕಾರ ಕಾನೂನು ಬಿಗಿ ಕ್ರಮವೂ ಕೈಗೊಳ್ಳದಿರುವುದು ಖಂಡನೀಯವಾಗಿದೆ. ಆದ್ದರಿಂದ ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನವು ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಬಲತ್ಕಾರ ತಡೆಗಟ್ಟಲು ಕಾನೂನನ್ನು ಬಿಗಿಗೊಳಿಸಬೇಕೆಂದು ಒತ್ತಾಯಿಸುತ್ತದೆ. ಜೊತೆಗೆ ಪೋಲೀಸರ ಠಾಣೆಯಲ್ಲಿ ನೊಂದಾಯಿಸಲ್ಪಟ್ಟ 6 ತಿಂಗಳೊಳಗಾಗಿ (ಮಹಿಳೆಯರ ಯಾವುದೇ ಕೇಸುಗಳು) ಅಂತ್ಯಗೊಳಿಸಬೇಕು ಮತ್ತು ಕುಟುಂಬ ನ್ಯಾಯಾಲಯಗಳನ್ನು ಹೆಚ್ಚಿಸಬೇಕೆಂದು ಮಹಿಳೆಯರ ಹಕ್ಕು ರಕ್ಷಣೆಗಳ ಕಾನೂನಿನ ಕುರಿತು ಶಿಕ್ಷಣ ನೀಡಬೇಕೆಂದು ಈ ಸಮ್ಮೇಳನವು ಒತ್ತಾಯಿಸುತ್ತದೆ.

ಮಂಡನೆ: ನೀಲಾ.ಕೆ
ಅನುಮೋದನೆ: ಸುರೇಖಾ ರಜಪೂತ್



ದ.ಕ. ಸಂಗಾತಿಗಳ ಸಾಹಸ

ಹೀಗೊಂದು ಪುರವಣಿ

ಪಕ್ಷದ ರಾಜ್ಯ ಸಮ್ಮೇಳನಕ್ಕೆ ಪೂರ್ವ ಭಾವಿಯಾಗಿ ನಡೆದ ಜಿಲ್ಲಾಸಮ್ಮೇಳನಗಳ ಪೈಕಿ ದಕ್ಷಿಣ ಕನ್ನಡ ಜಿಲ್ಲೆ ವಿಶೇಷ ಕೆಲಸವೊಂದನ್ನು ಮಾಡಿದೆ. 16ನೇ ಸಿಪಿಐ(ಎಂ) ಸಮ್ಮೇಳನವನ್ನು ಜನರಿಗೆ ತಿಳಿಹೇಳುವ ದೃಷ್ಟಿಯಿಂದ ವಿಶೇಷ ಪುರವಣಿಯನ್ನು ಹೊರತಂದಿದೆ.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಕೇವಲ ನಾಲ್ಕು ಪುಟಗಳ ಈ ಪುರವಣಿಯಲ್ಲಿ ಇಡೀ ಸಮ್ಮೇಳನದ ಮಹತ್ವವನ್ನು ತುಂಬಿಡಲಾಗಿದೆ.

ದ.ಕ. ಸಮ್ಮೇಳನದ ಪ್ರದೇಶಕ್ಕೆ ಸುನೀಲ್ ಮೈತ್ರಾ ಅವರ ಹೆಸರು ಇಟ್ಟ ಕಾರಣ 'ಸುನೀಲ್ ಮೈತ್ರಾ ನೆನಪಿನಲ್ಲಿ....' ವಿಶೇಷ ಲೇಖನವಿದೆ. ಜಿಲ್ಲಾ ಸಮ್ಮೇಳನಕ್ಕೆ ಸಜ್ಜುಗೊಂಡಿರುವ ಸುನೀಲ್ ಮೈತ್ರಾ ನಗರ ಇಡೀ ಕಾರ್ಯಕ್ರಮದ ತಯಾರಿ ತಿಳಿಸಿದರೆ ಈ ಬಾರಿಯ ರ್‍ಯಾಲಿ ಹೇಗೆ ವಿಶೇಷ ಅನುಭವ ನೀಡುತ್ತದೆ ಎಂಬ ಲೇಖನವೂ ಇದೆ.

ಹಿರಿಯ ಸಂಗಾತಿ ಬಿ.ಮಾಧವ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳವಳಿಯ ಆರಂಭದ ದಿನಗಳು ಕುರಿತು ನೀಡಿರುವ ಲೇಖನ ಮಹತ್ವದ್ದಾಗಿದೆ. ಲೋಕಸಭೆಯಲ್ಲಿ ಸಿಪಿಐ(ಎಂ) ಪ್ರಾತಿನಿಧ್ಯ (1952 ರಿಂದ ಇಲ್ಲಿಯವರೆಗೆ) ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ಸಿಪಿಐ(ಎಂ) ಕೇರಳ ವಿಧಾನಸಭೆಯಲ್ಲಿ ಸಿಪಿಐ(ಎಂ), ಸಿಪಿಎಂನ ಪಾಲಿಟ್ ಬ್ಯೂರೋ ಸದಸ್ಯರು, ಮಹಾಧಿವೇಶನಗಳು ನಡೆದದ್ದು ಯಾವಾಗ-ಎಲ್ಲಿ? ದುಡಿಯುವ ಜನರ ಸ್ಫೂರ್ತಿಯ ಚಿಲುಮೆ ಪಶ್ಚಿಮಬಂಗಾಳ ಅಲ್ಲದೆ ಇಎಂಎಸ್, ಸೋಮನಾಥ್ ಚಟರ್ಜಿ, ಇ.ಕೆ. ನಯನಾರ್ ಬಗ್ಗೆ ಬರಹಗಳಿವೆ.

ಮಂಗಳೂರಿನಲ್ಲಿ ತಲೆ ಎತ್ತಿ ನಿಂತಿರುವ 'ಎಕೆಜಿ ಭವನ' ಹುತಾತ್ಮ ಸಂಗಾತಿ ಭಾಸ್ಕರ ಕುಂಬಳೆ ಬಗ್ಗೆಯೂ ಲೇಖನಗಳಿವೆ.

'ನಿರಂತರ' ಗೋಡೆಪತ್ರಿಕೆಯನ್ನು ರಾಜ್ಯಕ್ಕೆ ಪರಿಚಯಿಸಿರುವ ದಕ್ಷಿಣ ಕನ್ನಡವೇ ಈಗ ಈ ರೀತಿಯ ಪುರವಣಿ ತರುವ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ.

○

ಬಡ ಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ವಸ್ತುಗಳು

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಒಳ್ಳೆಯ ಮಳೆ ಬೆಳೆಯಾಗಿದ್ದು ಕೇಂದ್ರ ಸರಕಾರದೊಡನೆ ಸಾಕಷ್ಟು ಆಹಾರ ಧಾನ್ಯ ಸಂಗ್ರಹಣೆಯಿದ್ದರೂ, ಹೊಸ ಆರ್ಥಿಕ ನೀತಿಗನುಗುಣವಾಗಿ ಜನಸಾಮಾನ್ಯರಿಗೆ, ಮುಖ್ಯವಾಗಿ ಶೇ. 40ಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಬಡತನ ರೇಖೆಯ ಕೆಳಮಟ್ಟದಲ್ಲಿರುವವರಿಗೆ ಆಹಾರ ಧಾನ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸುಲಭ ಬೆಲೆಗೆ ಒದಗಿಸುವ ಬದಲು ಅದನ್ನು ರಫ್ತು ಮಾಡಲು ಖಾಸಗಿ ವ್ಯಾಪಾರಸ್ಥರಿಗೆ ಮಾರಾಟ ಮಾಡಲಾಗುತ್ತಿದೆ. ಪರಿಣಾಮವಾಗಿ ರಾಜ್ಯಗಳಿಗೆ ಪಡಿತರ ಆಹಾರ ಧಾನ್ಯಗಳ ಪೂರೈಕೆಯನ್ನು ಕಡಿಮೆಗೊಳಿಸಲಾಗುತ್ತಿದೆ. ಉದಾಹರಣೆಗೆ:- ಗುಲಬರ್ಗಾ ಜಿಲ್ಲೆಯೊಂದರಲ್ಲೆ 40 ಸಾವಿರ ಕ್ವಿಂಟಾಲ್ ಅಕ್ಕಿ ಕಡಿತ ಮಾಡಿರುವರು. ಇನ್ನೂ ಕೆಲವು ಕಡೆ ಗೋಧಿ ಕಡಿತ ಮಾಡಿರುವರು ಮತ್ತು ಇತರೆ ವಸ್ತುಗಳ ವಿತರಣೆ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಿರುವರು. ಈ ವ್ಯವಸ್ಥೆಯಲ್ಲಿ ಒದಗಿಸುವ ಆಹಾರ ಧಾನ್ಯಗಳ ಬೆಲೆ ಹೆಚ್ಚಿಸುವ ಮೂಲಕ ಮುಕ್ತ ಮಾರುಕಟ್ಟೆ ಹಾಗೂ ಪಡಿತರ ಬೆಲೆಗಳ ಮಧ್ಯೆ ಹೆಚ್ಚಿನ ವ್ಯತ್ಯಾಸವಿರದೆ, ಬಡಜನರು ತಮ್ಮ ಅಗತ್ಯತೆಗಾಗಿ ಹೆಚ್ಚಾಗಿ ಮುಕ್ತ ಮಾರುಕಟ್ಟೆಯನ್ನೆ ಅವಲಂಬಿಸಬೇಕಾಗಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಈ ರೀತಿ ದುರ್ಬಲಗೊಳಿಸುವ ಕೇಂದ್ರ ಸರಕಾರದ ನೀತಿಯನ್ನು ಪ.ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳ ಸಿ.ಪಿ.ಐ.(ಎಂ)ನ ನೇತೃತ್ವದ ಎಡರಂಗ ಸರಕಾರಗಳು ತೀವ್ರವಾಗಿ ಪ್ರತಿಭಟಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಮೊದಲಿಗಿಂತಲೂ ಬಲ ಪಡಿಸಲು ಒತ್ತಾಯಿಸುತ್ತಿವೆ. ಕೇಂದ್ರ ಸರಕಾರ ಪಡಿತರ ವ್ಯವಸ್ಥೆಗೆ ಬಿಡುಗಡೆ ಮಾಡುವ ಆಹಾರ ಧಾನ್ಯಗಳ ಕೊರತೆಯನ್ನು ಈ ರಾಜ್ಯ ಗಳ ಎಡರಂಗ ಸರಕಾರಗಳು ಭರ್ತಿಮಾಡಲು ಪ್ರಯತ್ನಿಸುತ್ತಿವೆ. ಕರ್ನಾಟಕ ಸರಕಾರವೂ ಬಡತನ ರೇಖೆಯ ಕೆಳಮಟ್ಟದಲ್ಲಿ ರುವ ಜನರಿಗೆ ಆಹಾರ ಧಾನ್ಯಗಳು ಸೇರಿದಂತೆ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅರ್ಧ ಬೆಲೆಗಳಲ್ಲಿ ನಿರಂತರ ಸರಬರಾಜು ಮಾಡಲು ಜವಾಬ್ದಾರಿ ವಹಿಸಬೇಕೆಂದು ಸಿ.ಪಿ.ಐ. (ಎಂ)ನ ರಾಜ್ಯ 16ನೇ ಸಮ್ಮೇಳನ ಒತ್ತಾಯಿಸುತ್ತದೆ.

ಮಂಡನೆ: ಟಿ.ಎಸ್.ನಾಯ್ಕ
ಅನುಮೋದನೆ: ಬಿ.ಲಿಂಗಪ್ಪ

ಕೋಮುವಾದದ ವಿರುದ್ಧ

ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ನಡೆದ ಸಿಪಿಐ(ಎಂ) ಪಕ್ಷದ 16ನೇ ರಾಜ್ಯ ಸಮ್ಮೇಳನವು ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತದೆ.

ಚುನಾವಣೆಗಳು ಹತ್ತಿರ ಬಂದಾಗಲೆಲ್ಲಾ ಹಿಂದೂ ಕೋಮುವಾದಿಗಳು ವಿಶೇಷ ತಂತ್ರಗಳನ್ನು ಹೂಡಿ ಗಲಭೆ ಹುಟ್ಟು ಹಾಕುವ ಕೆಲಸ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅಲ್ಪಸಂಖ್ಯಾತ ಮತೀಯವಾದಿಗಳು ಸಹ ಪ್ರತಿತಂತ್ರ ರೂಪಿಸಿ ಕಾರ್ಯಪ್ರವೃತ್ತರಾಗುತ್ತಿದ್ದಾರೆ. ಇತ್ತೀಚಿನ ಕೆಲವು ಘಟನೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತಿದೆ.

ವಿರಾಜಪೇಟೆಯಲ್ಲಿ ಎರಡು ಜನರ ಕೊಲೆಯಾಗಿದೆ. ಎರಡು ಜನಾಂಗದ ಯುವಕರ ಮಧ್ಯೆ ಉಂಟಾದ ವ್ಯವಹಾರಿಕ ವಿವಾದವನ್ನು ಹಿಂದೂ ಕೋಮು ವಾದಿಗಳು ಕೋಮುಗಲಭೆಯಾಗಿ ಪರಿವರ್ತಿಸಿಕೊಂಡರು. ಲೂಟಿ, ಬೆಂಕಿ ಹಚ್ಚುವುದು ನಡೆಯಿತು. ಒಂದು ವಾರ ಕರ್ಫ್ಯೂ ವಿಧಿಸಲಾಯಿತು. ನೇರವಾಗಿ ಬಿಜೆಪಿ ಮತ್ತು ಸಂಘ ಪರಿವಾರದ ಪ್ರಚೋದನೆಯಿಂದ ಈ ಗಲಭೆ ನಡೆದಿದೆ.

ಉತ್ತರ ಕನ್ನಡದ ಮುಂಡಗೋಡಿನಲ್ಲಿ ವಿವಾದಾತ್ಮಕ ಸ್ಥಳದಲ್ಲೇ ಅಂತ್ಯಸಂಸ್ಕಾರ ನಡೆಸಬೇಕೆನ್ನುವ ಘಟನೆ ಕೋಮುಗಲಭೆಯಾಗಿ ಪರಿವರ್ತನೆಗೊಂಡಿತು. ಹಿಂದೂ ಕೋಮುವಾದಿಗಳು ಇದನ್ನು ಉಪಯೋಗಿಸಿಕೊಂಡು ಹಳ್ಳಿಪ್ರದೇಶದಲ್ಲೂ ಸಹ ಸೆಕ್ಷನ್ ಜಾರಿಗೊಳಿಸುವ ಪರಿಸ್ಥಿತಿ ನಿರ್ಮಾಣ ಮಾಡಿದರು.

ಹುಬ್ಬಳ್ಳಿಯ ಒಂದು ಸರ್ಕಾರಿ ಶಾಲೆಯಲ್ಲಿ ಮಕ್ಕಳನ್ನು ಮತಾಂತರಗೊಳಿಸಲಾಗುತ್ತದೆ ಎಂಬ ಗುಲ್ಲೆಬ್ಬಿಸಿ ಸಂಘ ಪರಿವಾರದವರು ಪ್ರಕ್ಷುಬ್ಧ ಪರಿಸ್ಥಿತಿಯನ್ನು ಹುಟ್ಟಿಹಾಕಿದರು.

ದಾವಣಗೆರೆಯಲ್ಲಿ ಒಂದು ಸ್ಥಳೀಯ ಪತ್ರಿಕೆಯಲ್ಲಿ ಬಂದ ಲೇಖನವನ್ನು ಉಪಯೋಗಿಸಿಕೊಂಡು ಮುಸ್ಲಿಂ ಮೂಲಭೂತವಾದಿಗಳು ಉದ್ವಿಗ್ನ ಪರಿಸ್ಥಿತಿ ನಿರ್ಮಾಣ ಮಾಡಿರುತ್ತಾರೆ.

ಬೆಂಗಳೂರಿನ ಜಯನಗರದಲ್ಲಿ ನಲ್ಲಿಗೆ ಕಾಲುವೆ ತೋಡಿದ ಮಣ್ಣನ್ನು ತೆಗೆಯಲು ಆದ ವಿಳಂಬವನ್ನೇ ಮುಸ್ಲಿಂ ಮೂಲಭೂತವಾದಿಗಳು ಆ ಪ್ರದೇಶದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಿಸಲು ಉಪಯೋಗಿಸಿಕೊಂಡರು.

ಇವು ಕೆಲವು ಉದಾಹರಣೆಗಳು. ಅಂದರೆ ಸಣ್ಣಪುಟ್ಟ ವಿಷಯಗಳನ್ನೇ ಕೋಮುವಾದಿಗಳು ಬಳಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ.

ಕೋಮುವಾದಿಗಳ ವಿರುದ್ಧ ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ಮಧ್ಯ ಪ್ರವೇಶ ಸ್ವಾಗತಾರ್ಹವಾಗಿದೆ. ಆದ್ದರಿಂದಲೇ ಮಂಗಳೂರು, ಕೊಡಗು ಮೊದಲಾದ ಕಡೆಗಳಲ್ಲಿ ಅವರು ನಮ್ಮ ಕಾರ್ಯಕರ್ತರ ಮೇಲೆ ಧಾಳಿ ಮಾಡಲಾರಂಭಿಸಿದ್ದಾರೆ.

ಜನತೆಯ ಐಕ್ಯತೆ, ಸಮಗ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಜನತೆಯನ್ನು ದೊಡ್ಡ ಪ್ರಮಾಣದಲ್ಲಿ ಬಡಿದೆಬ್ಬಿಸಲು ಕಾರ್ಯೋನ್ಮುಖವಾಗಬೇಕೆಂದು ಪಕ್ಷದ 16ನೇ ರಾಜ್ಯ ಸಮ್ಮೇಳನ ನಿರ್ಣಯಿಸುತ್ತದೆ.

ಮಂಡನೆ: ಶಾಂತರಾಮ್ ನಾಯಕ್

'ನಾನು ಪಕ್ಷದ ಸದಸ್ಯ'

ಕುಡುಗೋಲು ಸುತ್ತಿಗೆಯ ಗುರುತು ಹೊತ್ತ ಟೋಪಿ, ಟವೆಲ್, ಎಸ್‌ಎಫ್‌ಐ, ಡಿವೈಎಫ್‌ಐ, ಎಐಡಿಡಬ್ಲ್ಯುಎ, ಸಿಪಿಎಂ, ಸಿಐಟಿಯು ಬ್ಯಾಡ್ಜುಗಳು, ಬಸ್ ಪಾಸ್ ಕವರ್‌ಗಳ ಮೇಲೆ ಎಸ್‌ಎಫ್‌ಐ, ಪಕ್ಷದ ಚಿನ್ಹೆಯ ಬ್ಯಾಡ್ಜ ಮಾತ್ರವಲ್ಲ ಲೆನಿನ್, ಸ್ಟಾಲಿನ್, ಮಾರ್ಕ್ಸ್, ಎಂಗೆಲ್ಸರ ಪೋಸ್ಟರ್‌ಗಳು.

ಇದು ಯಾವುದೇ ರಾಜ್ಯದ ಪಕ್ಷದ ಸಮ್ಮೇಳನದಲ್ಲಾಗಲೀ, ಎಸ್‌ಎಫ್‌ಐ, ಡಿವೈಎಫ್‌ಐನ ಸಮ್ಮೇಳನಗಳಿರಲಿ ಕಂಡೇ ಕಾಣುವ ದೃಶ್ಯ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲೇಸಮ್ಮೇಳನ ಆದರೂ ಇವರು ಪ್ರತ್ಯಕ್ಷ. ಯಾರಿವರು?

ಯಾರಿವರು? ಎಂಬ ಕುತೂಹಲ ಇಟ್ಟುಕೊಂಡೇ ಕೋಲಾರದ ಪಕ್ಷದ ಸಮ್ಮೇಳನಕ್ಕೆ ಬಂದ ಇವರನ್ನು 'ಐಕ್ಯರಂಗ' ಸಂದರ್ಶಿಸಿತು.

ಮದ್ರಾಸ್‌ನ ವೈ.ರಮೇಶ್ ಮುದ್ರಣ ತಂತ್ರಜ್ಞಾನದಲ್ಲಿ ಪದವಿ ಪಡೆದು ಮುದ್ರಣಾಲಯ ತೆರೆದಾಗ ಆ ವೇಳೆಗಾಗಲೇ ಮದ್ರಾಸ್‌ನಲ್ಲಿ ಹರಡಿ ಹೋಗಿದ್ದ ಪ್ರೆಸ್‌ಗಳ ಪೈಕಿ ಕಳೆದು ಹೋಗುತ್ತಿದ್ದರೇನೋ? ಆಗ ರಮೇಶನ ಚಿಕ್ಕಪ್ಪ ತಮಿಳು ನಾಡು ಸಿಐಟಿಯು ಜಿಲ್ಲಾಕಾರ್ಯದರ್ಶಿ ರಾಜಮಾಣಿಕ್ಯಂ ಅವರು 'ನೀನೇಕೆ ಪಕ್ಷಕ್ಕೆ ಬೇಕಾದದ್ದನ್ನೇ ಮುದ್ರಿಸಬಾರದು?' ಎಂದು ಪ್ರಶ್ನಿಸಿದರು.

ಅಲ್ಲಿಂದ ರಮೇಶ್ ಅವರ ಜೀವನದಲ್ಲಿ ಕೆಂಪು ಕಿರಣಗಳು ಮೂಡಿದವು. ೧೯೮೪ ರಲ್ಲಿ ಪಕ್ಷಕ್ಕೆ ಬೇಕಾದ ಬಾವುಟ, ತೋರಣ, ಬ್ಯಾನರ್ ಗಳನ್ನು ತಯಾರಿಸಲು ಆರಂಭಿಸಿದ ರಮೇಶ್ ಈಗ ಪಕ್ಷ ಹಾಗೂ ಅದರ ಸಾಮೂಹಿಕ ಸಂಘಟನೆಗಳನ್ನು ಯಾವ ರೀತಿಯಲ್ಲಿ ಜನರ ಬಳಿಗೆ ಕೊಂಡೊಯ್ಯಬಹುದೋ ಹಾಗೆಲ್ಲಾ ಪ್ರಯತ್ನಿಸಿದ್ದಾರೆ. ರಿಸ್ಟವಾಚ್‌ಗೆ ಅಂಟಿಸುವ ಸ್ಟಿಕರ್‌ನಿಂದ ಟೋಪಿಯವರೆಗೆ.

'ನಾನು ಈಗ ಪಕ್ಷದ ಸದಸ್ಯ' ಎಂದು ಅತ್ಯಂತ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಉತ್ತರ ಮದ್ರಾಸ್‌ನಲ್ಲಿ ಪಕ್ಷದ ಸದಸ್ಯರಾಗಿರುವ ರಮೇಶ್ ಪಕ್ಷದ ಕೇಂದ್ರ ಸಮಿತಿಯಿಂದ ಎಲ್ಲೆಲ್ಲಿ ರಾಜ್ಯ ಸಮ್ಮೇಳನ, ಸಮೂಹ ಸಂಘಟನೆಗಳ ಕಾರ್ಯಕ್ರಮ ಇದೆ ಎಂಬ ಪಟ್ಟಿ ಪಡೆಯುತ್ತಾರೆ. ಅದರಂತೆ ತಮ್ಮ ಗಂಟುಮೂಟೆಯೊಂದಿಗೆ ಅಲ್ಲಿಗೆ ಹಾಜರಾಗುತ್ತಾರೆ.

'ಕನಿಷ್ಠ ಏನಿಲ್ಲೆಂದರೂ ಒಂದು ಸಮ್ಮೇಳನದಲ್ಲಿ ೪ ರಿಂದ ೫ ಸಾವಿರ ವ್ಯಾಪಾರವಾಗುತ್ತಿದೆ' ಎನ್ನುತ್ತಾರೆ ರಮೇಶ್. ಮಾತ್ರವಲ್ಲ ವ್ಯಾಪಾರಕ್ಕೆ ಅವರ ಸಹೋದರ ಚೆಲಂಬಾನು ಸಹಾ ನೆರವಾಗಿದ್ದಾರೆ. ಅವರು ವಿಜಯವಾಡದಲ್ಲಿ ಪಕ್ಷದ ಸಂಗಾತಿ ☐

ರೈತರ ಮೇಲೆ ಅಭಿವೃದ್ಧಿ ಕರಹೇರುವ ವಿರುದ್ಧ

ಜನತಾದಳ ಕರ್ನಾಟಕ ರಾಜ್ಯ ಸರಕಾರ ನೀರಾವರಿ ಯೋಜನೆಗಳಿಂದ ಪ್ರಯೋಜನ ಪಡೆದ ರೈತರ ಭೂಮಿಗೆ ಪ್ರತಿ ಎಕರೆಗೆ ಒಂದು ಸಾವಿರ ರೂಪಾಯಿಯಂತೆ ಅಭಿವೃದ್ಧಿ ಕರ ಹೇರುವ ಮೂಲಕ ಮುಂದಿನ ನೀರಾವರಿ ಯೋಜನೆಗಳಿಗೆ ಬೇಕಾಗುವ ಸಂಪನ್ಮೂಲ ಸಂಗ್ರಹಿಸಲು ಉದ್ದೇಶಿಸಿರುವುದು ರೈತರ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ ಎಂದು ಸಿ.ಪಿ.ಐ.(ಎಂ) ರಾಜ್ಯ 16ನೇ ಸಮ್ಮೇಳನ ಅಭಿಪ್ರಾಯಪಡುತ್ತದೆ.

ಗ್ರಾಮೀಣ ಕರ್ನಾಟಕದಲ್ಲಿ ದುಡಿಯುವ ಬಡ ಹಾಗೂ ಮಧ್ಯಮ ರೈತರು ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಸಬ್ಸಿಡಿ ಕಡಿತ, ಕೃಷಿ ಬಳಕೆ ವಸ್ತುಗಳಿಗೆ ವಿಪರೀತ ಬೆಲೆ ಏರಿಕೆ, ಕೃಷಿ ಉತ್ಪಾದಿತ ವಸ್ತುಗಳಿಗೆ ನ್ಯಾಯ ಬೆಲೆ ಸಿಗದಿರುವುದು ಮತ್ತು ಇತರ ಮೂಲಗಳಿಂದ ಪಡೆದ ಸಾಲ ಹಾಗೂ ಬಡ್ಡಿ ಭಾರ ಇತ್ಯಾದಿಗಳಿಂದ ಅನಿವಾರ್ಯತೆ ಉಂಟಾಗಿ ರೈತರು ದಿವಾಳಿಯಾಗುವ ಅಪಾಯವಿದೆ ಎಂದು ಸಿ.ಪಿ.ಐ.(ಎಂ) ರಾಜ್ಯ 16ನೇ ಸಮ್ಮೇಳನವು ಎಚ್ಚರಿಸುತ್ತದೆ.


ನೀರಾವರಿಯಿಂದಾಗಿ ಗ್ರಾಮದ ಮೇಲ್‌ಸ್ತರದ ಭೂಮಾಲಿಕರು ಹಾಗೂ ಕೃಷಿ ಬಳಕೆ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿಗಳು, ಹಾಗೂ ಕೃಷಿ ಉತ್ಪಾದನೆಯನ್ನು ಕಚ್ಚಾ ವಸ್ತುಗಳನ್ನಾಗಿ ಬಳಸಿ ಸಿದ್ಧ ವಸ್ತುಗಳನ್ನು ತಯಾರಿಸಿ ಗ್ರಾಹಕರಿಗೆ ದುಬಾರಿ ಬೆಲೆಯಲ್ಲಿ ಮಾರಾಟ ಮಾಡುವ ಕೈಗಾರಿಕೋದ್ಯಮಿಗಳು ನೈಜ ಅಭಿವೃದ್ಧಿ ಹೊಂದಿದ್ದು, ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಈ ವಿಭಾಗಗಳ ಮೇಲೆ ಅಭಿವೃದ್ಧಿ ಕರ ಹಾಕಲು ಸಮ್ಮೇಳನ ಒತ್ತಾಯಿಸುತ್ತದೆ.

ಅಭಿವೃದ್ಧಿ ಕರವನ್ನು ದುಡಿಯುವ ರೈತರ ಮೇಲೆ ಹೇರಿ ಅವರ ಕೈಯಲ್ಲಿದ್ದ ಭೂಮಿ ಮಾರಾಟವಾಗಿ ಭೂಮಾಲೀಕರ ಕೈಗೆ ವರ್ಗಾವಣೆಯಾಗಿ, ಭೂಮಿ ಕೆಲವರ ಕೈಯಲ್ಲಿ ಕೇಂದ್ರೀಕೃತಗೊಂಡು, ಬಂಡವಾಳಶಾಹಿ ಭೂಮಾಲಿಕರನ್ನು ಹುಟ್ಟು ಹಾಕುವಂತಾಗುವುದು. ಪರಿಣಾಮವಾಗಿ ಆಹಾರ ಧಾನ್ಯದ ಉತ್ಪಾದನೆಗೆ ತಿಲಾಂಜಲಿ ನೀಡಿ, ನಿರ್ಯಾತ ಆಧಾರಿತ ಸೀಗಡಿಮೀನು, ಪುಷ್ಪ ಸಾಂಬಾರು ದಿನಸುಗಳನ್ನು ಉತ್ಪಾದಿಸಿ, ಆಹಾರಧಾನ್ಯಕ್ಕಾಗಿ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ಕೈ ಒಡ್ಡುವ ಮುಖಾಂತರ ರಾಷ್ಟ್ರವನ್ನು ಆಹಾರಕ್ಕಾಗಿ ಪರಾವಲಂಬಿಯಾಗುವಂತೆ ಮಾಡಿದಂತಾಗುವುದು. ಕಾಂಗ್ರೆಸ್ಸಿನ ನೇತೃತ್ವದ ಹಿಂದಿನ ಸರಕಾರ ರೂಪಿಸಿದ ಐಎಂಎಫ್, ಜಾಗತಿಕ ಬ್ಯಾಂಕ್ ಪ್ರೇರಿತ ಹೊಸ ಆರ್ಥಿಕ ನೀತಿ, ಹೊಸ ಕೃಷಿ ನೀತಿಯನ್ನೇ ಜಾರಿ ಮಾಡುತ್ತಿರುವ ವಿರುದ್ಧ ಸಿ.ಪಿ.ಐ.(ಎಂ) ಸಮ್ಮೇಳನ ಎಚ್ಚರಿಕೆ ನೀಡುತ್ತದೆ. ಈ ರೈತ ವಿರೋಧಿ ಕ್ರಮವನ್ನು ಕೂಡಲೇ ಕೈ ಬಿಡಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ.

ಮಂಡನೆ: ಸಿ.ಎಸ್.ಬಾಳೆ
ಅನುಮೋದನೆ: ರಾಮಕೃಷ್ಣ

ಪತ್ರಿಕೆ ಒಂದು ಆಯುಧ

ಸಮ್ಮೇಳನದಲ್ಲಿ 'ಐಕ್ಯರಂಗ' ಪ್ರದರ್ಶನ



ಪಕ್ಷದ ಪತ್ರಿಕೆ ಹೇಗೆ ಮಾರಾಟವಾಗಬೇಕು? ಮೊದಲು ಬೀದಿಗೆ ಬನ್ನಿ, ಮನೆ ಮನೆಯ ಬಾಗಿಲು ತಟ್ಟಿ, ಮುಷ್ಕರ ನಡೆದಾಗ, ರಾಜಕೀಯ ಪ್ರಚಾರದ ವೇಳೆ ಜನರ ಮಧ್ಯೆ ಕೊಂಡೊಯ್ಯಿರಿ ಎಂದಿದ್ದರು ಲೆನಿನ್.

ಪಕ್ಷದ ಪತ್ರಿಕೆ ಎಂಬುದು ಬದಲಾವಣೆಯ ಪ್ರಮುಖ ಅಸ್ತ್ರ, ಪಕ್ಷದ ಪ್ರಭಾವವನ್ನು ವಿಸ್ತರಿಸುವ ಸಾಧನ ಎಂಬುದನ್ನು ಮನವರಿಕೆ ಮಾಡಿಕೊಡುವ 'ಐಕ್ಯರಂಗ ವಸ್ತು ಪ್ರದರ್ಶನ'ವನ್ನು ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಗುಲ್ಬರ್ಗಾದಲ್ಲಿ ಇದೇ ತಾನೇ ಆರಂಭವಾಗಿರುವ 'ಐಕ್ಯರಂಗ ಬಳಗ' ಅತ್ಯುತ್ಸಾಹದಿಂದ ತಯಾರಿಸಿದ ಪೋಸ್ಟರ್ಸ್‌ಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ಗುಲ್ಬರ್ಗಾ ಐಕ್ಯರಂಗ ಬಳಗದ ಸಂಗಾತಿಗಳಾದ ಕೋದಂಡರಾಂ, ವಿರುಪಾಕ್ಷಿ ಚಡಕಲ್, ಅಪ್ಪಯ್ಯ ಹಿರೇಮಠ, ಅರುಣ್ ಕುಮಾರ್, ಮೇಟಿ ಮುಂತಾದ ಸಂಗಾತಿಗಳು ಸಿದ್ಧ ಮಾಡಿದ್ದ ವಸ್ತು ಪ್ರದರ್ಶನ ಸಮ್ಮೇಳನದ ಮೂರು ದಿನಗಳುದ್ದಕ್ಕೂ ಸಂಗಾತಿಗಳ ಗಮನ ಸೆಳೆಯಿತು.

ದಿವಂಗತ ಸಂಗಾತಿ ಎನ್.ಎಲ್. ಉಪಾಧ್ಯಾಯರು ಬಳೇಪೇಟೆಯ ಬೀದಿ ಬೀದಿಗಳಲ್ಲಿ ನಿಂತು ಐಕ್ಯರಂಗ ಮಾರುತ್ತಿದ್ದದ್ದು, ಜನಶಕ್ತಿಯಾಗಿ ಉದಯಿಸಿ 'ಐಕ್ಯರಂಗ' ಬೆಳೆದವರೆಗಿನ ಕಥೆ, ನಿರಂಜನರು ಪಕ್ಷದ ಪತ್ರಿಕೆಯ ಸಂಪಾದಕ ರಾಗಿದ್ದದ್ದು, ಖ್ಯಾತ ಸಾಹಿತಿಯಾದ ಚನ್ನವೀರ ಕಣವಿ, ಸು.ರಂ. ಎಕ್ಕುಂಡಿ ಅವರು ಪತ್ರಿಕೆಗೆ ಬರೆಯುತ್ತಿದ್ದದ್ದು, ಪಕ್ಷದ ಪತ್ರಿಕೆಯ ಮಹತ್ವದ ಬಗ್ಗೆ ಮಾವೋ, ಲೆನಿನ್, ಬಿ.ಟಿ.ರಣದಿವೆ ಆಡಿದ ಮಾತು ಎಲ್ಲವೂ ಪ್ರದರ್ಶನದಲ್ಲಿತ್ತು.

'ಐಕ್ಯರಂಗ'ದ ಪ್ರಸಾರವನ್ನು ೧೫ ಸಾವಿರಕ್ಕೆ ಹೆಚ್ಚಿಸಿ, ದಿನಪತ್ರಿಕೆ ಮಾಡಿ ಎಂದು ಮಂಗಳೂರಿನಲ್ಲಿ ನಡೆದ ಪಕ್ಷದ ರಾಜ್ಯ ೧೫ನೇ ಸಮ್ಮೇಳನದಲ್ಲಿ ಕರೆ ನೀಡಿದ್ದ ಪಾಲಿಟ್ ಬ್ಯೂರೋ ಸದಸ್ಯ ಕಾಂ. ಇ. ಬಾಲಾನಂದನ್ ಅವರು ಈ ಐಕ್ಯರಂಗ ಪ್ರದರ್ಶನವನ್ನು ಉದ್ಘಾಟಿಸಿದರು.

ಪ್ರಜಾವಾಣಿ, ಉದಯವಾಣಿ, ಕನ್ನಡ ಪ್ರಭ ಓದುತ್ತಾರೆ. ಐಕ್ಯರಂಗ ಓದುತ್ತಾರಾ ಎಂಬ ಪ್ರಶ್ನೆಗೆ ಬೆಂಗಳೂರಿನ ಬಸ್ ಸ್ಟ್ಯಾಂಡ್ ಒಂದರಲ್ಲೇವಾರದಿಂದ ವಾರಕ್ಕೆ ಐಕ್ಯಂರಗ ಮಾರಾಟ ಹೆಚ್ಚುತ್ತಾ ಹೋಗುತ್ತಿರುವುದನ್ನು ಒಂದು ಪೋಸ್ಟರ್ ಬಿಂಬಿಸಿತ್ತು. ನನ್ನ ಬಳಿ ೧.೭೫ ಪೈಸೆ ಮಾತ್ರ ಇದೆ ಅಷ್ಟಕ್ಕೇ ಐಕ್ಯರಂಗ ಕೊಡಿ ಎಂದು ಬಸ್ ನಲ್ಲಿದ್ದ ಮಹಿಳೆ ಕೇಳಿದ್ದು ಮಾರಾಟ ಮಾಡಲು ಹೋದ ಸಂಗಾತಿಗಳು ಎದುರಿಸಿದ ಪ್ರಶ್ನೆಯನ್ನೂ ಈ ಪ್ರದರ್ಶನ ತಿಳಿಸಿತು. ಮಾತ್ರವಲ್ಲ, ಈ ಮಾರಾಟದ ರೀತಿಯನ್ನು ಕಂಡು 'ಓಹ್! ಎಂತಹ ಒಳ್ಳೆಯ ಐಡಿಯಾ' ಎಂದು ಇತರೆ ಸಂಗಾತಿಗಳು ಉದ್ಗರಿಸಿದ್ದನ್ನು, ತಿಳಿಸಿದ ಪ್ರದರ್ಶನ ಇದರಂತೆ ಪ್ರತೀ ಜಿಲ್ಲೆಯಲ್ಲಿಯೂ ಐಕ್ಯರಂಗ ಮಾರಾಟ ಮಾಡಬಾರದೇಕೆ ಎಂದೂ ಪ್ರಶ್ನೆ ಹಾಕಿತು.

ಐಕ್ಯರಂಗ ಬೆರಳಚ್ಚಿನಿಂದ ಆಫ್ ಸೆಟ್ ಮುದ್ರಣದವರೆಗೆ ಬೆಳೆದ ಬಗೆ, ಐಕ್ಯರಂಗದ ವಿನ್ಯಾಸದಲ್ಲಿಆಗಿರುವ ಬೆಳವಣಿಗೆ, ಐಕ್ಯರಂಗದ ವಿಶೇಷಾಂಕಗಳು, ಐಕ್ಯರಂಗ ಹೊರತಂದ ಕ್ಯಾಲೆಂಡರ್‌ಗಳನ್ನು ಪ್ರದರ್ಶನದಲ್ಲಿ ಬಿಂಬಿಸಲಾಗಿತ್ತು.

ಟಾಂಗಾ ಓಡಿಸುತ್ತಿದ್ದ ವ್ಯಕ್ತಿ ತಪ್ಪದೇ ಪಕ್ಷದ ಪತ್ರಿಕೆ ಓದುತ್ತಿದ್ದುದು ಅದನ್ನು ನೋಡಿದ ಬಿಜಾಪುರದ ಖಲಾಸಿ ಪಕ್ಷಕ್ಕೆ ಸೇರಿದ್ದು ಬೀಡಿ ಕಾರ್ಮಿಕರ ಸಂಘಟನೆ ಒಡೆಯಲು ಮಾಲೀಕರು ಬಳಸುತ್ತಿದ್ದ ಗೂಂಡಾ 'ಬಾಕ್ಸರ್ ಸಾಬ್' ಐಕ್ಯರಂಗದ ಓದುಗನಾಗಿ ಹೋದ ಕುತೂಹಲ ಪ್ರಸಂಗಗಳನ್ನೂ ಪ್ರದರ್ಶನ ಮುಂದಿಟ್ಟಿತು. ○



ಕೋಲಾರದ ಗೋಡೆಗಳನ್ನು ಅಲಂಕರಿಸಿದ ಕಲಾತ್ಮಕ ಗೋಡೆಬರಹಗಳು ಹಾಗೂ ಕಲಾವಿದರು



ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳ ಕುರಿತು

ಕೃಷ್ಣವಲಯ, ಗೋದಾವರಿ ವಲಯ, ಕಾವೇರಿ ವಲಯ, ಪಶ್ಚಿಮ ಘಟ್ಟಗಳಲ್ಲಿ ಹರಿಯುವ ನದಿಗಳ ಅಪಾರ ಜಲಸಂಪತ್ತು ಇರುವ ನಾಲ್ಕು ನೀರಾವರಿ ವಲಯಗಳನ್ನು ಗುರುತಿಸಬಹುದಾಗಿದೆ. ಕೃಷ್ಣಾ ವಲಯವು ಕರ್ನಾಟಕದ 60% ಪ್ರದೇಶದಲ್ಲಿ ಹರಿಯುತ್ತದೆ. ಹಲವಾರು ಉಪ ನದಿಗಳನ್ನು ಹೊಂದಿದೆ. ಬಚಾವತ್ ತೀರ್ಪಿನಂತೆ 734 ಟಿಎಂಸಿ ನೀರನ್ನು 2000 ವರ್ಷದ ಒಳಗೆ ಕರ್ನಾಟಕ ಬಳಸಿಕೊಳ್ಳಬೇಕಾಗಿದೆ. ಇಲ್ಲಿಯ ವರೆಗೆ 214.ಟಿಎಂಸಿ ನೀರನ್ನು ಬಳಸಿಕೊಳ್ಳಲಾಗಿದೆ. 410 ಟಿಎಂಸಿ ನೀರನ್ನು ಬಳಸಿಕೊಳ್ಳಬೇಕಾದ ಯೋಜನೆಗಳು ವಿವಿಧ ಹಂತಗಳಲ್ಲಿ ಚಾಲ್ತಿಯಲ್ಲಿದ್ದು. ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ಇನ್ನು 110ಟಿಎಂಸಿ ನೀರು ಬಳಸಿಕೊಳ್ಳಲು ಯೋಜನೆ ರೂಪಿಸಬೇಕಿದೆ.

ಸ್ಥಗಿತಗೊಳಿಸಿದ ಕೃಷ್ಣ ಮೆಲ್ದಂಡೆ ಯೋಜನೆಯ ಎರಡನೇಯ ಹಂತದ ಕೆಲಸ ಪುನರ್ ಆರಂಭಿಸುವುದು, ಹಿಪ್ಪರಗಿ ಬ್ಯಾರೇಜ್ ಮುಳವಾಡ ಏತ ನೀರಾವರಿ, ಕೃಷ್ಣದಲ್ಲಿಯ ಇತರೆ ಏತ ನೀರಾವರಿಗಳು ತುಂಗಾ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳಿಂದ ಗುಲಬರ್ಗಾ ಬಿಜಾಪುರ, ರಾಯಚೂರು, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ನೀರಾವರಿಯಾಗುವ ಜಲಸಂಪತ್ತು ಕೃಷ್ಣ ವಲಯದಲ್ಲಿದೆ. ಮಹದಾಯಿ ಯೋಜನೆಯನ್ನು ಕೈಗೆತ್ತಿಕೊಂಡು ಮಲಪ್ರಭ ಯೋಜನೆಯನ್ನು ಪೂರ್ಣಗೊಳಿಸಬೇಕಾಗಿದೆ.

ಗೋದಾವರಿ ವಲಯದಲ್ಲಿಯ ಕಾರಂಜಾ ಪೂರ್ತಿ ಮಾಡುವುದು, ಮೊಂಜ್ರಾ ಯೋಜನೆ ಕೆಲಸ ಆರಂಭಿಸುವುದು, ಗೋದಾವರಿಗೆ ಬದಲಾಗಿ ಕೃಷ್ಣ ವಲಯದಲ್ಲಿ 21 ಟಿಎಂಸಿ ನೀರು ಬಳಸಿಕೊಳ್ಳಲು ಯೋಜನೆ ರೂಪಿಸುವುದು.

ಕಾವೇರಿ ವಲಯದಲ್ಲಿ ಹೇಮಾವತಿ ಹಾರಂಗಿಯಲ್ಲದೆ ಇನ್ನೂ ನೀರು ಬಳಸಿಕೊಳ್ಳಲು ಅವಕಾಶ ಇದೆ. ಮೈಸೂರು, ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿ ನೀರಾವರಿಯಾಗುವ ಸಾಧ್ಯತೆ ಇದೆ.

ನೇತ್ರಾವತಿಯೂ ಸೇರಿದಂತೆ ಪಶ್ಚಿಮ ಘಟ್ಟಗಳ ಅಪಾರ ಜಲ ಸಂಪತ್ತು ಸಮುದ್ರ ಸೇರುತ್ತಿದೆ. ಅದನ್ನು ಪೂರ್ವಕ್ಕೆ ಹರಿಸುವ ಸಾಧ್ಯತೆ ಇದೆ ಎಂದು ತಜ್ಞರ ಅಭಿಪ್ರಾಯ. ಕರ್ನಾಟಕದ ಬರಗಾಲಕ್ಕೆ ತುತ್ತಾಗುವ ಅಪಾರ ಭೂಮಿಯನ್ನು ನೀರಾವರಿಗೆ ಅಳವಡಿಸಬಹುದಾಗಿದೆ. ದ.ಕ ಜಿಲ್ಲೆಯಲ್ಲಿ ನೀರಾವರಿ ಯೋಜನೆ ಹಣ ಇಲ್ಲದೆ ನೆನೆಗುದಿಗೆ ಬಿದ್ದಿದೆ. ತುಂಗಭದ್ರಾ ಯೋಜನೆಯಲ್ಲಿ ಹೂಳು ತುಂಬಿ 25% ರಷ್ಟು ನೀರಿನ ಸಂಗ್ರಹ ಕಡಿಮೆಯಾಗಿದೆ. ತುಂಗಭದ್ರಾ ಎಡದಂಡೆ ಕಾಲುವೆ ಒಡೆದು ಬೆಳೆಗೆ ನಷ್ಟವಾಗಿದೆ. U.K.P. ನಾರಾಯಣಾ ಎಡದಂಡೆ ಭದ್ರತೆ ಆತಂಕಕ್ಕೆ ಒಳಗಾಗಿದೆ. ಅದೆಲ್ಲ ಸರಿಪಡಿಸಲು ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು.

ನೀರಾವರಿಗೆ ಈಗಾಗಲೇ ಪ್ರಾರಂಭಿಸಿದ ಯೋಜನೆಗಳಿಗೆ ಹಣ ಒದಗಿಸದೇ ಇರುವುದರಿಂದ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿವೆ. ಯೋಜನೆ ವೆಚ್ಚ ಹೆಚ್ಚಾಗಿದೆ. ಕರ್ನಾಟಕದ ಆರ್ಥಿಕದ ಮೇಲೆ ಹಾನಿಕಾರಕ ಪರಿಣಾಮ ಬೀರಿದೆ. ಜನತೆಯ ಒತ್ತಡಕ್ಕೆ ಒಳಗಾಗಿ ಅಲ್ಪ ಸ್ವಲ್ಪ ಹಣ ಒದಗಿಸಲಾಗಿದೆ.

ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳನ್ನು ಕೇಂದ್ರ ಯೋಜನೆಗಳಾಗಿ ಘೋಷಿಸಿ ಕೇಂದ್ರ ಸರಕಾರ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ನೀರಾವರಿಗೆ ಹಣ ಒದಗಿಸಿದ್ದು ಸ್ವಾಗತಾರ್ಹವಾಗಿದೆ.

ನೀರಾವರಿ ಬಾಂಡ್ ಮೂಲಕ ಅಪಾರ ಬಡ್ಡಿ ಕೊಟ್ಟು ಹಣ ಸಂಗ್ರಹಮಾಡುವುದು ರೈತ ವಿರೋಧಿ ನೀತಿಯಾಗಿದೆ. ಮಧ್ಯಮ ಸಣ್ಣ ನೀರಾವರಿಗಳಿಗೆ ರಾಜ್ಯ ಸರಕಾರ ಹಣ ಒದಗಿಸಬೇಕು, ಅಪೂರ್ಣ ನೀರಾವರಿ ಯೋಜನೆಗಳನ್ನು ಪೂರ್ತಿಮಾಡಲು ಕಾಲ ನಿಗಧಿ ಪಡಿಸಿಕೊಂಡು ಪೂರ್ತಿಮಾಡುವುದು.

ನೀರಾವರಿಗೆ ಕೇಂದ್ರ ರಾಜ್ಯ ಸರ್ಕಾರಗಳು ಆದ್ಯತಾ ವಲಯವೆಂದು ಪರಿಗಣಿಸಿ ನೀರಾವರಿಗೆ ಹೆಚ್ಚು ಹಣ ಒದಗಿಸಬೇಕೆಂದು ಒತ್ತಾಯಿಸಿ ಸಮ್ಮೇಳನ ನಿರ್ಣಯ ಅಂಗೀಕರಿಸುತ್ತದೆ.

ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವಾಗ ರೂ.ಸಾವಿರಾರು ಕೋಟಿ ಮೊತ್ತದ ಹತ್ತಾರು ಭ್ರಷ್ಟಾಚಾರದ ಹಗರಣಗಳು ಬೆಳಕಿಗೆ ಬಂದಿದ್ದು, ಅವುಗಳ ಕುರಿತು ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು, ಯೋಜನೆಗಳ ಖರ್ಚುವೆಚ್ಚಗಳಲ್ಲಿ ಹೆಚ್ಚಿನ ಪಾರದರ್ಶಕತೆ ಇರಬೇಕೆಂದು, ಸಿಪಿಐ(ಎಂ) ರಾಜ್ಯ ಸಮ್ಮೇಳನ ಸರಕಾರವನ್ನು ಒತ್ತಾಯಿಸುತ್ತದೆ.

ಮಂಡನೆ: ಮಾರುತಿಮಾನ್ಪಡೆ
ಅನುಮೋದನೆ: ಅಣ್ಣಾರಾಯ ಈಳಿಗೇರ

ರಾಜ್ಯದಲ್ಲಿ ಕಾರ್ಖಾನೆಗಳ ರೋಗಗ್ರಸ್ತತೆ ಮತ್ತು ಮುಚ್ಚುವಿಕೆಯ ಕುರಿತು

ಕರ್ನಾಟಕದಲ್ಲಿ ಹೊಸ ಆರ್ಥಿಕ ನೀತಿಯ ಜಾರಿಯಡಿಯಲ್ಲಿ ವಿದೇಶಿ ಬಂಡವಾಳಕ್ಕೆ ಕೈಗಾರಿಕಾ ವಲಯದಲ್ಲಿ ಮುಕ್ತ ಅವಕಾಶ ತೆರೆದಿಟ್ಟು, ಹೊಸ ಕೈಗಾರಿಕೆಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಕಾರ್ಖಾನೆಗಳ ರೋಗಗ್ರಸ್ತತೆ ಮತ್ತು ಮುಚ್ಚುವಿಕೆಯು ತೀವ್ರವಾಗಿ ಬೆಳೆಯುತ್ತಿದೆ. ರಾಜ್ಯದಲ್ಲಿ ಬೆಂಗಳೂರಿನ ನೆಲೆಯ ಹಲವು ಸಾರ್ವಜನಿಕ ಉದ್ಯಮಗಳಿದ್ದು, ಇವುಗಳು ದೇಶದಲ್ಲಿ ವಿಶಿಷ್ಟ ಸ್ಥಾನಗಳಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ನಿಲ್ಲುವ ಸಾಮರ್ಥ್ಯ ಹೊಂದಿವೆ, ಅವುಗಳಲ್ಲಿ ಹೆಚ್.ಎ.ಎಲ್, ಐ.ಟಿ.ಐ, ಹೆಚ್.ಎಂ.ಟಿ., ಬಿ.ಹೆಚ್.ಇ.ಎಲ್., ಬಿ.ಇ.ಎಂ.ಎಲ್., ಇತ್ಯಾದಿಗಳು ರಾಜ್ಯ ಸರಕಾರದ ಒಡೆತನದಲ್ಲಿ ಪ್ರಾರಂಭಿಕ ಹಂತದಲ್ಲಿ ರಾಜ್ಯದ ಕೈಗಾರಿಕೀಕರಣಗಳಿಗೆ ಕಾರಣವಾದ ಹಲವು ಉದ್ಯಮಗಳು, ಇದರ ಜೊತೆಗೆ ಖಾಸಗಿ ವಲಯದ ಉದ್ಯಮಗಳು ಕೆಲಸ ಮಾಡುತ್ತಲೇ ಬಂದಿವೆ.

ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳ ನೀತಿಗಳ ಫಲವಾಗಿ ಕರ್ನಾಟಕದ ಹಲವು ಕಾರ್ಖಾನೆಗಳು ರೋಗಗ್ರಸ್ತವಾಗಿವೆ ಮತ್ತು ಮುಚ್ಚಿಹೋಗಿವೆ. ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ರೋಗಗ್ರಸ್ತ ಉದ್ಯಮಗಳ ಕಾರ್ಮಿಕರ ಭವಿಷ್ಯ ಅನಿಶ್ಚಿತವಾಗಿ ಕಾರ್ಮಿಕರು ಆತಂಕದಿಂದ ಇದ್ದಾರೆ. ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಖಾನೆಗಳಲ್ಲಿ ಇದರ ತೀವ್ರತೆ ಎದ್ದು ಕಾಣುತ್ತಿದೆ. ಇವುಗಳಲ್ಲಿ 80 ಸಾವಿರ ಕಾರ್ಮಿಕರಿದ್ದದ್ದು ಈಗ 55 ಸಾವಿರಕ್ಕೆ ಇಳಿದಿದೆ. ಕೇಂದ್ರ ಸರಕಾರದ ಟೆಲಿಕಾಂ ನೀತಿಯಿಂದ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಸಿಕ್ಕಿದ ಪ್ರೋತ್ಸಾಹದಿಂದ ಐ.ಟಿ.ಐ ಸೊರಗಿದೆ. ಡಿಸ್ ಇನ್ವೆಸ್ಟ್‌ಮೆಂಟ್ ಕಮೀಷನ್ ಇದನ್ನು ಖಾಸಗೀಕರಿಸಲು ಸೂಚಿಸಿದೆ. ಬಿ.ಇ.ಎಲ್., ಬಿ.ಇ.ಎಂ.ಎಲ್., ಹೆಚ್.ಎ.ಎಲ್‌ಗಳು ರಕ್ಷಣಾ ಉತ್ಪಾದನಾ ಘಟಕಗಳಾದ್ದರಿಂದ ಖಾಸಗೀಕರಣದ ಪ್ರಕ್ರಿಯೆ ಆರಂಭಿಸಿಲ್ಲವಾದರೂ ಪೂರ್ಣ ಕೆಲಸ ನೀಡದ ಕಾರಣ ಸೊರಗುತ್ತಿವೆ, ಹೆಚ್.ಎಂ.ಟಿ ಮುಚ್ಚುವ ಸ್ಥಿತಿ ಇದೆ. ಸರಕಾರದ ನೀತಿಗಳಿಂದ ಬಿ.ಹೆಚ್.ಇ.ಎಲ್ ಹಾಗೂ ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಗಳು ತೊಂದರೆಗಳಿಗೆ ಒಳಗಾಗಿವೆ, ಕಾಗದದ ಮೇಲಿನ ಆಮದು ಸುಂಕ ತೆಗೆದು ಕಾಗದ ಆಮದಿಗೆ ಅವಕಾಶ ನೀಡಿರುವುದರಿಂದ ರಾಜ್ಯದ ಕಾಗದದ ಕಾರ್ಖಾನೆಗಳು ಕಷ್ಟದ ಸ್ಥಿತಿಯಲ್ಲಿವೆ. ಸರಕಾರ ಆಮದು ಸುಂಕವಿಲ್ಲದೆ 5 ಲಕ್ಷ ಟನ್ ಸಕ್ಕರೆ ಆಮದು ಮಾಡಿರುವುದರಿಂದ ದೇಶಿಯ ಸಕ್ಕರೆ ಕಾರ್ಖಾನೆಗಳು ಅದರಲ್ಲು ಸಹಕಾರಿ ಮತ್ತು ಸರಕಾರಿ ಒಡೆತನದ ಸಕ್ಕರೆ ಕಾರ್ಖಾನೆಗಳು ನಡೆಯದ ಸ್ಥಿತಿಯಿಂದ ಕಾರ್ಮಿಕರು, ರೈತರು ತೊಂದರೆಗೆ ಒಳಗಾಗಿದ್ದಾರೆ, ಸ್ಟೀಲ್, ಹತ್ತಿ ಗಿರಣಿ, ಸಿಮೆಂಟ್ ಕಾರ್ಖಾನೆಗಳು ಮುಚ್ಚಿದ್ದು, ಸಾವಿರಾರು ಸಣ್ಣ ಕೈಗಾರಿಕೆಗಳು ಮುಚ್ಚಿವೆ. ದುಬಾರಿಯಾಗಿ ಈ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಡುತ್ತಿವೆ. ಲಕ್ಷಾಂತರ ಕಾರ್ಮಿಕರು ಬೀದಿ ಪಾಲಾಗುತ್ತಿದ್ದಾರೆ.

ಕಾರ್ಖಾನೆಗಳ ರೋಗಗ್ರಸ್ತತೆ ಮತ್ತು ಮುಚ್ಚುವಿಕೆಗೆ ಕಾರಣವಾದ ನೀತಿಗಳನ್ನು ಕೋಲಾರದಲ್ಲಿ ದಿ. 31ರಿಂದ- ಡಿ.2 ರವರೆಗೆ ನಡೆದ 16ನೇ ಸಿಪಿಐ(ಎಂ) ರಾಜ್ಯ ಸಮ್ಮೇಳನವು ಖಂಡಿಸುತ್ತದೆ ಮತ್ತು ಈ ನೀತಿಗಳನ್ನು ಬದಲಿಸಿ ರೋಗಗ್ರಸ್ತ ಕಾರ್ಖಾನೆಗಳು ಸರಿಯಾಗಿ ಕೆಲಸ ನಿರ್ವಹಿಸುವಂತೆ ಹಾಗೂ ಮುಚ್ಚಿರುವ ಕಾರ್ಖಾನೆಗಳನ್ನು ಆರಂಭಿಸಿ ಅಲ್ಲಿ ಕಾರ್ಮಿಕರ ಕೆಲಸ ಭದ್ರತೆ ಒದಗಿಸಬೇಕೆಂದು ಒತ್ತಾಯಿಸುತ್ತದೆ.

ಚೆ, ಭಾಸ್ಕರ್ ಕುಂಬ್ಳೆ ಇತಿಹಾಸ

ಸಮ್ಮೇಳನದ ಸಭಾಂಗಣದಲ್ಲಿ ಪುಸ್ತಕಗಳ ಮಾರಾಟದ ಮಧ್ಯೆ ಎದ್ದು ಕಂಡದ್ದು ಚೆಗೆವಾರ. ಚೆಗೆವಾರನ ಬಗ್ಗೆ ವಿಶ್ವದ ಎಲ್ಲಾ ದೇಶಗಳ ಕಲಾವಿದರು ಏರ್ಪಡಿಸಿದ್ದ ಕಲಾ ಪ್ರದರ್ಶನವನ್ನು ಕ್ಯೂಬಾಗೆ ಭೇಟಿಕೊಟ್ಟಾಗ ಎಸ್.ವೈ.ಗುರುಶಾಂತ್ ಕ್ಲಿಕ್ಕಿಸಿದ್ದರು. ಆ ಫೋಟೋಗಳನ್ನೇ ಅಂದವಾಗಿ ಮುದ್ರಿಸಿ ಚೆಗೆವಾರರ ಅತ್ಯಂತ ಜನಪ್ರಿಯ ಮಾತು 'ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ಅನ್ಯಾಯ, ಶೋಷಣೆ ವಿರುದ್ಧ ಸಿಡಿದು ನಿಂತರೆ ನೀನು ನನ್ನ ಸಂಗಾತಿ' ಯನ್ನು ಅದರ ಮೇಲೆ ಮುದ್ರಿಸಿ ಮಾರಾಟಕ್ಕಿಡಲಾಗಿತ್ತು.

ಡಿವೈಎಫ್‌ಐ ಬೆಂಗಳೂರು ಘಟಕ ಸಹ ಚೆ ಚಿತ್ರ, ಸಹ ಇದ್ದ ಕಾರ್ಡ್ ಕ್ಯಾಲೆಂಡರ್ ಮುದ್ರಿಸಿದ್ದರು. ಡಿವೈಎಫ್‌ಐ ಗೆ ಮುಖ್ಯವಾದ ದಿನಗಳನ್ನು ಅದರಲ್ಲಿ ಗುರುತಿಸಲಾಗಿದೆ.

ದಕ್ಷಿಣ ಕನ್ನಡದ ಸಂಗಾತಿಗಳು ಇತ್ತೀಚೆಗೆ ಕೋಮುವಾದಿಗಳಿಂದ ಹತರಾದ ಪಕ್ಷದ ಸಂಗಾತಿ ಭಾಸ್ಕರ ಕುಂಬ್ಳೆ ಲಾಲ್‌ಸಲಾಮ್ ಕ್ಯಾಲೆಂಡರ್ ಕಾರ್ಡ್ ಮುದ್ರಿಸಿದ್ದಾರೆ.

ಹೆಚ್ಚು ವಿಕೃತಗೊಳಿಸಿದ ಚರಿತ್ರೆಯ ಪಠ್ಯಪುಸ್ತಕಗಳನ್ನು ಭೋಧಿಸುತ್ತಿರುವವರೆಗೂ ಕೋಮು ಸಾಮರಸ್ಯವನ್ನು ನೆಲೆಗೊಳಿಸಲು ಸಾಧ್ಯವಿಲ್ಲ ಎಂಬ ಗಾಂಧಿಯ ಹೇಳಿಕೆ ಮುದ್ರಿಸಿದ ಕಾರ್ಡ್ ಅಂತೂ ಸಮ್ಮೇಳನದಲ್ಲಿ ಎಲ್ಲರ ಗಮನ ಸೆಳೆಯಿತು

ರಾಜ್ಯದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಕುರಿತು

ಉದ್ದಿಮೆಗಳ ಉದಾರೀಕರಣ, ಖಾಸಗೀಕರಣ ತೀವ್ರವಾಗಿ ಜಾರಿಯಾಗುತ್ತಿರುವ ಫಲವಾಗಿ ನಿರುದ್ಯೋಗ ಗಣನೀಯವಾಗಿ ಹೆಚ್ಚುತ್ತಿರುವ ಬಗ್ಗೆ ತೀವ್ರ ಆತಂಕವನ್ನು ಸಿಪಿಐ(ಎಂ) 16ನೇ ರಾಜ್ಯ ಸಮ್ಮೇಳನವು ವ್ಯಕ್ತಪಡಿಸುತ್ತದೆ. ದೇಶದಲ್ಲಿ ಒಟ್ಟು 15 ಕೋಟಿಯಷ್ಟು ನಿರುದ್ಯೋಗಿಗಳಿದ್ದಾರೆ.

ಉದ್ಯೋಗದ ಅವಕಾಶಗಳನ್ನು ತೀವ್ರವಾಗಿ ಕುಗ್ಗಿಸುವ ಗ್ರಾಮಾಂತರ ನಿರುದ್ಯೋಗವನ್ನು ಹೆಚ್ಚಿಸುವ ದಿಸೆಯಲ್ಲಿ ಆಧುನೀಕರಣ ಹಾಗೂ ಹೊಸ ಕೈಗಾರಿಕೆಗಳು ಮುಕ್ತ ಅವಕಾಶ ಕಲ್ಪಿಸಿರುವುದು ದೇಶಿಯ ಹಾಗೂ ಸಾರ್ವಜನಿಕ ಉದ್ದಿಮೆಗಳ ಮುಖ್ಯ ಉದ್ಯೋಗಿಗಳನ್ನು ನಿರ್ದಯವಾಗಿ ಹೊರ ನೂಕಲಾಗುತ್ತಿದೆ. ಐಟಿಐ, ಎಚ್‌ಎಎಲ್, ಬಿಹೆಚ್‌ಇಎಲ್, ಬಿಇಎಲ್‌ನಂತಹ ಬಹುಮುಖ ಕಾಣಿಕೆ ನೀಡುತ್ತಿರುವ ಕೈಗಾರಿಕೆಗಳು ಇದಕ್ಕೆ ಬಲಿಪಶುಗಳಾಗಿವೆ. ಈ ಪ್ರಕ್ರಿಯೆಯನ್ನು ಕೂಡಲೇ ತಡೆದು ಸ್ವಾವಲಂಬನೆಯ ಅಡಿಪಾಯವಾಗಿರುವ ಈ ಉದ್ದಿಮೆಗಳನ್ನು ಕಾಪಾಡಬೇಕೆಂದು ಸಮ್ಮೇಳನ ಆಗ್ರಹಿಸುತ್ತದೆ.

ಕೈಗಾರಿಕಾ ಬಂಡವಾಳ ತೊಡಗಿಸುವಿಕೆ ಕಮ್ಮಿ ಅಲ್ಲದೇ ಕೈಗಾರಿಕೆ ಆರಂಭಗೊಂಡಿರುವಲ್ಲಿ ನಿರೀಕ್ಷಿತ ಉದ್ಯೋಗ ನೀಡುತ್ತಿರುವುದು ಸಹ ತೀರಾ ಕಡಿಮೆಯಾಗಿದ್ದು ಇದು ಉದ್ಯೋಗ ರಹಿತ ಬೆಳವಣಿಗೆಯ ಕ್ರೂರ ಅಧ್ಯಾಯವನ್ನು ತೆರೆದಿದೆ. ಕೃಷಿ ಯೋಗ್ಯ ಭೂಮಿಯನ್ನು ಕೈಗಾರಿಕೆಗಳಿಗೆ ಬಳಸುವುದೂ ರೈತರನ್ನು ನಿರ್ಗತಿಕರನ್ನಾಗಿಸಿ ಈಗಾಗಲೇ ಹೆಚ್ಚುತ್ತಿರುವ ಗ್ರಾಮಾಂತರ ದಿವಾಳಿತನದ ಪ್ರಕ್ರಿಯೆಗೆ ಚಾಲನೆ ನೀಡಿ ಗ್ರಾಮಾಂತರ ನಿರುದ್ಯೋಗ ಹೆಚ್ಚಿಸಿದೆ. ಈಗಷ್ಟೆ ಹೊಸದಾಗಿ ಸ್ಥಾಪಿತಗೊಳ್ಳುತ್ತಿರುವ ಉದ್ದಿಮೆಗಳನ್ನು ರಾಜ್ಯದ ವಿವಿಧ ಕಡೆ ಹಿಂದುಳಿದ ಪ್ರದೇಶಗಳಲ್ಲಿ ಆರಂಭಿಸಬೇಕು, ಪುನರ್ವಸತಿ ಸೂಕ್ತವಾಗಿ ಕಲ್ಪಿಸಿ ಭೂಮಿ ಕೊಟ್ಟ ಕುಟುಂಬಕ್ಕೆ ಉದ್ಯೋಗ ನೀಡಬೇಕು ಎಂದು ಸಮ್ಮೇಳನ ಒತ್ತಾಯಿಸುತ್ತದೆ.

ರಾಜ್ಯ ಸರ್ಕಾರದಲ್ಲಿ ಸುಮಾರು 95043 ಹುದ್ದೆಗಳು ವಿವಿಧ ಇಲಾಖೆಗಳಲ್ಲಿ ಖಾಲಿ ಇವೆ. ಕೇಂದ್ರ ಸರ್ಕಾರದಲ್ಲಿಯೂ ಸಾವಿರಾರು ಹುದ್ದೆಗಳು ಖಾಲಿ ಇವೆ. 1985 ರಿಂದಲೇ ಹೇರಿರುವ ನೇಮಕಾತಿ ಮೇಲೆ ಅಘೋಷಿತ ನಿರ್ಬಂಧವನ್ನು ತೆಗೆದು, ಇಲಾಖೆಗಳನ್ನು ನಿರ್ನಾಮ ಮಾಡುವ ಕೆಲಸ ನಿಲ್ಲಿಸಿ, ಕೂಡಲೇ ನೇಮಕಾತಿ ಮಾಡಿಕೊಳ್ಳಬೇಕೆಂದು ಸಮ್ಮೇಳನವು ಆಗ್ರಹಿಸುತ್ತದೆ.

ನಿರುದ್ಯೋಗ ನಿವಾರಣೆಗೆಂದು ಸರ್ಕಾರಗಳು ಘೋಷಿಸಿರುವ ಯೋಜನೆಗಳು ಅಗತ್ಯವಿರುವಷ್ಟು ಯುವಜನರಿಗೆ ಸೂಕ್ತ ಸಹಾಯ ನೀಡುವಲ್ಲಿ ವಿಫಲವಾಗಿ ಘೋಷಣೆಗಳ ಮಟ್ಟದಲ್ಲಿ ಉಳಿದಿರುವುದನ್ನು ಸಮ್ಮೇಳನ ಖಂಡಿಸುತ್ತದೆ. ಇದಕ್ಕಾಗಿ ಹೆಚ್ಚಿನ ಹಣದ ನೆರವು ನೀಡುವುದು ಸಾಲ ನೀಡಿಕೆಯಲ್ಲಿನ ಅಡ್ಡಿಗಳನ್ನು ನಿವಾರಿಸಬೇಕು. ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ನೆರವು ನೀಡಬೇಕು.


ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೊಂದಾಯಿತ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡಬೇಕು, ಅರ್ಜಿ ಶುಲ್ಕಗಳನ್ನು ರದ್ದು ಪಡಿಸಬೇಕು, ಭ್ರಷ್ಟಾಚಾರ ತಡೆಯಬೇಕು ಎಂದು ಸಮ್ಮೇಳನ ಆಗ್ರಹಿಸುತ್ತದೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಉದ್ಯೋಗ ವಿನಿಮಯ ಕೇಂದ್ರ ಆರಂಭಿಸಲು ಸೂಚಿಸಿದೆ. ಹೀಗೆ ಹೆಚ್ಚುತ್ತಿರುವ ನಿರುದ್ಯೋಗದಿಂದಾಗಿ ಹತಾಶೆಗೊಂಡಿರುವ ಯುವಜನರು ಹಿಂಸಾಚಾರ, ಕಳ್ಳತನ, ಮೋಸಗಾರಿಕೆಯಂತಹ ಸಾಮಾಜಿಕ ಅಪರಾಧಗಳಲ್ಲಿ ಹೆಚ್ಚಾಗಿ ತೊಡಗುತ್ತಿದ್ದಾರೆ. ಮಾತ್ರವಲ್ಲ ಕೋಮುವಾದಿ, ಜಾತೀವಾದಿ ಹಾಗೂ ಅಂಧಶ್ರದ್ಧೆ, ಪ್ರತ್ಯೇಕತಾವಾದಿ ಶಕ್ತಿಗಳ ಆಟಗಳಿಗೆ ಧಾಳಿಯಾಗುತ್ತಿದ್ದಾರೆಂದು ಸಮ್ಮೇಳನವು ಆತಂಕದಿಂದ ಗಮನಿಸಿದೆ.

ನಿರುದ್ಯೋಗ ಸಮಸ್ಯೆಯ ಎಲ್ಲ ಪರಿಣಾಮಗಳ ವಿರುದ್ಧ, ಹಾಗೂ ಉದ್ಯೋಗ ಮೂಲಭೂತ ಹಕ್ಕಾಗಲು ಪ್ರಬಲ ಆಂದೋಲನವನ್ನು ನಡೆಸುವುದು ಅತ್ಯಗತ್ಯ ಎಂದು ಸಮ್ಮೇಳನ ಕರೆ ಕೊಡುತ್ತದೆ. ದುಡಿಯುವ ವರ್ಗದ ಭಾಗವೇ ಆಗಿರುವ ನಿರುದ್ಯೋಗಿಗಳ ಹಿತಗಳಿಗಾಗಿ ಎಲ್ಲಾ ವಿಭಾಗಗಳೂ ಕೈಜೋಡಿಸಿ ಹೋರಾಡಲು ಸಮ್ಮೇಳನವು ನಿರ್ಣಯಿಸುತ್ತದೆ.

ಸಮ್ಮೇಳನದ ಮೆರಗು ಹೆಚ್ಚಿಸಿದ ಕ್ಯೂಬಾ ದಿನಾಚರಣೆ

ಜನವರಿ ೧, ೧೯೫೯ರ ಪುಟ್ಟ ದ್ವೀಪ ಕ್ಯೂಬಾದ ವೀರ ಜನತೆ ತಮ್ಮ ಕ್ರಾಂತಿಯ ೩೯ನೇ ವಾರ್ಷಿಕೋತ್ಸವವನ್ನು ಅಥವಾ ೪೦ನೇ ಕ್ರಾಂತಿದಿನವನ್ನು ಆಚರಿಸುತ್ತಿದ್ದಾಗ ಸಾವಿರಾರು ಮೈಲುಗಳ ದೂರದ ಕೋಲಾರದಲ್ಲಿ ಸಿಪಿಐ(ಎಂ) ಹದಿನಾರನೇ ಕರ್ನಾಟಕ ರಾಜ್ಯ ಸಮ್ಮೇಳನಕ್ಕೆ ಸೇರಿದ್ದ ಪ್ರತಿನಿಧಿಗಳು ಈ ಆಚರಣೆಯಲ್ಲಿ ಅತ್ಯಂತ ಭಾವಾವೇಶದಿಂದ ಪಾಲ್ಗೊಂಡರು - ಇತ್ತೀಚೆಗೆ ಹವಾನಾದಲ್ಲಿ ನಡೆದ ವಿಶ್ವ ಯುವಜನ ಸಮ್ಮೇಳನದಲ್ಲಿ ಭಾಗವಹಿಸಿದ್ದ ಭಾರತದ ಮೂವರು ಪ್ರತಿನಿಧಿಗಳು ಅನುಭವ ಕಥನ ಸಮ್ಮೇಳನದ ಪ್ರತಿನಿಧಿಗಳನ್ನು ಕ್ಯೂಬಾಕ್ಕೇ ಕರೆದೊಯ್ದಿತು.

ಕ್ಯೂಬಾ ಎದೆಗಾರಿಕೆ, ಛಲ ಹಾಗೂ ಸಮಾಜವಾದಕ್ಕೆ ಬದ್ಧತೆಯ ಪ್ರತೀಕ ಎಂದರು ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಕೆ.ಪ್ರಕಾಶ್. ಕ್ಯೂಬಾದ ಭೇಟಿಯೊಂದಿಗೆ ಮಾಸ್ಕೋ, ಲಂಡನ್‌ಗೂ ಭೇಟಿ ನೀಡಿದ್ದ ಅವರಿಗೆ ಕ್ಯೂಬಾದ ಹಿರಿಮೆ ನಿಚ್ಚಳವಾಗಿ ಕಂಡಿತ್ತು. ಅದರಲ್ಲೂ ಮುಖ್ಯವಾಗಿ ಅಲ್ಲಿಯ ಶಿಕ್ಷಣ ಪದ್ಧತಿಯ ಹಿರಿಮೆ. ಅತ್ಯಂತ ಕಷ್ಟದ ಸ್ಥಿತಿಯಲ್ಲಿರುವಾಗಲೂ ಶಿಕ್ಷಣದ ಖರ್ಚನ್ನು ಕಡಿಮೆ ಮಾಡದ, ಭಾರತದಂತೆ ಶಿಕ್ಷಣದ ಖಾಸಗೀಕರಣದ ವಿಚಾರವನ್ನು ಮಾಡದ ಕ್ಯೂಬಾದ ಯಶಸ್ಸಿನ ಒಂದು ಗುಟ್ಟು "ಶಿಕ್ಷಣ ಈ ಸಮಾಜದ ಮೂಲಭೂತ ಅಂಶ" ಎನ್ನುವ ಕ್ಯಾಸ್ಟ್ರೋರವರ ಮಾತಿನಲ್ಲೇ ಅಡಗಿದಂತಿದೆ. ಶಿಕ್ಷಣಕ್ಕೆ ೨೫% ಖರ್ಚು ಮಾಡುವ ಕ್ಯೂಬಾದಲ್ಲಿ ಪ್ರತಿ ೩೭ ಜನಕ್ಕೆ ಒಬ್ಬ, ಪ್ರತಿ ೧೪ ವಿದ್ಯಾರ್ಥಿಗಳಿಗೆ ಒಬ್ಬ ಅಧ್ಯಾಪಕರಿದ್ದಾರೆ ಎಂದ ಪ್ರಕಾಶ್ ಅಲ್ಲಿಯ ಶಿಕ್ಷಣ ಪದ್ಧತಿಯ ಉತ್ತಮ ಅಂಶಗಳನ್ನು ವಿವರಿಸಿದರು.



ಯುವಜನ ಸಮ್ಮೇಳನದಲ್ಲಿ ಭಾಗವಹಿಸಿದ ಇನ್ನೊಬ್ಬ ಪ್ರತಿನಿಧಿ ರಾಜ್ಯ ಡಿವೈಎಫ್‌ಐ ಕಾರ್ಯದರ್ಶಿ ಎಸ್.ವೈ.ಗುರುಶಾಂತ್‌ರವರ 'ನಮಗೆ ಕ್ಯೂಬಾ ದೂರದ ದೇಶ ಅಲ್ಲವೇ ಅಲ್ಲ' ಎಂಬ ಮಾತು ಅವರ ಭಾಷಣ ಕೇಳುತ್ತಿದ್ದಾಗಲೇ ನಿಜ ಅನಿಸಿತು.

ಸಾವಿರಾರು ಕಷ್ಟಗಳ ನಡುವೆಯೂ ಈ ಸಮ್ಮೇಳನ ನಡೆಸಲು ಕ್ಯೂಬಾ ಮುಂದೆ ಬಂದದ್ದು ಇದು ಕ್ಯೂಬಾದ ಜನತೆಯ ಉತ್ಸವವಾಗಿಬಿಟ್ಟಿದ್ದು ೧೧೦೦೦ ಮನೆಗಳಲ್ಲಿ ಸಮ್ಮೇಳನದ ಪ್ರತಿನಿಧಿಗಳಿಗೆ ಆತಿಥ್ಯ ಇವನ್ನೆಲ್ಲಾ ವಿವರಿಸಿದ, ಜತೆಗೆ ಕ್ಯೂಬಾದ ವಿಶಿಷ್ಟತೆಯಾದ ಕ್ರಾಂತಿರಕ್ಷಣಾ ಸಮಿತಿ ಅಥವಾ ಸಿ.ಡಿ.ಆರ್.ಗಳ ಬಗ್ಗೆ ವಿವರಿಸಿದ ಗುರುಶಾಂತ್ 'ಕಿಚ್ಚಿನ ಕಾವು ಹೊತ್ತಿಸಿಕೊಂಡು ಬಂದಿದ್ದೇವೆ" ಎಂದರು.

'ಪುಟ್ಟ ದ್ವೀಪದ ದೊಡ್ಡ ಸಾಹಸ' ವನ್ನು ಮನನಾಟುವಂತೆ ವಿವರಿಸಿದ ಪತ್ರಕರ್ತ ಮೋಹನ್‌ರವರ ಅನುಭವ ಕಥನ ಮುಗಿಯುವ ವೇಳೆಗೆ 'ಹೋರಾಟದ ಕಿಚ್ಚು ಹಚ್ಚಿದ ಕ್ಯೂಬಾ ನಮ್ಮೊಳಗಿನ ಹಾಡು' ಎಂಬ ಅವರ ಕಾವ್ಯಮಯ ಉದ್ಗಾರ ನೂರಕ್ಕೆ ನೂರು ಸತ್ಯ ಎಂದು ಸಮಾರಂಭದಲ್ಲಿ ಭಾಗವಹಿಸಿದ ರಾಜ್ಯ ಸಮ್ಮೇಳನದ ಎಲ್ಲಾ ಪ್ರತಿನಿಧಿಗಳು ಹಾಗೂ ವೀಕ್ಷಕರು ತಲೆದೂಗುವಂತಾಯಿತು.

'ಐಕ್ಯರಂಗ' ಪ್ರಚಾರ ಹೆಚ್ಚಿಸಿ

"ನಮ್ಮ ಪಕ್ಷದ ಮುಂದಿನ ವಿಸ್ತರಣೆ ಸೈದ್ಧಾಂತಿಕ ಹೋರಾಟಗಳಲ್ಲಿನಾವು ಸಾಧಿಸಬಹುದಾದ ಗೆಲುವಿನ ಮೇಲೆ ಅವಲಂಬಿಸಿದೆ. ಇದಕ್ಕೆ ಪಕ್ಷದ ಸದಸ್ಯರ ರಾಜಕೀಯ ಸಂಘಟನಾತ್ಮಕ ಪ್ರಜೆಯನ್ನು ವಿಸ್ತರಿಸಬೇಕು. ಕೇಂದ್ರ ಮತ್ತು ರಾಜ್ಯಗಳಲ್ಲಿ ಹೆಚ್ಚು ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸಬೇಕು, ನಮ್ಮ ಪತ್ರಿಕೆಗಳನ್ನು ದೈನಿಕಗಳನ್ನು ಉತ್ತಮಪಡಿಸಬೇಕು, ಹೊಸ ಪತ್ರಿಕೆಗಳನ್ನು, ದೈನಿಕಗಳನ್ನು ಆರಂಭಿಸಬೇಕು....... ಹೆಚ್ಚೆಚ್ಚು ರಾಜಕೀಯ ಸೈದ್ಧಾಂತಿಕ ಪ್ರಚಾರ ಇತ್ಯಾದಿ ನಡೆಸಬೇಕು..." ಎಂದು ಸಿಪಿಐ(ಎಂ) ನ ಕಳೆದ ಮಹಾಧೀವೇಶನ, ಚಂಡೀಗಢದಲ್ಲಿನಡೆದ 15ನೇ ಮಹಾಧೀವೇಶನ ಕರೆ ನೀಡಿತ್ತು. ನಮ್ಮ ಗುಲ್ಬರ್ಗಾ ಸಮ್ಮೇಳನ ಕೂಡಾ " ಐಕ್ಯರಂಗ"ದ ಕೆಲವು ನ್ಯೂನ್ಯತೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಪಕ್ಷದ ಚಳುವಳಿಗಳನ್ನು ರಾಜ್ಯದಲ್ಲಿ ಬೆಳೆಸುವ ಸಾಧನವಾಗಿ ಅದನ್ನು ಬೆಳೆಸುವಂತಾಗಬೇಕು ಎಂದಿತ್ತು.

ಆ ನಂತರ ಈ ದಿಕ್ಕಿನಲ್ಲಿ ಕೆಲವು ಹೆಜ್ಜೆಗಳನ್ನು ಇಡಲಾಗಿದೆ. ರಾಜ್ಯಮಟ್ಟದ ಐಕ್ಯರಂಗ ಬಳಗದ ಸಭೆ ಏರ್ಪಟ್ಟಿದೆ. ವರದಿಗಾರಿಕೆ ಕಾರ್ಯಾಗಾರವೊಂದು ನಡೆದಿದೆ. ಇದರಿಂದ ವರದಿಗಳ ಗುಣಮಟ್ಟ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚುವಂತಾಗಿದೆ. ಅಲ್ಲದೆ ರಾಜ್ಯದ ಕೆಲವೆಡೆ 'ಐಕ್ಯರಂಗ'ದ ಗುಣಮಟ್ಟ ಪ್ರಸಾರ ಹೆಚ್ಚಿಸುವಲ್ಲಿ ಕೆಲವು ಬಿಡಿ-ಬಿಡಿಯಾದ ಪ್ರಯತ್ನಗಳು ನಡೆದಿವೆ. ನಡೆಯುತ್ತಿವೆ.

- ಮಂಗಳೂರಿನಲ್ಲಿ "ನಿರಂತರ" ಎಂಬ ನಮ್ಮ ಸಂಗಾತಿಗಳು ರಚಿಸಿಕೊಂಡ ಗುಂಪು ಅಲ್ಲಿ ಆರಂಭಿಸಿರುವ ಗೋಡೆಪತ್ರಿಕೆ ಜನಪ್ರಿಯವಾಗಿದೆಯಲ್ಲದೆ 'ಐಕ್ಯರಂಗ'ಕ್ಕೆ ಉತ್ತಮ ವರದಿಗಳನ್ನು ಕಳುಹಿಸಿದೆ.
- ಶಿರಸಿಯ ಬಸ್ ನಿಲ್ದಾಣದಲ್ಲಿ 'ಐಕ್ಯರಂಗ' ಮಾರಾಟದ ಪ್ರಯತ್ನ ಬಹಳ ಯಶಸ್ವಿಯಾಗಿ ಮುಂದುವರೆಯುತ್ತಿದೆ.
- ಮಳವಳ್ಳಿಯಲ್ಲಿ ನಮ್ಮ ಯುವ ಸಂಗಾತಿಗಳ ವಿಶೇಷ ಮುತುವರ್ಜಿಯಿಂದಾಗಿ ನಮ್ಮ ಪಕ್ಷದ ಪ್ರಭಾವದಲ್ಲಿರದ ಓದುಗರಿಗೂ ಪತ್ರಿಕೆಯನ್ನು ತಲುಪಿಸುವ ಪ್ರಯತ್ನ ಫಲಪ್ರದವಾಗಿದೆ.
- ಬೆಂಗಳೂರಿನಲ್ಲಿ ಜಿಲ್ಲಾ ಕಾರ್ಯದರ್ಶಿಗಳ ಮುತುವರ್ಜಿಯಿಂದ ವಿದ್ಯಾರ್ಥಿ ಸಂಗಾತಿಗಳು ಮತ್ತಿತರರು ನಡೆಸುತ್ತಿರುವ ಬಸ್ ನಿಲ್ದಾಣದಲ್ಲಿ ಪ್ರತೀವಾರ ಮಾರಾಟ ಪ್ರಯತ್ನಕ್ಕೆ ಉತ್ತಮ ಸ್ಪಂದನ ದೊರೆತಿದೆ.
- ಗುಲ್ಬರ್ಗಾದಲ್ಲೂ ಇಂತಹ ಪ್ರಯತ್ನಗಳನ್ನು ಜಿಲ್ಲಾ ಕಾರ್ಯದರ್ಶಿಗಳ ಮುತುವರ್ಜಿಯಿಂದ ಆರಂಭಿಸಲಾಗಿದೆ.
- ಕುಂದಾಪುರದಲ್ಲಿ ತಾಲೂಕು ಸಮಿತಿ ಪ್ರಸಾರ ಮತ್ತು ಬಿಲ್ ವಸೂಲಿಯ ಬಗ್ಗೆ ವಿಶೇಷ ಮುತುವರ್ಜಿ ವಹಿಸುತ್ತಿದೆ.
- ಉಡುಪಿಯಲ್ಲಿ ಎಲ್.ಐ.ಸಿ ಸಂಗಾತಿಗಳು "ಅಧ್ಯಯನ ವೃತ್ತ"ವನ್ನು ರಚಿಸಿಕೊಂಡು ಪತ್ರಿಕೆಯ ಪ್ರಸಾರ, ಗುಣಮಟ್ಟ ಹೆಚ್ಚಿಸುವ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

ಈ ಪ್ರಯತ್ನಗಳು ನಾವು ಯಾವ ದಿಕ್ಕಿನಲ್ಲಿ ಸಾಗಬೇಕಾಗಿದೆ ಎಂಬುದನ್ನು ಸೂಚಿಸುತ್ತವೆ.

ಇಂತಹ ಪ್ರಯತ್ನಗಳು ಕೆಲವೆಡೆ ಮಾತ್ರ ನಡೆಯುತ್ತಿರುವುದರಿಂದ ಕಳೆದ ಮೂರು ವರ್ಷಗಳಲ್ಲಿ 'ಐಕ್ಯರಂಗ' ದ ಗುಣಮಟ್ಟದಲ್ಲಾಗಲೀ, ನಿರ್ವಹಣೆಯಲ್ಲಾಗಲೀ, ಎಲ್ಲಕ್ಕೂ ಮಿಗಿಲಾಗಿ ಪ್ರಸಾರದಲ್ಲಾಗಲೀ ಆಗಬೇಕಾದಷ್ಟು ಸುಧಾರಣೆಗಳು ಕಂಡು ಬಂದಿಲ್ಲ. ನಮ್ಮ ಪ್ರಸಾರ ಸಂಖ್ಯೆ ಒಟ್ಟು ಸದಸ್ಯ ಸಂಖ್ಯೆಗಿಂತಲೂ ಎರಡು ಸಾವಿರದಷ್ಟು ಕಡಿಮೆ. ಸಾಮೂಹಿಕ ಸಂಘಟನೆಗಳ ಮೂಲಕ ನಮಗಿರುವ ಪ್ರಭಾವಕ್ಕೆ ಹೋಲಿಸಿದರೆ ಅತ್ಯಲ್ಪ. ನಮ್ಮ ಪ್ರಮುಖ ಸಂಗಾತಿಗಳು, ಮುಖ್ಯವಾಗಿ ಜಿಲ್ಲಾ ಸಮಿತಿಗಳು ಆಸಕ್ತಿ ವಹಿಸಿದರೆ ಈ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವಿದೆ ಎಂಬ ಮೇಲೆ ಹೇಳಿದ ಪ್ರಯತ್ನಗಳು ಸೂಚಿಸುತ್ತವೆ.

ಈ ದಿಕ್ಕಿನಲ್ಲಿನಮ್ಮ ಎಲ್ಲಾ ಜಿಲ್ಲಾ ಸಮಿತಿಗಳು ಈ ಕೆಳಗಿನ ಕ್ರಮಗಳನ್ನು ಕೈಗೆತ್ತಿಕೊಳ್ಳಬೇಕು.

- ಪ್ರಸಾರ ಮತ್ತು ಬಿಲ್ ವಸೂಲಿಯ ನಿರ್ದಿಷ್ಟ ಜವಾಬ್ದಾರಿನಿರ್ವಹಿಸಲು ಒಂದು ವ್ಯವಸ್ಥೆ.
- ಸಾಮೂಹಿಕ ಹೋರಾಟದ ಯೋಜನೆ
- ಇಬ್ಬರನ್ನು 'ಐಕ್ಯರಂಗ'ದ ಖಾಯಂ ವರದಿಗಾರರಾಗಿ ನೇಮಿಸುವುದು.
- ಜಿಲ್ಲೆಯ ಕೇಂದ್ರದಲ್ಲಿ ಮತ್ತು / ಅಥವಾ ಸಾಧ್ಯವಿರುವೆಡೆಗಳಲ್ಲಿ ಒಂದು ಕಡೆಯಾದರೂ "ಅಧ್ಯಯನ ವೃತ್ತ" ಅಥವಾ ಓದುಗರ ವೇದಿಕೆ ರಚಿಸಿ ಅವುಗಳ ಮೂಲಕ 'ಐಕ್ಯರಂಗ'ದ ವಿಮರ್ಶೆಯ ಜೊತೆಗೆ ರಾಜಕೀಯ ಬೆಳವಣಿಗೆಗಳ ಚರ್ಚೆ ನಡೆಯುವಂತೆ ಮಾಡುವುದು.

'ಐಕ್ಯರಂಗ'ದ ಕೇಂದ್ರದಲ್ಲಿ ದುಡಿಯುತ್ತಿರುವ ಕಾರ್ಯಕರ್ತರು ರಾಜ್ಯಸಮಿತಿಯ ನೆರವಿನಿಂದ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು.

- 'ಐಕ್ಯರಂಗ ಬಳಗ' ದ ಸಭೆ ಪ್ರತಿ ಆರು ತಿಂಗಳಿಗೊಮ್ಮೆ ನಡೆಸಬೇಕು.
- ಜಿಲ್ಲಾ ಸಮಿತಿಗಳು 'ಐಕ್ಯರಂಗ' ದ ಪ್ರಸಾರ, ಬಿಲ್ ವಸೂಲಿ ಮತ್ತು ವರದಿ ಕಳಿಸಲು ಮಾಡುವ ವ್ಯವಸ್ಥೆಯೊಂದಿಗೆ ಸಂಯೋಜನೆ.
- 'ಐಕ್ಯರಂಗ'ದ ನಿರ್ವಹಣೆಯಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಲು ವಿಶೇಷ ಗಮನ.

ಇದು ಯಾವವೂ ನಮ್ಮ ಸಾಮರ್ಥ್ಯಕ್ಕೆ ಮೀರಿದ ಸಂಗತಿಗಳಲ್ಲ. ಈಗಿನ ರಾಜಕೀಯ ಸನ್ನಿವೇಶದಲ್ಲಿ ದೇಶಾದ್ಯಂತ ಸಿಪಿಐ(ಎಂ) ನ ಕಡೆಗೆ ಜನಗಳು ಹೆಚ್ಚೆಚ್ಚು ನೋಡುತ್ತಿರುವ ಸಂದರ್ಭದಲ್ಲಿ, ನಮ್ಮ ವರ್ಗಶತ್ರುಗಳಿಂದ ಸೈದ್ಧಾಂತಿಕ ಧಾಳಿಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಇದು ನಾವು ಮಾಡಲೇಬೇಕಾದ ಕೆಲಸ.

ಆದ್ದರಿಂದ ಇದು ನಮ್ಮ ತುರ್ತು ರಾಜಕೀಯ ಕರ್ತವ್ಯಗಳಲ್ಲಿ ಒಂದೆಂದು ಪರಿಗಣಿಸಿ ಇದನ್ನು ಜ್ಯಾರಿಗೊಳಿಸಬೇಕು ಎಂದು ಸಿಪಿಐ(ಎಂ) ನ 16ನೇ ಕರ್ನಾಟಕ ರಾಜ್ಯ ಸಮ್ಮೇಳನ ಕರೆ ನೀಡುತ್ತದೆ.

ಮಂಡನೆ: ಎನ್.ಕೆ.ವೇದರಾಜ
ಅನುಮೋದನೆ; ಸಿ.ಆರ್.ಶಾನ್‌ಭಾಗ್

೧೬ನೇ ರಾಜ್ಯ ಸಮ್ಮೇಳನದ ಪ್ರತಿನಿಧಿಗಳು

ಸಿಪಿಐ(ಎಂ) ನ ಹದಿನಾರನೇ ಕರ್ನಾಟಕ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದವರ ಒಟ್ಟು ಸಂಖ್ಯೆ 302. ಇವರಲ್ಲಿ 263 ಪ್ರತಿನಿಧಿಗಳು ಹಾಗೂ39 ವೀಕ್ಷಕರು. ಭಾಗವಹಿಸಿದ ಮಹಿಳೆಯರ ಸಂಖ್ಯೆ 26(ಇಬ್ಬರು ವೀಕ್ಷಕರೂ ಸೇರಿ). ದಕ್ಷಿಣ ಕನ್ನಡ ಜಿಲ್ಲೆಯೊಂದರಿಂದಲೇ 13 ಮಹಿಳಾ ಪ್ರತಿನಿಧಿಗಳು ಬಂದಿದ್ದರು. ಕೋಲಾರ, ಗುಲ್ಬರ್ಗ, ಬಿಜಾಪುರ, ಬೆಂಗಳೂರುಗಳಿಂದ ತಲಾ ಇಬ್ಬರು ಪ್ರತಿನಿಧಿಗಳು ಬಂದಿದ್ದರು. ಬೆಂಗಳೂರಿನಿಂದ ಒಬ್ಬ ಮಹಿಳಾ ವೀಕ್ಷಕರೂ ಬಂದಿದ್ದರು.

302 ಪ್ರತಿನಿಧಿ, ವೀಕ್ಷಕರಲ್ಲಿ 45 ವರ್ಷ ಮೀರದವರ ಸಂಖ್ಯೆ ಅರ್ಧಕ್ಕಿಂತಲೂ ಹೆಚ್ಚು. ದುಡಿಯುವ ವರ್ಗಗಳಿಂದ ಬಂದವರ ಸಂಖ್ಯೆ ಮೂರನೇ ಎರಡರಷ್ಟಕ್ಕಿಂತಲೂ ಹೆಚ್ಚು. ಅರ್ಧದಷ್ಟು ಪ್ರತಿನಿಧಿ ವೀಕ್ಷಕರು 1986 ರ ನಂತರ ಪಕ್ಷವನ್ನು ಸೇರಿದವರು. ಪೂರ್ಣಾವಧಿ ಕಾರ್ಯಕರ್ತರಾಗಿರುವ ಪ್ರತಿನಿಧಿ ವೀಕ್ಷಕರ ಸಂಖ್ಯೆ 117 ಎಂದರೆ ಮೂರನೇ ಒಂದಕ್ಕಿಂತಲೂ ಹೆಚ್ಚು.

ಹೋರಾಟಗಳಿಂದಾಗಿ 9 ಪ್ರತಿನಿಧಿಗಳು 6 ತಿಂಗಳಿಗೂ ಹೆಚ್ಚುಕಾಲ ಜೈಲುವಾಸ ಅನುಭವಿಸಿದವರು. ಪ್ರತಿನಿಧಿಗಳು ಆರು ತಿಂಗಳಿಗೂ ಹೆಚ್ಚುಕಾಲ ಭೂಗತ ಜೀವನ ನಡೆಸಿದವರು ಕಾಂ// ಎನ್.ಕೆ.ಉಪಾಧ್ಯಾಯರು ಅತೀ ದೀರ್ಘಕಾಲ ಜೈಲು ವಾಸ ಅನುಭವಿಸಿದವರು. (6 ವರ್ಷ 7 ತಿಂಗಳು) ಹಾಗೂ ಕಾಂ/ ಎಸ್.ಸೂರ್ಯನಾರಾಯಣ ರಾವ್ ಅತಿ ದೀರ್ಘಕಾಲ ಭೂಗತರಾಗಿದ್ದವರು (3 ವರ್ಷ).

ಸಮ್ಮೇಳನದ ಅರ್ಹತಾ ಪರಿಶೀಲನಾ ಸಮಿತಿಯ ವರದಿಯ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

ವಯೋಮಾನ	
18 ರಿಂದ 25 ವರ್ಷದೊಳಗಿನವರು	16
26 ರಿಂದ 35 "	106
36 ರಿಂದ 45 "	89
46 ರಿಂದ 55 "	51
56 ರಿಂದ 65 "	20
66 ಕ್ಕೂ ಹೆಚ್ಚಿನ ವಯಸ್ಸಿನವರು	16

ಅತ್ಯಂತ ಹಿರಿಯ ಸಂಗಾತಿ : ಕಾಂ. ಎನ್.ಕೆ. ಉಪಾಧ್ಯಾಯ 82 ವರ್ಷಗಳು.

ಅತ್ಯಂತ ಕಿರಿಯ ಸಂಗಾತಿ : ಕಾಂ. ವಿ.ಗೀತ 20 ವರ್ಷಗಳು, ಕೋಲಾರ ಜಿಲ್ಲೆ .

ವಿದ್ಯಾಭ್ಯಾಸ	
ಪ್ರೈಮರಿಯವರೆಗೆ (5ನೇ ಕ್ಲಾಸು)	56
ಎಲಿಮೆಂಟರಿಯವರೆಗೆ (8ನೇ ಕ್ಲಾಸು)	20
ಮೆಟ್ರಿಕ್ ನವರೆಗೆ (ಎಸ್‌ಎಸ್‌ಎಲ್‌ಸಿ)	64
ಇಂಟರ್ ಮೀಡಿಯೇಟ್/ಪಿಯುಸಿ/ ಡಿಪ್ಲೋಮಾ ಇತ್ಯಾದಿ	33
ಪದವೀಧರ	68
ಉನ್ನತ ಪದವೀಧರ	53
ಶಿಕ್ಷಣ ಪಡೆಯದವರು	7
ವರ್ಗಮೂಲ	
ಕಾರ್ಮಿಕ ವರ್ಗ	121
ಕೃಷಿ ಕೂಲಿಕಾರ	26
ಬಡರೈತ	41
ಮಧ್ಯಮರೈತ	51
ಶ್ರೀಮಂತ ರೈತ	2
ಭೂಮಾಲಿಕ	ಇಲ್ಲ
ಬಂಡವಾಳಶಾಹಿ	1
ಮಧ್ಯಮವರ್ಗ	51
ಪುಟ್ಟ ಬಂಡವಾಳಶಾಹಿ	1
ಆದಾಯ : (ಮಾಸಿಕ)	
ರೂ. 1000 ದ ವರೆಗೆ	116
ರೂ. 1001 - 2000	42
ರೂ. 2001 - 3000	29
ರೂ. 3001 -5000	23
ರೂ. 5000 ಕ್ಕೂ ಹೆಚ್ಚು	38
ಆದಾಯ ಇಲ್ಲದವರು	9
ಪಕ್ಷಕ್ಕೆ ಸೇರಿದ ವರ್ಷ	
1964 ರ ಮೊದಲು	31
1965 ರಿಂದ 1970	11
1971 ರಿಂದ 1977	36
1978 ರಿಂದ 1985	82
1986 ರಿಂದ 1990	66
1991 ರಿಂದ 1994	59
1995 ರ ನಂತರ	17

ಅತ್ಯಂತ ಹಿರಿಯ ಸದಸ್ಯರು: ಕಾಂ. ಎನ್.ಕೆ. ಉಪಾಧ್ಯಾಯ, 1942 ರಲ್ಲಿ ಸೇರಿದ್ದು ಮತ್ತು ಕಾಂ. ಪಿ.ಕೆ. ಸುಬ್ರಮಣಿ, ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯರು 1949 ರಲ್ಲಿ ಸೇರಿದ್ದು.

ಸಾಮೂಹಿಕ ಸಂಘಟನೆಯಲ್ಲಿ ಸ್ಥಾನ:	
ಅಖಿಲ ಭಾರತ ಪದಾಧಿಕಾರಿಗಳು	3
ರಾಜ್ಯಪದಾಧಿಕಾರಿಗಳು	44
ರಾಜ್ಯ ಸಮಿತಿ ಸದಸ್ಯರು	38
ಜಿಲ್ಲಾಪದಾಧಿಕಾರಿಗಳು	46
ಜಿಲ್ಲಾ ಸಮಿತಿ ಸದಸ್ಯರು	73
ಇತರೇ	52

ಯಾವುದೇ ಸ್ಥಾನ ಇಲ್ಲದವರು- 46

ಚುನಾಯಿತ ಸ್ಥಾನ	
ವಿಧಾನ ಸಭಾ ಸದಸ್ಯರು	1
ಪುರಸಭೆ/ ನಗರ ಸಭೆ ಸದಸ್ಯರು	2
ಪುರಸಭಾ ಸದಸ್ಯರು	3
ಜಿಲ್ಲಾ ಪಂಚಾಯತ್ ಸದಸ್ಯರು	3
ತಾಲ್ಲೂಕು ಪಂಚಾಯತ್ ಸದಸ್ಯರು	2
ಗ್ರಾಮ ಪಂಚಾಯತ್ ಸದಸ್ಯರು	16
ಪಂಚಾಯತ್ ಪ್ರಧಾನರು	5

ಗ್ರಾಮ ಪಂಚಾಯತ್ ಪ್ರಧಾನರು

ಬೀದರ್ - ರಾಮಪುರ - ಕಾಂ. ನಾರಾಯಣ ರಾಂಪುರೇ

ದ.ಕನ್ನಡ- ಪಾವೂರು - ಕಾಂ. ಬಿ. ಬಾಬು ಪೂಜಾರಿ.

ಉ. ಕನ್ನಡ- ಮಾವಿನ ಕುರ್ವೆ - ಕಾಂ. ತಿಲಕ್ ಜಟ್ಟಿಗೌಡ

ತುಮಕೂರು- ಹಗಲೂರು - ಕಾಂ. ಹೆಚ್. ಸಿ.ಚಿನ್ನಪ್ಪ

ಕೋಲಾರ - ಕುಂದಲಗುರ್ಕಿ - ಕಾಂ. ಕೆ.ಎಂ. ವೆಂಕಟೇಶ್

ಪಕ್ಷಕ್ಕೆ ಪ್ರವೇಶ	
ಕಾರ್ಮಿಕ ರಂಗದ ಮೂಲಕ	128
ಕಿಸಾನ್ ರಂಗ "	60
ಕಷಿ ಕೂಲಿಕಾರರ ರಂಗ "	10
ಯುವರಂಗ "	24
ವಿದ್ಯಾರ್ಥಿರಂಗ "	59
ಮಹಿಳಾ ರಂಗ "	2
ಸಾಂಸ್ಕೃತಿಕ ರಂಗ "	9
ಇತರೇ "	10
ಕೆಲಸ ಮಾಡುವ ರಂಗ:	
ಪಕ್ಷದ ಸಂಘಟನೆ	20
ಟ್ರೇಡ್ ಯೂನಿಯನ್	125
ರೈತ ಸಂಘ	64
ಕೃಷಿ ಕೂಲಿಕಾರರ ಸಂಘ	9
ಮಧ್ಯಮ ವರ್ಗ ನೌಕರ	5
ವಿದ್ಯಾರ್ಥಿ ಸಂಘಟನೆ	15
ಯುವ ಸಂಘಟನೆ	37
ಮಹಿಳಾ ಸಂಘಟನೆ	9
ಸಾಂಸ್ಕೃತಿಕ ಸಂಘಟನೆ	4
ಇತರೇ	14
ಸಮ್ಮೇಳನಗಳಲ್ಲಿ ಭಾಗವಹಿಸುವಿಕೆ	
ಪ್ರಥಮ ಬಾರಿಗೆ	111
ಎರಡನೆಯ ಸಮ್ಮೇಳನ	57
ಮೂರನೇಯ ಸಮ್ಮೇಳನ	48
ನಾಲ್ಕನೇಯ ಸಮ್ಮೇಳನ	22
ಐದನೇಯ ಸಮ್ಮೇಳನ	26
ಆರನೇಯ ಸಮ್ಮೇಳನ	11
ಏಳನೇಯ ಸಮ್ಮೇಳನ	4
ಎಂಟನೇಯ ಸಮ್ಮೇಳನ	4
ಒಂಭತ್ತನೇಯ ಸಮ್ಮೇಳನ	6
ಹತ್ತು ಮತ್ತು ಅದಕ್ಕಿಂತಲೂ ಹೆಚ್ಚು	13

ನಾಲ್ಕು ಜನ ಸಂಗಾತಿಗಳು ಎಲ್ಲಾ ಹದಿನಾರು ಸಮ್ಮೇಳನಗಳಲ್ಲೂ ಭಾಗವಹಿಸಿದ್ದಾರೆ.

1. ಕಾಂ. ಎನ್. ಕೆ. ಉಪಾಧ್ಯಾಯ
2. ಕಾಂ. ಎಂ.ಎಸ್. ಉಗ್ರಪ್ಪ
3. ಕಾಂ. ಟಿ.ಎಸ್.ಮಣಿ
4. ಕಾಂ.ಡಿ.ಎಂ. ಖಲಾಸಿ

'ಸಮೂಹ ಮಾಧ್ಯಮ' ಸರಕಾಗದಿರಲಿ

ಸಮೂಹ ಮಾಧ್ಯಮ ಎಂಬುದು ಬದಲಾವಣೆಯ ಪ್ರಮುಖ ಅಸ್ತ್ರ. ಜನ ಸಮೂಹದಲ್ಲಿ ಅಭಿಪ್ರಾಯಗಳನ್ನು ರೂಪಿಸುವ ಮುಖ್ಯ ಮಾಧ್ಯಮ. ಭಾರತ ಸರ್ಕಾರ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ ಕಾರಣ, ಜಾಗತೀಕರಣದ ಹೆಸರಿನಲ್ಲಿ ಭಾರತದ ಮಾರುಕಟ್ಟೆಯನ್ನು ಮುಕ್ತ ಗೊಳಿಸಿದ ಕಾರಣ ಸಮೂಹ ಮಾಧ್ಯಮ ಆತಂಕವನ್ನು ಎದುರಿಸುತ್ತಿದೆ.

ಯುನೆಸ್ಕೋ ನೇಮಿಸಿದ್ದ ಸೀನ್ ಮ್ಯಾಕ್ ಬ್ರೈಡ್ ಸಮಿತಿ ಹಿಂದುಳಿದ ರಾಷ್ಟ್ರಗಳಿಗೆ ಮಾಧ್ಯಮ ಎಂಬುದು ಬದಲಾವಣೆಯನ್ನು ತರುವ ಊರುಗೋಲು, ಮುಂದುವರಿದ ರಾಷ್ಟ್ರಗಳಿಗೆ ಕೇವಲ ಸರಕು ಎಂದು ಗುರುತಿಸಿತ್ತು. ಈಗ ಗ್ಯಾಟ್ ಒಪ್ಪಂದದ ಕಾರಣದಿಂದಾಗಿ ಬಹು ರಾಷ್ಟ್ರೀಯ ಮಾಧ್ಯಮ ಕಂಪನಿಗಳು ಭಾರತವನ್ನು ಪ್ರವೇಶಿಸುತ್ತಿವೆ. ದೇಶದ ಒಪ್ಪಿಗೆಯನ್ನೇ ಪಡೆಯದೆ ಸ್ಯಾಟಲೈಟ್ ಚಾನೆಲ್ ಗಳು ಭಾರತವನ್ನು ಪ್ರವೇಶಿಸಿವೆ. ಇದರಿಂದ ದೇಶವನ್ನು ಬದಲಾವಣೆಯತ್ತ ಕೊಂಡೊಯ್ಯಬೇಕಾದ ಸಾಧನವನ್ನು ಒಂದು ಸರಕಾಗುವ ಪ್ರಯತ್ನ ನಡೆಯುತ್ತಿದೆ.

ಗ್ಯಾಟ್ ಒಪ್ಪಂದ ಸಮೂಹ ಮಾಧ್ಯಮಕ್ಕೆ ಸಂಬಂಧಿಸಿದಂತೆ ಭಾರತದ ಹಲವು ಲೋಪಗಳನ್ನು ತೋರಿಸಿದೆ. ಭಾರತಕ್ಕೆ ತನ್ನದೇ ಆದ ಒಂದು ಮಾಧ್ಯಮ ನೀತಿ ಇಲ್ಲ. ಇರುವ ವಿವಿಧ ಮಾಧ್ಯಮ ಕಾಯಿದೆಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಧೂಳೀಪಟ ಮಾಡುತ್ತಿವೆ. ಮಾತ್ರವಲ್ಲ, ಮಾಧ್ಯಮ ಕಾಯಿದೆಗಳ ಬದಲು ಸರಕು ಕಾಯಿದೆಗಳ ಮೂಲಕ ಭಾರತದೊಳಕ್ಕೆ ನುಗ್ಗುತ್ತಿವೆ.

ಬಹುರಾಷ್ಟ್ರೀಯ ಮಾಧ್ಯಮ ಕಂಪನಿಗಳ ಪತ್ರಿಕೆಗಳು, ಚಾನಲ್‌ಗಳು, ಕಂಪ್ಯೂಟರ್ ಮಾಧ್ಯಮ ಹಿಂಸೆ ಮತ್ತು ಸೆಕ್ಸನ್ನು ಜನರ ಮುಂದಿಡುತ್ತಿವೆ. ಬಹುರಾಷ್ಟ್ರೀಯ ಜಾಹೀರಾತು ಜಾಲದ ಜೊತೆ ಕೈಗೂಡಿಸಿ ಸರಕು ಸಂಸ್ಕೃತಿಯನ್ನು ಬಿತ್ತುತ್ತಿದೆ.

ಇತರೆ ಉದ್ಯಮಗಳಲ್ಲಿಯೂ ಆಸಕ್ತಿ ಹೊಂದಿರುವ ಮಾಧ್ಯಮ ಸಂಸ್ಥೆಗಳು ಮಹಿಳೆಯರನ್ನು ಮತ್ತಷ್ಟು ಕೀಳು ದರ್ಜೆಗೆ ತಳ್ಳುತ್ತಿವೆ. ಮಾತ್ರವಲ್ಲ, ಬಹುರಾಷ್ಟ್ರೀಯ ಕಂಪನಿಗಳು ಭಾರತದ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುತ್ತಿವೆ. ಈ ಪ್ರವೃತ್ತಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚುವ ಪ್ರವೃತ್ತಿ ಇದೆ.

ಭಾರತದಲ್ಲಿ ಬಂಡವಾಳಶಾಹಿ ಪತ್ರಿಕೆಗಳು/ ತಾವಾಗಿಯೇ, ಅದರೊಂದಿಗೆ ವಿದೇಶಿ ಮಾಧ್ಯಮಗಳ ಭಯದಿಂದಾಗಿ ಅಥವಾ ವಿದೇಶಿ ಮಾಧ್ಯಮಗಳನ್ನು ಅನುಕರಿಸಿ ಭಾರತದಲ್ಲಿ ಈಗಾಗಲೇ ಹಲವು ಅನಾರೋಗ್ಯಕರ ಪ್ರವೃತ್ತಿಗಳನ್ನು ಮುಂದು ಮಾಡಿವೆ. ಬೆಲೆ ಇಳಿಕೆ ಸ್ಪರ್ಧೆ, ಹಿಂಸೆ ಮತ್ತು ಸೆಕ್ಸ್ ಬಳಕೆ, ಸರಕು ಸಂಸ್ಕೃತಿಯ ಉತ್ತೇಜನ, ಜನಪರವಾಗಿದ್ದ ಮಾಧ್ಯಮವನ್ನು ಅದರಿಂದ ವಿಮುಖಗೊಳಿಸಲು ಸರ್ವಪ್ರಯತ್ನವನ್ನು ನಡೆಸುತ್ತಿವೆ.

ಭಾರತದ ಪತ್ರಿಕೆಗಳು ಬಹುತೇಕ ಬಂಡವಾಳಶಾಹಿಗಳ ಕೈಯಲ್ಲಿರುವುದರಿಂದ ಈ ವರ್ಗ ಸರಣಿ ಪತ್ರಿಕೆಗಳನ್ನು ಹೊಂದಿರುವುದರಿಂದ ದುಡಿಯುವ ವರ್ಗದ ಪಕ್ಷದ ಬಗ್ಗೆ ಅಸಹನೆ, ಕೋಮುವಾದಕ್ಕೆಉತ್ತೇಜನ, ಬಂಡವಾಳಶಾಹಿ ಪಕ್ಷಗಳಿಗೆ ಪ್ರೋತ್ಸಾಹ ವನ್ನು ನೀಡುತ್ತಿವೆ. ರಾಷ್ಟ್ರಮಟ್ಟದ ಪತ್ರಿಕೆಗಳಿಂದ ಭಾಷಾ ಪತ್ರಿಕೆಗಳವರೆಗೆ ಈ ಪ್ರವೃತ್ತಿಯನ್ನು ಕಾಣಬಹುದು. (ಉದಾ: ಸಿಪಿಎಂ ಗೆ ತೀವ್ರ ವಿರೋಧ, ಪ್ರಳಯದ ಬಗ್ಗೆ ಪ್ರಚಾರ, ಗೃಹಶೋಭಾ ದಂತಹ ಪತ್ರಿಕೆಗಳು ಉಂಟು ಮಾಡುತ್ತಿರುವ ಸೆಕ್ಸ್ ಪ್ರವೃತ್ತಿ) ಕರ್ನಾಟಕದಲ್ಲಿ ಕೆಲವು ಪತ್ರಿಕೆಗಳು ಬಿ.ಜೆ.ಪಿ., ಲೋಕಶಕ್ತಿಗಳು ಮುಂತಾದ ನೆಲೆಯಿಲ್ಲದ ಪಕ್ಷಗಳ ತುತ್ತೂರಿಗಳಾಗುತ್ತಿದ್ದು, ಇವುಗಳು ವಾರ್ತಾಪತ್ರಗಳ ಗುಣಲಕ್ಷಣ ಗಳನ್ನು ಕಳೆದುಕೊಳ್ಳುತ್ತಿವೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಭಾರತ ಒಂದು ಸರಿಯಾದ ಮಾಧ್ಯಮ ನೀತಿಯನ್ನು ಹೊಂದಲು ಒತ್ತಾಯಿಸುತ್ತದೆ. ಮಾಧ್ಯಮಗಳಲ್ಲಿ ಬಹುರಾಷ್ಟ್ರೀಯ ಮಾಧ್ಯಮ ಕಂಪನಿಗಳಿಗೆ ಪ್ರವೇಶ ನೀಡುವುದನ್ನು ವಿರೋಧಿಸುತ್ತದೆ. ಸರ್ಕಾರಿ ಹಿಡಿತದಲ್ಲಿದ್ದ ಆಕಾಶವಾಣಿ ಹಾಗೂ ದೂರದರ್ಶನವನ್ನು ಮುಕ್ತಗೊಳಿಸುವ ನಿಟ್ಟಿನಲ್ಲಿ 'ಪ್ರಸಾರ ಭಾರತಿ' ಸ್ಥಾಪಿಸಿರುವುದನ್ನು ಸ್ವಾಗತಿಸುತ್ತದೆ. ಮೂಢನಂಬಿಕೆ ಬಿತ್ತುವ, ದುಡಿಯುವ ವರ್ಗದ ಹೋರಾಟವನ್ನು ಗೇಲಿ ಮಾಡುವ ಪ್ರವೃತ್ತಿಯನ್ನು ಬಲವಾಗಿ ಖಂಡಿಸುತ್ತದೆ.

ಮಂಡನೆ: ಜಿ.ಮೋಹನ್
ಅನುಮೋದನೆ: ಗುಂಡಣ್ಣ

'ಐಕ್ಯರಂಗ ಬೇಕೇ ಐಕ್ಯರಂಗ.......'

ಕೆಂಬಾವುಟಗಳ ನಗರವಾಗಿ ಹೋಗಿದ್ದ ಕೋಲಾರದಬಸ್ ಸ್ಟಾಂಡ್ ನಲ್ಲಿ ದಿಢೀರನೆ ಕೇಳಿ ಬಂದ ಧ್ವನಿ ಇದು. 'ಐಕ್ಯರಂಗ ಬೇಕೇ ಐಕ್ಯರಂಗ.......'

ಪುಸ್ತಕ ಮಾರಾಟ ಮಾಡುವುದು ಹೇಗೆ ಎಂಬುದರ ಬಗ್ಗೆ ಇಡೀ ರಾಜ್ಯಕ್ಕೆ ವಿನೂತನ ಪಾಠಕಲಿಸುತ್ತಿರುವ ಶಿರಸಿಯ 'ಚಿಂತನ-ಪುಸ್ತಕ ಮಳಿಗೆಯ ಸಿ.ಆರ್.ಶಾನ್ ಭಾಗ್ ದಿಢೀರನೆ ತಮ್ಮ ಸಂಗಾತಿಗಳೊಂದಿಗೆ ಕೋಲಾರದ ಬಸ್ ಸ್ಟಾಂಡ್‌ನಲ್ಲಿ ಕಾಣಿಸಿಕೊಂಡಿದ್ದರು.

ಕೈಯಲ್ಲಿ 'ಐಕ್ಯರಂಗ' ಹಿಡಿದು ಐಕ್ಯರಂಗ ಎಂದರೆ ಏನು ? ಯಾರದ್ದು ಏಕೆ ? ಈ ಪತ್ರಿಕೆಯನ್ನೇಕೆ ಕೊಳ್ಳಬೇಕು ?ಎಂದು ಶಾನ್‌ಭಾಗ್, ಐಕ್ಯರಂಗದ ಜಯರಾಂ ಮಂಡ್ಯದ ಚೆಲುವಯ್ಯ ಅವರು ಅರಳು ಹುರಿದಂತೆ ಮಾತನಾಡಿದ್ದೇ ತಡ ಕೇವಲ ಅರ್ಧಗಂಟೆಯಲ್ಲಿ ಬಸ್ ಸ್ಟಾಂಡ್ ನಲ್ಲಿ ಅಷ್ಟೇನೂ ಜನ ಕಾಣಿಸಿಕೊಳ್ಳದ ಬೆಳ್ಳಂಬೆಳಗ್ಗೆಯಲ್ಲಿ ೫೩ ಪ್ರತಿಗಳು ಖರ್ಚಾಗಿ ಹೋದವು. 'ಐಕ್ಯರಂಗ' ಕೊಳ್ಳುವುದಿಲ್ಲ ಎಂದು ಯಾರು ಹೇಳಿದರು ಎಂದು ಪ್ರಶ್ನಿಸುವಂತೆ ಮಾಡಿದರು. ಜನಕ್ಕೆ ಬೇಕಾದ್ದು ಜನರ ವಿಚಾರ. ಅದನ್ನು ಕೊಟ್ಟರೆ ಎಲ್ಲಾಪತ್ರಿಕೆಯೂ ಖರ್ಚಾಗ ಬೇಕು. ಅದನ್ನು ಸಂಗಾತಿಗಳು ತೋರಿಸಿ ಕೊಟ್ಟರು.





◀ 30.12.1997 ರಂದು ಕೋಲಾರದ ಬೀದಿಗಳಲ್ಲಿ ಜನಸಾಗರ

▲ ಮೆರವಣಿಗೆಯ ಪ್ರಮುಖ ಆಕರ್ಷಣೆಗಳಲ್ಲಿ ಒಂದು - ವಿಶ್ವ ಕಾರ್ಮಿಕರೇ ಒಂದಾಗಿ ಎಂದು ಕರೆನೀಡುವ ಸ್ತಬ್ಧಚಿತ್ರ

▼ ಮೆರವಣಿಗೆಯ ಮೆರುಗು ಹೆಚ್ಚಿಸಿದ ಕೋಲಾಟದ ತಂಡ



ಕಾಂ|| ಪಿ.ರಾಮಚಂದ್ರರಾವ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆ

ಕೋಲಾರದಲ್ಲಿ ನಡೆದ 16ನೇ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನ ಪಿ.ರಾಮಚಂದ್ರರಾವ್ ಅವರನ್ನು ಕಾರ್ಯ ದರ್ಶಿಯಾಗಿ ಪುನರಾಯ್ಕೆ ಮಾಡಿದೆ. ಈ ಸಮ್ಮೇಳನದಲ್ಲಿ ಆರಿಸಲ್ಪಟ್ಟ 11 ಸದಸ್ಯರುಳ್ಳಹೊಸ ಕಾರ್ಯದರ್ಶಿ ಮಂಡಳಿಯ ಇತರ ಸದಸ್ಯರ ಹೆಸರುಗಳು ಹೀಗಿವೆ

ಎಸ್.ಸೂರ್ಯನಾರಾಯಣ ರಾವ್, ಜಿ.ಎನ್.ನಾಗರಾಜ್, ಜಿ.ವಿ.ಶ್ರೀರಾಮ ರೆಡ್ಡಿ, ನಿತ್ಯಾನಂದ ಸ್ವಾಮಿ, ಕೆ.ಆರ್. ಶ್ರೀಯಾನ್, ಮಾರುತಿಮಾನ್ಪಡೆ, ಜಿ.ಸಿ. ಬಯ್ಯಾರೆಡ್ಡಿ, ಎಸ್.ವೈ.ಗುರುಶಾಂತ್, ಬಿ.ಮಾಧವ ಹಾಗೂ ವಿ.ಜೆ.ಕೆ. ನಾಯರ್. ನೂತನ ರಾಜ್ಯ ಸಮಿತಿಯ ಇತರ ಸದಸ್ಯರುಗಳ ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ.

ಸಿ.ನಂಜುಂಡಪ್ಪ, ಎನ್.ಕೆ.ಉಪಾಧ್ಯಾಯ, ಕೆ.ಶಂಕರ್, ಅಬ್ರಾಹಂ ಕರ್ಕಡ, ಟಿ.ಎಸ್.ನಾಯರ್, ಭೀಮಸಿ ಕಲಾದಗಿ, ಸಿ.ಆರ್.ಭಟ್, ವಿ.ಪಿ.ಕುಲಕರ್ಣಿ, ವಿ.ಸುಕುಮಾರ್, ಸಿ.ಎಸ್.ಬಾಳೆ, ಟಿ.ಎಸ್.ಮಣಿ, ಪ್ರಸನ್ನಕುಮಾರ್, ಯು.ಬಸವರಾಜ್, ಎನ್.ಕೆ.ವೇದರಾಜ್, ಪಿ.ಜಗನ್ನಾಥ್, ಆರ್.ಶ್ರೀನಿವಾಸ್, ಬಿ. ಲಿಂಗಪ್ಪ, ಕೆ.ವಿ.ಶ್ರೀನಿವಾಸ್, ವಿಮಲ ಕೆ.ಎಸ್, ನೀಲಾ.ಕೆ, ವರಲಕ್ಷ್ಮಿ, ಪ್ರಕಾಶ್.ಕೆ,ಬಾಲಕೃಷ್ಣಶೆಟ್ಟಿ (ಬೆಂಗಳೂರು), ಶಾಂತಾರಾಮ್ ನಾಯಕ್ ಮತ್ತು ರಾಮಚಂದ್ರ ಉಚ್ಚಿಲ್.

ಕಲ್ಕತ್ತೆಯಲ್ಲಿ ನಡೆಯಲಿರುವ ಸಿಪಿಐ (ಎಂ)ನ ಹದಿನಾರನೇ ಮಹಾಧಿವೇಶನಕ್ಕೆ ಕರ್ನಾಟಕದ ಪ್ರತಿನಿಧಿಗಳನ್ನು ರಾಜ್ಯ ಸಮ್ಮೇಳನ ಆರಿಸಿತು. ಅವರ ಹೆಸರುಗಳು ಹೀಗಿವೆ: ಜಿ.ವಿ.ಶ್ರೀರಾಮ ರೆಡ್ಡಿ, ಜಿ.ಎನ್.ನಾಗರಾಜ್, ಎಸ್.ಸೂರ್ಯನಾರಾಯಣ ರಾವ್, ಎಸ್.ವೈ.ಗುರುಶಾಂತ್, ಪ್ರಸನ್ನಕುಮಾರ್, ಪಿ.ಜಗನ್ನಾಥ, ಕೆ.ನೀಲಾ ಮತ್ತು ಬಿ.ಮಾಧವ

ಸವಾಲೆದುರಿಸಲು ಸಜ್ಜಾಗೋಣ..

ಪುಟ 1 ರಿಂದ

ಸರಕಾರಗಳು ಆಡಳಿತದಲ್ಲಿದ್ದು ಅದರಲ್ಲಿ ಸಿ.ಪಿ.ಐ.(ಎಂ) ಪ್ರಧಾನ ಪಾತ್ರ ವಹಿಸುತ್ತಿದೆ.

ಒಟ್ಟಾರೆಯಾಗಿ ಎಡ ಚಳುವಳಿ ಹೊಸ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ನಾವು ಈ ಹೊಸ ಶಕ್ತಿಯನ್ನು ಪ್ರತಿನಿಧಿಸುತ್ತಿದ್ದೇವೆ ಎಂದು ರಾಮಚಂದ್ರನ್ ಹೇಳಿದರು.

ಸಂಯುಕ್ತ ರಂಗದ ಮಹತ್ವ

ಕಳೆದ ಒಂದೂವರೆ-ಎರಡು ವರ್ಷಗಳಲ್ಲಿ ದೇಶದಲ್ಲಿ ದಾಖಲಾದ ಪ್ರಮುಖ ರಾಜಕೀಯ ವಿದ್ಯಮಾನಗಳನ್ನು ವಿಶ್ಲೇಷಿಸಿದ ಕಾಂ|| ಪಿ.ಆರ್.ಸಿ., ಕಾಂಗ್ರೆಸ್ ಮತ್ತು ಬಿ.ಜೆ.ಪಿ.- ಈ ಎರಡೂ ಪಕ್ಷಗಳ ವಿರುದ್ಧ ಸಂಯುಕ್ತ ರಂಗವನ್ನು ಸಂಘಟಿಸಲಾಗಿದೆ ಎಂದು ಹೇಳಿದರು. ಜೊತೆ ಜೊತೆಯಲ್ಲೇ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಹೋರಾಟ ರೂಪಿಸಲು ನಾವು ಯತ್ನಿಸಿದ್ದೇವೆ ಎಂದರು.

ಪತ್ರಿಕೆಗಳಲ್ಲಿ ಸಂಯುಕ್ತರಂಗದ ವಿರುದ್ಧ ವ್ಯಾಪಕ ಅಪಪ್ರಚಾರ ನಡೆಯುತ್ತಿರುವುದಾಗಿ ಹೇಳಿದ ರಾಮಚಂದ್ರನ್, ರಂಗ ಈಗ ಸೀತಾರಾವ್ ಕೇಸರಿಯವರನ್ನೇನೂ ಅವಲಂಬಿಸಿಲ್ಲ ಎಂದರು. ಅಂತೆಯೇ ಸಂಯುಕ್ತರಂಗದಲ್ಲಿ ಒಗ್ಗಟ್ಟಿದೆ ಎಂದೂ ಹೇಳಿದರು.

ವಾಜಪೇಯಿ, ಸೋನಿಯಾಗೆ ನಡುಕ.....

ಸಂಯುಕ್ತ ರಂಗದಲ್ಲಿ ನಾಲ್ಕು ಎಡಪಕ್ಷಗಳು, ನಾಲ್ಕು ಫೆಡರಲ್ ಪಕ್ಷಗಳಿವೆ. ಸಮಾಜವಾದಿ ಪಕ್ಷವಿದೆ, ಜನತಾದಳವಿದೆ. ಇದು ಸರಳ ವಿಷಯವೇನೂ ಅಲ್ಲ. ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ, ಕರ್ನಾಟಕ, ಆಂಧ್ರಪ್ರದೇಶ, ಅಸ್ಸಾಮ್‌ನ ಮುಖ್ಯಮಂತ್ರಿಗಳು ಇದರಲ್ಲಿದ್ದಾರೆ. ಮುಲಾಯಂ ಸಿಂಗ್ ಯಾದವ್‌ರಂಥ ಪ್ರಭಾವೀ ನಾಯಕರಿದ್ದಾರೆ. ಈ ರಂಗ ದೇಶದ ದೊಡ್ಡ ಜನವರ್ಗವನ್ನು ಪ್ರತಿನಿಧಿಸುತ್ತದೆ. ಈ ದೊಡ್ಡ ಪಡೆ ನಾಳೆ ಚುನಾವಣೆ ಕಣಕ್ಕೆ ಇಳಿಯಿತೆಂದರೆ ವಾಜಪೇಯಿ, ಸೋನಿಯಾ ಗಾಂಧಿ ಆದಿಯಾಗಿ ಎಲ್ಲಾ ವಿರೋಧಿಗಳಲ್ಲಿ ನಡುಕ ಹುಟ್ಟುವುದು ನಿಶ್ಚಿತ ಎಂದು ಪಿ.ಆರ್.ಸಿ. ಹೇಳಿದಾಗ ಪ್ರತಿನಿಧಿಗಳು ಭಾರೀ ಕರತಾಡನ ಮಾಡಿದರು.

ಸದ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬರಬಾರದು ಎನ್ನುವದೇ ಮುಖ್ಯ ಗುರಿ. ಯಾಕೆಂದರೆ ಬೂರ್ಜ್ವಾ-ಭೂಮಾಲಕ ವರ್ಗ ಬಿಕ್ಕಟ್ಟು ಎದುರಿಸುತ್ತಿರುವಾಗ ಅತ್ಯಂತ ಪ್ರತಿಗಾಮಿ ಪಕ್ಷ ಅಧಿಕಾರಕ್ಕೆ ಬಾರದಂತೆ ತಡೆಯುವುದು ಗುರಿಯಾಗಬೇಕು ಎನ್ನುವುದು ನಮ್ಮ ತಾತ್ವಿಕ ನಿಲುವು.

ಎಡ ಪಕ್ಷಗಳು ಇರುವ ರಂಗ ಅಧಿಕಾರಕ್ಕೆ ಬರಬಾರದೆಂಬ ಏಕೈಕ ಉದ್ದೇಶದಿಂದ ದೊಡ್ಡ ಬಂಡಾವಳಶಾಹಿಗಳು ಮತ್ತು ವಿದೇಶಿ ಕಂಪನಿಗಳು ಚುನಾವಣೆಗಳಿಗಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತವೆ. ಫಲಿತಾಂಶಗಳ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸುವುದಕ್ಕೆ ಅವು ಹಣವನ್ನು ನೀರಿನಂತೆ ಚೆಲ್ಲುತ್ತವೆ ಎಂದು ಪಿ.ಆರ್.ಸಿ. ಹೇಳಿದರು. ಉತ್ತರ ಪ್ರದೇಶದಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬರಲು ಅನುಕೂಲವಾದ ಶಾಸಕರ ಖರೀದಿಗೆ ಹಿಂದೂಜಾ, ನೂಸ್ಲಿವಾಡಿಯಾ ಮೊದಲಾದವರು ಕೋಟಿಗಟ್ಟಲೆ ರೂಪಾಯಿ ಸುರಿದಿದ್ದನ್ನು ಅವರು ಉದಾಹರಿಸಿದರು.

ಬಿ.ಜೆ.ಪಿ.ಯೇ ನಿಜವಾದ ಪರ್ಯಾಯ ಎನ್ನುವ ರೀತಿಯಲ್ಲಿ ಬಂಡವಾಳಶಾಹಿ ಮಾಲಿಕತ್ವದ ಪತ್ರಿಕೆಗಳು ಬಿಂಬಿಸುತ್ತಿವೆ. ಮತದಾರರ ಸಮೀಕ್ಷೆಗಳು ಇಂಥ ಪ್ರಚಾರದ ಒಂದು ರೀತಿಯಾಗಿದ್ದು ಅದಕ್ಕೆ ಯಾರೂ ಬಲಿಬೀಳಬಾರದು ಎಂದು ಪಕ್ಷದ ನಾಯಕರು ಹೇಳಿದರು.

ಲಕ್ಷಗಟ್ಟಲೆ ರೂಪಾಯಿಯಿದ್ದರೆ ಎಡ ಚಳುವಳಿ ಬಲಿಷ್ಠವಾಗಿರುವ ದಕ್ಷಿಣ ಕನ್ನಡ, ಕೋಲಾರ, ಮುಂತಾದೆಡೆ ನಾವು ಕೂಡ ಸಮೀಕ್ಷೆ ಮಾಡಿ ನಮಗೇ ಬೆಂಬಲ ಇದೆ ಎಂದು ಘೋಷಿಸಬಹುದು ಎಂದು ಹೇಳಿದಾಗ ಸಭಾಂಗಣದಲ್ಲಿ ನಗು ಉಕ್ಕಿ ಹರಿಯಿತು.

ನಾವು ಮಾತ್ರವೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದು ಎಂಬ ಭ್ರಮೆ ನಮಗಿಲ್ಲ ಎಂದು ಹೇಳಿದ ರಾಮಚಂದ್ರನ್ ಚುನಾವಣೆ ನಂತರದಲ್ಲೂ ಬಿಕ್ಕಟ್ಟು ಮುಂದುವರಿಯುತ್ತದೆ, ಇದರಿಂದ ಹೋರಾಟಗಳು ಮೂಡಿಬರಲಿವೆ ಎಂದರು.

ದೇಶ ಅನುಭವಿಸುತ್ತಿರುವ ಸಮಸ್ಯೆಗಳಿಗೆ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣವಾಗಿದ್ದು ಕಾರ್ಮಿಕ ವರ್ಗದ ಪಕ್ಷದಿಂದ ಮಾತ್ರವೇ ನಿಜವಾದ ಪರಿಹಾರ ಸಾಧ್ಯ ಎಂದು ಪಿ.ಆರ್.ಸಿ. ದೃಢವಾಗಿ ನುಡಿದರು.

ವರದಿ: **ವಿಶ್ವ**

ಬ್ರೆಡ್ ಚಳುವಳಿ .... ಅರ್ಧಕ್ರಾಂತಿ .... ಕ್ರಾಂತಿ

ರಾಜ್ಯ ಸಮ್ಮೇಳನದಲ್ಲಿ ಗಣನೀಯ ಸಂಖ್ಯೆಯಲ್ಲಿ ಮಹಿಳಾ ಪ್ರತಿನಿಧಿಗಳೂ ಹಾಜರಾಗಿದ್ದನ್ನು ಹಾಗೂ ಮೂವರು ಮಹಿಳೆಯರು ರಾಜ್ಯ ಸಮಿತಿ ಸದಸ್ಯರಾಗಿ ಆಯ್ಕೆಯಾದುದನ್ನು ಪ್ರಸ್ತಾಪಿಸಿದ ಪಿ.ಆರ್.ಸಿ. ಈ ಬಗ್ಗೆ ತಮ್ಮ ಸಂತೋಷ ವ್ಯಕ್ತಪಡಿಸಿದರು. ಹಾಗೂ ಪಕ್ಷದ ಕೇಂದ್ರ ಸಮಿತಿ ಮತ್ತು ಪಾಲಿಟಬ್ಯೂರೋ ನಿರ್ದೇಶದನ್ವಯ ಮಹಿಳಾ ಚಳುವಳಿಗೆ ಪ್ರಾಧಾನ್ಯತೆ ನೀಡಲಾಗುತ್ತಿರುವ ಸೂಚನೆ ಇದಾಗಿದೆ ಎಂದರು.

ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಬದಿಗಿಟ್ಟು ಕೇವಲ ಪುರುಷರನ್ನು ಇಟ್ಟುಕೊಂಡು ಅರ್ಧಕ್ರಾಂತಿ ಎಂಬುದನ್ನು ನಡೆಸಲಾಗದು ಎಂದು ಲೆನಿನ್ ಹೇಳಿದ್ದನ್ನು ಪಿಆರ್‌ಸಿ ಉದ್ಧರಿಸಿದರು.

ಇದೇ ಸಂದರ್ಭದಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿಯ ಕಿಡಿಯನ್ನು ಹೊತ್ತಿಸಿದ್ದು ಮಹಿಳೆಯರೇ ಎಂಬುದನ್ನು ಅವರು ನೆನಪಿಸಿದರು. ಬ್ರೆಡ್ ಮತ್ತು ಆಹಾರಕ್ಕಾಗಿ ರಷ್ಯಾದ ಮಹಿಳೆಯರು ಆರಂಭಿಸಿದ ಬೃಹತ್ ಚಳುವಳಿ ಅಕ್ಟೋಬರ್ ಕ್ರಾಂತಿಗೆ ಪ್ರೇರಣೆಯಾಯಿತು ಎಂದು ವಿವರಿಸಿದರು.

ಪಾಶ್ಚಾತ್ಯ ಸಂಸ್ಕೃತಿ

ಜ್ಯೋತಿಬಸು ಅವರನ್ನು ಮುಂದಿನ ಪ್ರಧಾನಿ ಎಂದು ಬಿಂಬಿಸುವ ಪ್ರಶ್ನೆಯ ಬಗ್ಗೆ ಹೇಳುತ್ತಾ ಕಾಂ|| ರಾಮಚಂದ್ರನ್ ಅವರು "ನಾವು ಧೋರಣೆಗಳ ಆಧಾರದಲ್ಲಿ ಹೋರಾಟ ನಡೆಸುವವರೇ ಹೊರತು ಯಾವುದೇ ವ್ಯಕ್ತಿಯನ್ನು ಮುಂದಿಟ್ಟುಕೊಂಡು ಕೆಲಸ ಮಾಡುವವರಲ್ಲ ನಿರ್ದಿಷ್ಟ ವ್ಯಕ್ತಿಯನ್ನು ಪ್ರಧಾನಿ ಎಂದು ಹೆಸರಿಸಿ ಪ್ರಚಾರ ಮಾಡುವುದು ಬಂಡವಾಳಶಾಹಿ ಪಾಶ್ಚಿಮಾತ್ಯ ಸಂಸ್ಕೃತಿಯಾಗಿದೆ" ಎಂದರು.

"ಗೆಲುವು ನಮ್ಮದು"

ಕೋಲಾರದಲ್ಲಿ ಮೂರು ದಿನಗಳ ಕಾಲ ದೇಶದ, ರಾಜ್ಯದ ಆಗು ಹೋಗುಗಳ ಬಗ್ಗೆ ಗಂಭೀರ ಚರ್ಚೆಗಳನ್ನು ನಡೆಸಿ ಹಲವು ನಿರ್ಣಯಗಳನ್ನು ಕೈಗೊಂಡ ಸಿ.ಪಿ.ಐ.(ಎಂ) 16ನೇ ರಾಜ್ಯ ಸಮ್ಮೇಳನ ಕೊನೆಗೊಂಡಿದ್ದು ಈ ಹಾಡನ್ನು ಸಾಮೂಹಿಕವಾಗಿ ಹಾಡುವುದರೊಂದಿಗೆ.

ವಿಶ್ವಾದ್ಯಂತ ಸಮಾನತೆಯ ಸಮಾಜ ರಚನೆಗೆ ಹೋರಾಡುತ್ತಿರುವ ಎಲ್ಲರ ನೆಚ್ಚಿನ ಈ ಹಾಡು (We Shall Overcome) ಕೇವಲ ಹಾಡಲ್ಲ. ಆದ್ದರಿಂದಲೇ "ಎಂದಿಗೂ ನಾವು ಒಂಟಿ ನಡೆಯುವ ಪಯಣಿಗರೇ ಅಲ್ಲ" ಎಂಬ ಹಾಡಿನ ಈ ಒಂದು ಸಾಲು ಕೂಡಾ ಅಷ್ಟೇ ಅರ್ಥಪೂರ್ಣ-ವಿಶೇಷವಾಗಿ ಈಗಿನ ಕಲುಷಿತ ವಾತಾವರಣದಲ್ಲಿ. ನಿಜವಾದ ಜನ-ಪರ ರಾಜಕಾರಣಕ್ಕಾಗಿ ದೇಶದ ಹೆಚ್ಚೆಚ್ಚು ಜನ ಸಿ.ಪಿ.ಐ.(ಎಂ)ನತ್ತ ನೋಡುತ್ತಿರುವ ಸಂದರ್ಭದಲ್ಲಿ-ಪ್ರಜಾಪ್ರಭುತ್ವವಾದಿ ಜನ ಸಮುದಾಯಗಳನ್ನು ಅಣಿನೆರೆಸಿ "ಗೆದ್ದೇಗೆಲ್ಲುವೆವು" ಎಂಬ ದೃಢ ವಿಶ್ವಾಸದೊಂದಿಗೆ ಸಮ್ಮೇಳನ ಕೊನೆಗೊಂಡಿತು.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27